ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 20 ಮೇ 15 2011 ರೂ. 5/- ಪುಟ 16

ಜಗದಗಲ ಹೊಸ ಹುರುಪು

ದುಡಿಯುವ ವರ್ಗದ ಮೇಲೆ ಧಾಳಿಗಳು: ಪ್ರತಿರೋಧಕ್ಕೆ ಕೆಂಬಾವುಟಗಳ ಕಹಳೆ



ತ್ಯಾಗ ಬಲಿದಾನಗಳ ಮೇದಿನ

ಪುರುಲಿಯಾ :

ಉತ್ತರ ಸಿಗಬೇಕಾಗಿರುವ ಹತ್ತಾರು ಪ್ರಶ್ನೆಗಳು



8



ಕರ್ನಾಟಕದಲ್ಲಿ ಪ್ರಪ್ರಥಮ ಆದಿವಾಸಿಗಳ ರಾಜ್ಯ ಸಮಾವೇಶ

2

ಬಡತನ ನಿರ್ಮೂಲನೆ ಚೀನಾ ಅನುಭವ



2

ದಕ್ಷಿಣ ಕನ್ನಡ :

ನಿವೇಶನಕ್ಕೆ ಆಗ್ರಹಿಸಿ ಬೀದಿಗಿಳಿದರೋ ಜನ

ಕೆರಗೋಡು :

ಬಹಿಷ್ಕಾರದ ವಿರುದ್ಧ ದಲಿತರ ದನಿ

ಜಾಗತಿಕ ಬಡತನ ನಿರ್ಮೂಲನೆಯಲ್ಲಿ ಸಮಾಜವಾದಿ ಚೀನಾದ ಪಾತ್ರ

ಜಿ.ಎಸ್.ಮಣಿ
– ಎಂ.ಕೆ.ಪಂಧೆಯವರ ಲೇಖನ ಆಧರಿಸಿ

ಅತ್ಯಂತ ವೇಗವಾದ ಬೆಳವಣಿಗೆಯನ್ನು ಸಾಧಿಸುತ್ತಿರುವ ಚೀನಾದಲ್ಲಿ ಆರ್ಥಿಕ ಅಸಮಾನತೆ ಮತ್ತು ಪ್ರಾದೇಶಿಕ ಅಸಮಾನತೆಗಳ ಸಮಸ್ಯೆ ತಲೆದೋರುತ್ತಿದ್ದರೂ ಕೂಡ ಒಟ್ಟಾರೆಯಾಗಿ ಜನಜೀವನ ಮಟ್ಟ ತ್ವರಿತವಾಗಿ ಏರುತ್ತಿದೆ. ಬಡತನ ತೀವ್ರವಾಗಿ ಇಳಿಯುತ್ತಿದೆ. ಈಗಲ್ಲಿ ಬಡವರಾಗಿ ಉಳಿದವರ್‍ಯಾರು? ಯಾಕೆ? ಓದಿ.

ಬಡತನದ ಮೂಲಕ್ಕೇ ಪೆಟ್ಟು ನೀಡುವಂತಹ ಮೂಲಭೂತ ಕ್ರಮಗಳನ್ನು ಕೈಗೊಳ್ಳುವ ಕೆಲಸ ಸಮಾಜವಾದಿ ಸಮಾಜದಲ್ಲಿ ಮಾತ್ರ ಸಾಧ್ಯವಾಗುವಂತಹದ್ದು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ರೀತಿಯ ಬಡತನದ ನಿರ್ಮೂಲನೆಯನ್ನು ಊಹಿಸಿಕೊಳ್ಳುವುದೂ ಅಸಾಧ್ಯ. ಯಾಕೆಂದರೆ ಬಡತನ ಬಂಡವಾಳಶಾಹಿ ವ್ಯವಸ್ಥೆಯ ಅವಿಭಾಜ್ಯ ಅಂಗ. ಭಾರತದಂತಹ ದೇಶದಲ್ಲಿ 'ಗರೀಬಿ ಹಟಾವೊ' ದಂತಹ ಕೂಗು ಚುನಾವಣಾ ಸಮಯದ ತಂತ್ರ ಮಾತ್ರ. ಬಡತನದ ಜೊತೆಗೇ ಬಾಲ ಕಾರ್ಮಿಕರ ಸಮಸ್ಯೆಯೂ ಅಷ್ಟೆ. ವ್ಯವಸ್ಥೆಯ ಅವಿಭಾಜ್ಯ ಅಂಗ. ಅಮೇರಿಕದಂತಹ ಅಭಿವೃದ್ಧಿ ಹೊಂದಿದ ದೇಶದಲ್ಲೂ ಬಡತನದ ತಾಂಡವ ಇಂದಿಗೂ ಸತ್ಯ. ಶತಮಾನದ ಗುರಿಯಾದ 2012 ರ ವೇಳೆಗೆ ಬಡತನವನ್ನು ಶೇ.50 ರಷ್ಟು ಇಳಿಸುವ ಮಾತು ಕನಸಾಗೆ ಉಳಿಯುವಂತೆ ಕಾಣುತ್ತದೆ.

2009 ರ 'ಹಸಿವಿ' ನ ವರದಿ ಜಗತ್ತಿನಾದ್ಯಂತ ಬಹು ದೊಡ್ಡ ಪ್ರಮಾಣದ ಜನ ಹಸಿವಿನಿಂದ ಬಳಲುತ್ತಿರುವುದನ್ನು ದಾಖಲಿಸಿದೆ. ಅಲ್ಲದೆ ಹೆಚ್ಚುತ್ತಿರುವ ಆಹಾರದ ಬೆಲೆಗಳು ಆಹಾರದ ಲಭ್ಯತೆಯನ್ನು ಕಡಿಮೆ ಮಾಡಿರುವುದನ್ನು ಕಳವಳದಿಂದ ದಾಖಲಿಸಿದೆ.


ವಿಶ್ವ ಸಂಸ್ಥೆಯ ವಿವಿಧ ಅಂತರಾಷ್ಟ್ರೀಯ ಸಂಸ್ಥೆಗಳು ಬಡತನ ನಿರ್ಮೂಲನೆಯ ಬಗೆಗೆ ಬಾಯಿಪಚಾರದ ಮಾತುಗಳನ್ನಾಡುತ್ತಿವೆ ಅಷ್ಟೆ. ಇಂದಿನ ಅಗಾಧ ಪ್ರಮಾಣದ ಬಡತನ ತಮಗೆ ಒಪ್ಪಿತವಲ್ಲವೆಂದು ಅವರು ಹೇಳುತ್ತಿದ್ದರೂ ಬಡವರಿಗೆ ಆಹಾರ ಪೂರೈಕೆಯಾಗದಿರುವ ಸನ್ನಿವೇಶವನ್ನೂ ಒಪ್ಪಿಕೊಳ್ಳುತ್ತಿವೆ. ಮಾನವ ಹಕ್ಕುಗಳ ಮೇಲಿನ ಸಾರ್ವತ್ರಿಕ ಘೋಷಣೆ ಮನುಷ್ಯನಿಗೆ ತನ್ನ ಮತ್ತು ತನ್ನ ಕುಟುಂಬದವರ ಅಭ್ಯುದಯಕ್ಕೆ ಬೇಕಾಗುವ ಆಹಾರ, ಬಟ್ಟೆ, ಆಶ್ರಯ ಮತ್ತು ವೈದ್ಯಕೀಯ ಸೇವೆಗಳಂತಹ ಅವಶ್ಯ ಸೇವೆಗಳ ಲಭ್ಯತೆಯ ಹಕ್ಕು ಇರಬೇಕೆಂದು ಘೋಷಿಸಿದೆ. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಮೇಲಿನ ಅಂತರಾಷ್ಟ್ರೀಯ ಸಂಹಿತೆಯೂ ಪ್ರತಿಯೊಬ್ಬ ಮಾನವನಿಗೂ ಒಂದು ಮಟ್ಟದ ಜೀವನ ನಡೆಸಲು ಬೇಕಾಗುವಷ್ಟು ಆಹಾರ, ಬಟ್ಟೆ, ಮನೆ ಮತ್ತು ಇತರ ಅವಶ್ಯ ಸೇವೆಗಳ ಹಕ್ಕುಗಳ ಬಗೆಗೆ ಮಾತನಾಡುತ್ತದೆ.

ವಿಯೆನ್ನಾದಲ್ಲಿ ಘೋಷಿಸಲ್ಪಟ್ಟ ಮತ್ತು ವಿಶ್ವ ಮಾನವ ಹಕ್ಕುಗಳ 1993 ರ ಘೋಷಣೆಯೂ ಈ ಹಕ್ಕುಗಳ ಮಾತನ್ನಾಡುತ್ತದೆ. ಈ ಹಕ್ಕುಗಳು ಸಾರ್ವತ್ರಿಕ, ಅವಿಚ್ಛಿನ್ನ ಮತ್ತು ಪರಸ್ಪರ ಸಂಬಂಧಿತ ಎಂದೂ ಅದು ಹೇಳಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 1992 ರ ನಿರ್ಧಾರದ ಪ್ರಕಾರ ದಿನಕ್ಕೆ ಒಂದು ಡಾಲರಿಗಿಂತ ಕಡಿಮೆ ಆದಾಯವಿರುವ ಜನಸಂಖ್ಯೆಯನ್ನು ಅರ್ಧದಷ್ಟು ಕಡಿಮೆ ಮಾಡಬೇಕು. ನಿರ್ದಿಷ್ಟವಾಗಿ ಹೇಳುವುದಾದರೆ 1970 ರಲ್ಲಿ 125 ಕೋಟಿಯಿದ್ದ ಬಡಜನರ ಸಂಖ್ಯೆಯನ್ನು 62.5 ಕೋಟಿಗೆ ಇಳಿಸಬೇಕು.

ವಿಶ್ವಬ್ಯಾಂಕಿನ ಪ್ರಕಾರ ದಿನಕ್ಕೆ 2 ಡಾಲರಿಗಿಂತ ಕಡಿಮೆ ಆದಾಯವಿರುವವರೆಲ್ಲ ಬಡವರು, ಒಂದು ಡಾಲರಿಗಿಂತ ಕಡಿಮೆ ಆದಾಯವಿರುವವರು ಬಡವಾತಿಬಡವರು. ವಿಶ್ವಬ್ಯಾಂಕಿನ 2008 ರ ವರದಿಯ ಪ್ರಕಾರ ಅತ್ಯಂತ ಬಡತನದಲ್ಲಿರುವವರ ಸಂಖ್ಯೆ 1990 ರಲ್ಲಿ 180 ಕೋಟಿಯಿದ್ದದ್ದು 2005 ರ ವೇಳೆಗೆ 140 ಕೋಟಿಗೆ ಇಳಿದಿದೆ. ಇಂತಹ ಇಳಿಕೆಗೆ ಮುಖ್ಯ ಕೊಡುಗೆ ಸಮಾಜವಾದಿ ಚೀನಾದ್ದು. ಆಫ್ರಿಕಾದ ದಕ್ಷಿಣ ಸಹಾರ ಪ್ರದೇಶದಲ್ಲಿ ಇದೇ ಸಮಯದಲ್ಲಿ ಬಡವರ ಸಂಖ್ಯೆ 10 ಕೋಟಿಯಷ್ಟು ಹೆಚ್ಚಿದೆ. ಇದಲ್ಲದೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ಬಡವಾತಿಬಡವರ ಸಂಖ್ಯೆ 55 ದಶಲಕ್ಷದಿಂದ 90 ದಶಲಕ್ಷದಷ್ಟಕ್ಕೆ ಏರಲಿದೆ.

ಸಮಾಜವಾದಿ ಚೀನಾದಲ್ಲಿ :

ಸಮಾಜವಾದಿ ಚೀನಾದಲ್ಲಿ ಬಡತನ ನಿರ್ಮೂಲನೆಯ ಕೆಲಸ ಕಳೆದ ಆರು ದಶಕಗಳಿಂದಲೂ ನಡೆದಿದೆ. ಸಾಂಸ್ಕೃತಿಕ ಕ್ರಾಂತಿಯ ಸಮಯದಲ್ಲಿ ಈ ಕೆಲಸದಲ್ಲಿ ಸ್ವಲ್ಪ ಮಂದಗತಿ ಬಂದದ್ದು ಬಿಟ್ಟರೆ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇವೆ. 1978ರ



ವೇಳೆಗೆ ಚೀನಾ ದೇಶದಲ್ಲಿ 25 ಕೋಟಿ ಬಡಜನರಿದ್ದರು. ಈ ಸಂಖ್ಯೆ ಈಗ ಬರೀ 4 ಕೋಟಿಗೆ ಇಳಿದಿದೆ ಎಂದರೆ ಚೀನಾದ ಪ್ರಯತ್ನಗಳ ಯಶಸ್ಸಿನ ಒಂದು ಚಿತ್ರಣ ನಮಗೆ ದೊರೆಯುತ್ತದೆ. 1980 ರಿಂದ 2010 ರವರೆಗಿನ ಅವಧಿಯಲ್ಲಿ ಚೀನಾದ ಜನರ ಜೀವನ ಮಟ್ಟ ಎಂಟು ಪಟ್ಟು ಹೆಚ್ಚಿದೆ. 1978 ಮತ್ತು 1986 ರ ಅವಧಿಯಲ್ಲಿ ಬಡತನದ ರೇಖೆಗಿಂತ ಕೆಳಗಿರುವವರ ಸಂಖ್ಯೆ 25 ಕೋಟಿಯಿಂದ 12 ಕೋಟಿಗೆ ಇಳಿಯಿತು. ಹಾಗೆಯೆ 1986 ರಿಂದ 1993 ಅವಧಿಯಲ್ಲಿ ಈ ಸಂಖ್ಯೆ 8 ಕೋಟಿಗೆ ಇಳಿದಿದೆ. ಅಂದರೆ ಪ್ರತಿ ವರ್ಷ 64 ಲಕ್ಷದಷ್ಟು ಜನರನ್ನು ಬಡತನದ ಪರಿಧಿಯಿಂದ ಹೊರತರಲಾಗಿದೆ.

1978ರ ನಂತರದ ಮೂರು ದಶಕಗಳಲ್ಲಿ 37 ಕೋಟಿ ಉದ್ಯೋಗಗಳನ್ನು ಸೃಷ್ಟಿಸಲಾಗಿದೆಯೆಂದರೆ ಈ ಪ್ರಯತ್ನದ ಅಗಾಧತೆಯ ಅರಿವಾದೀತು!!

ಒಂಬತ್ತು ವರ್ಷಗಳ ಶಿಕ್ಷಣವನ್ನು 2008 ರಲ್ಲಿ ಕಡ್ಡಾಯಗೊಳಿಸಲಾಗಿದೆ. ಪ್ರಾಥಮಿಕ ಮಟ್ಟದಲ್ಲಿ ನೊಂದಾವಣೆ ಶೇ. 99.5 ರಷ್ಟಾದರೆ ಮಧ್ಯಮ ತರಗತಿಗಳಿಗೆ ಶೇ.98.5 ರಷ್ಟು ನೊಂದಾವಣೆ ಇದೆ. ಜೀವನ ಅವಧಿ 73 ವರ್ಷಗಳಿಗೆ ಏರಿದೆ. ಇದಕ್ಕೆ ಮುಖ್ಯ ಕಾರಣ ಆರೋಗ್ಯ ಸೇವೆಗಳಲ್ಲಾದ ಸುಧಾರಣೆ.

ಬಡತನ : ಉಳಿದವರು ಯಾರು? ಯಾಕೆ?

ಚೀನಾ ಎದುರಿಸುತ್ತಿರುವ ಒಂದು ವಿಶಿಷ್ಟ ಸಮಸ್ಯೆಯೆಂದರೆ ಅಲ್ಲಿನ ಹಲವು ಅಲ್ಪ ಸಂಖ್ಯಾತ ಜನಾಂಗಗಳ ಸಮಸ್ಯೆ. ಈ ಜನಾಂಗಗಳು ಊಳಿಗಮಾನ್ಯ ಪದ್ಧತಿಯಿಂದ ಬಂದವರು. ಅಭಿವೃದ್ಧಿ ಬೇಡವೇಬೇಡ ಎನ್ನುವವರೂ ಇವರಲ್ಲಿದ್ದಾರೆ. ಭಾರತದ ಉತ್ತರ ಗಡಿಯಲ್ಲಿರುವ ಟಿಬೆಟ್ ಅಂತಹ ಒಂದು ಪ್ರದೇಶ. ದಲೈ ಲಾಮ ಅವರ ಪ್ರಭಾವದಡಿ ಇರುವ ಅವರು ಆರ್ಥಿಕ ಬೆಳವಣಿಗೆ ತಮ್ಮ ಸಂಸ್ಕೃತಿಯನ್ನು ಹಾಳುಗೆಡವುತ್ತದೆ ಎನ್ನುತ್ತಾರೆ. ಡಿಂಗ್ರಿ, ಗಾನ್ಸು, ನಿಂಗ್ಸಿಯಾ, ಯುನನ್, ಸಿಚುವಾನ್ ಇತ್ಯಾದಿ ಪ್ರದೇಶಗಳು ಇಂತಹ ಧೋರಣೆಯನ್ನು ಹೊಂದಿವೆ. ಒಟ್ಟಾರೆ ಚೀನಾದಲ್ಲಿ ಶೇ.4.8 ರಷ್ಟು ಬಡವರಿದ್ದರೆ ಈ ಪ್ರದೇಶಗಳಲ್ಲಿ ಶೇ.6.4 ರಷ್ಟು ಬಡವರಿದ್ದಾರೆ. 2007 ರಲ್ಲಿ 18.5 ಲಕ್ಷ ಜನ ವಿವಿಧ ನೈಸರ್ಗಿಕ ವಿಕೋಪಗಳಿಗೆ ಒಳಗಾಗಿ ಬಡತನದ ಬವಣೆಗೆ ಒಳಗಾಗಿದ್ದಾರೆ.

ಚೀನಾ ಈ ಪ್ರದೇಶಗಳಿಗೆ ವಿಶೇಷ ಕಾರ್ಯಕ್ರಮವನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಟಿಬೆಟ್ಟಿನಂತಹ ಪ್ರದೇಶಗಳಲ್ಲಿ ರಸ್ತೆ, ರೈಲು ಹಳಿ, ವಿಮಾನ ನಿಲ್ದಾಣಗಳನ್ನು ಅದು ಕಟ್ಟಿದೆ. ಇದರ ಲಾಭಗಳು ಮುಂಬರುವ ದಿನಗಳಲ್ಲಿ ಆಗಲಿದೆ. ಭಾರತದ ಮಾಧ್ಯಮಗಳು ಅಮೇರಿಕದ ಜೊತೆಗೂಡಿ ಟಿಬೆಟ್ಟಿನ ಅಭಿವೃದ್ಧಿಯಿಂದ ಭಾರತದ ರಕ್ಷಣೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆಂಬ ಕೂಗು ಎಬ್ಬಿಸುತ್ತಿವೆ!!

ಕೆಲವು ಅಲ್ಪಸಂಖ್ಯಾತ ಜನಾಂಗಗಳು ಸುಧಾರಣೆಯನ್ನು ವಿರೋಧಿಸುತ್ತಿದ್ದಾರೆ. ಉದಾಹರಣೆಗೆ ಟಿಬೆಟ್. ಟಿಬೆಟ್ಟಿನ ಜನ ದಲೈ ಲಾಮಾ ಅವರ ಪ್ರಭಾವದಿಂದಾಗಿ ಸುಧಾರಣೆಯನ್ನು ವಿರೋಧಿಸುತ್ತಿದ್ದಾರೆ. ಸುಧಾರಣೆಗಳಿಂದ ತಮ್ಮ ಸಂಸ್ಕೃತಿಯು ನಾಶವಾಗುತ್ತದೆಂದು ಅವರ ಅಂಬೋಣ. ಪರಿಣಾಮ: ಬಡತನ ಮತ್ತು ಹಿಂದುಳಿದಿರುವಿಕೆಯ ಮುಂದುವರಿಕೆ.

ಕ್ಸಿಂಜಿಯಾಂಗ್ ಪ್ರಾಂತದಲ್ಲಿ 16ಲಕ್ಷ ಚದರ

ಪುಟ 10 ಕ್ಕೆ

ಇದು ನಿಮಗೆ ಗೊತ್ತೆ?

ಅಮೇರಿಕವೇ

ಅಪಾಯಕಾರಿ ಸಮೂಹನಾಶಕ ಅಸ್ತ್ರಗಳನ್ನು ತಯಾರಿಸಿಕೊಂಡಿರುವ ಆರೋಪ ಹೊರಿಸಿ ಅಮೇರಿಕ, ಇರಾಕ್ ದೇಶದ ಮೇಲೆ ಯುದ್ಧ ಸಾರಿ ಇರಾಕನ್ನು ನಾಶ ಮಾಡಿತು. ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್‌ನನ್ನು ಕೊಂದಿತು.

ಇರಾಕ್‌ನಲ್ಲಿ ಸಮೂಹನಾಶಕ ಅಸ್ತ್ರ ಸಿಗಲಿಲ್ಲ.

ಆದರೆ ನಿಮಗೆ ಗೊತ್ತಿರಲಿ. ಈ ಸಮಸ್ತ ಭೂಮಿಯನ್ನು ಹತ್ತಾರು ಬಾರಿ ನಾಶ ಮಾಡುವಷ್ಟು ಅಣ್ವಸ್ತ್ರಗಳ ರಾಶಿಯನ್ನು ಅಮೇರಿಕ ತನ್ನಲ್ಲಿ ಪೇರಿಸಿಟ್ಟುಕೊಂಡಿದೆ. ಮತ್ತು ಮನುಕುಲದ ಇದುವರೆಗಿನ ಇತಿಹಾಸದಲ್ಲಿ ಮುಗ್ಧ ನಾಗರೀಕರ ಮೇಲೆ ಅಣ್ವಸ್ತ್ರವನ್ನು ಪ್ರಯೋಗಿಸಿ ಲಕ್ಷಾಂತರ ಜನಗಳ ಸಾಮೂಹಿಕ ಮಾರಣ ಹೋಮ ನಡೆಸಿರುವ ಜಗತ್ತಿನ ಏಕೈಕ ಶಕ್ತಿ ಅಮೇರಿಕ.

ಕರ್ನಾಟಕದಲ್ಲಿ ಪ್ರಥಮ ಆದಿವಾಸಿಗಳ ರಾಜ್ಯಮಟ್ಟದ ಬೃಹತ್ ಸಮಾವೇಶ

ಆದಿವಾಸಿ ಹಕ್ಕುಗಳಿಗಾಗಿ ಹೋರಾಟ : ಸಂಘಟಿತರಾಗಲು ನಿರ್ಧಾರ

ಇದೊಂದು ಮಹತ್ವದ ಹೆಜ್ಜೆ. ಕರ್ನಾಟಕ ಆದಿವಾಸಿಗಳ ಪ್ರಪ್ರಥಮ ರಾಜ್ಯ ಸಮಾವೇಶವು ಮೈಸೂರಿನಲ್ಲಿ ಅಭೂತಪೂರ್ವವಾಗಿ ನಡೆದಿದೆ. ಏಳುನೂರಕ್ಕೂ ಮೀರಿದ ಸಂಖ್ಯೆಯ ಏಳು ಜಿಲ್ಲೆಗಳಿಂದ ಬಂದು ನೆರೆದ ಆದಿವಾಸಿಗಳ ಸಮಾವೇಶದ ಯಶಸ್ಸಿನೊಂದಿಗೆ ಅವರು ಸಂಘಟಿತರಾಗುವ ಪ್ರಕ್ರಿಯೆಗೆ ಚಾಲನೆ ಸಿಕ್ಕಿದೆ.

ಆದಿವಾಸಿಗಳು ತಮ್ಮ ಹಕ್ಕುಗಳನ್ನು ಪಡೆಯಲು ತ್ರಿಪುರ ಮಾದರಿ ಸಂಘಟಿತರಾಗಿ ಪ್ರಬಲ ಹೋರಾಟ ನಡೆಸುವಂತೆ ಏಕೈಕ ಆದಿವಾಸಿ ಸಂಸದ ಬಾಬುಜಾನ್ ರಿಯಾಂಗ್ ಇಲ್ಲಿ ಕರೆ ನೀಡಿದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಏಪ್ರಿಲ್ 25 ರಂದು ಮೈಸೂರು ನಗರದ ಕಲಾಮಂದಿರದಲ್ಲಿ ಆಯೋಜಿಸಿದ್ದ ಆದಿವಾಸಿಗಳ ಪ್ರಥಮ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಇತರೆ ಕಡೆಗಳಿಗೆ ಹೋಲಿಸಿದರೆ ಆದಿವಾಸಿಗಳು ತ್ರಿಪುರದಲ್ಲಿ ಗರಿಷ್ಠ ಸೌಲಭ್ಯ ಪಡೆಯುತ್ತಿದ್ದಾರೆ. ಬೇಡಿಕೆಗಳ ಈಡೇರಿಕೆಗೆ ಸರ್ಕಾರದ ಮೇಲೆ ಪ್ರಬಲ ಒತ್ತಡ ತರುತ್ತಾರೆ. ಮುಖ್ಯವಾಹಿನಿಗೆ ಬಂದಿದ್ದಾರೆ. ಅದೆಷ್ಟೋ ಹಳ್ಳಿಗಳಲ್ಲಿ ಆದಿವಾಸಿಗಳು ಸ್ನಾತಕೋತ್ತರ ಪದವಿ ಪಡೆಯುತ್ತಿದ್ದಾರೆ. ತ್ರಿಪುರದಂತೆಯೇ ಕರ್ನಾಟಕ ಸೇರಿದಂತೆ ದೇಶಾದ್ಯಂತ ಹೋರಾಟದ ಅಗತ್ಯವಿದೆ. ಈ ಮೂಲಕ ಸರ್ಕಾರಗಳನ್ನು ಎಚ್ಚರಿಸುವ ಕೆಲಸ ಮಾಡಬೇಕಿದೆ ಎಂದು ಆದಿವಾಸಿ ಹಕ್ಕುಗಳ ರಾಷ್ಟ್ರೀಯ ವೇದಿಕೆ ಅಧ್ಯಕ್ಷರೂ ಆದ ರಿಯಾಂಗ್ ತಿಳಿಸಿದರು.

ಎಸ್.ಟಿ. ಎಂದು ಪರಿಗಣಿಸಿ... :



ದೇಶದ ಯಾವುದೇ ಭಾಗದ ಆದಿವಾಸಿಗಳನ್ನು ಪರಿಶಿಷ್ಟ ಪಂಗಡ ಎಂದು ಪರಿಗಣಿಸಿ ಮಾನ್ಯತೆ ಕಲ್ಪಿಸಬೇಕು. 2001 ರ ಜನಗಣತಿ ಪ್ರಕಾರ ದೇಶಾದ್ಯಂತ 9 ಕೋಟಿಗೂ ಅಧಿಕ ಆದಿವಾಸಿಗಳಿದ್ದಾರೆ. 700 ಕ್ಕೂ ಹೆಚ್ಚು ಪಂಗಡಗಳಿವೆ. ಈ ಪೈಕಿ ಕರ್ನಾಟಕದಲ್ಲಿ 50 ರಿಂದ 60 ಪಂಗಡಗಳಿವೆ. ಒಂದೊಂದು ಪಂಗಡಕ್ಕೂ ತನ್ನದೇ ಆದ ವೈವಿಧ್ಯಮಯ ಭಾಷೆ, ಸಂಸ್ಕೃತಿ ಇದೆ. ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೂ, ಆದಿವಾಸಿಗಳ ಭಾಷೆಯನ್ನು ಕೇಂದ್ರ ಅಥವಾ ರಾಜ್ಯ ಭಾಷೆಗಳ ಪಟ್ಟಿಯಲ್ಲಿ ಸೇರಿಸಿಲ್ಲ. ಮಣಿಪುರ, ಅಸ್ಸಾಂ, ತ್ರಿಪುರದಂತಹ ಕೆಲ ರಾಜ್ಯಗಳಲ್ಲಿ ಮಾತ್ರವೇ ಇದು ಸಾಧ್ಯವಾಗಿದೆ. ಈ ವಿಷಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದಿವ್ಯ ನಿರ್ಲಕ್ಷ್ಯ ತಾಳಿರುವುದು ಖಂಡನೀಯ. ಒಂದಲ್ಲ, ಎರಡಲ್ಲ, 700 ಸಮುದಾಯಗಳ ಭಾಷೆಗೆ ಮಾನ್ಯತೆ ದೊರೆಯದೆ ಇರುವುದು ವಿಷಾದನೀಯ ಎಂದರು.

ಆದಿವಾಸಿಗಳನ್ನು ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಅಭಿವೃದ್ಧಿಗೊಳಿಸಬಲ್ಲ ರಾಷ್ಟ್ರೀಯ ಆದಿವಾಸಿ ನೀತಿ ಇಲ್ಲ. ಗಿರಿಜನ ಕಲ್ಯಾಣ ಇಲಾಖೆಯಿಂದ ದೊಡ್ಡ ಮಟ್ಟದಲ್ಲಿ ಸಹಕಾರವೇನು ದೊರೆಯುತ್ತಿಲ್ಲ. ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಆದಿವಾಸಿ ಹಕ್ಕುಗಳ ಸಂರಕ್ಷಣೆಗೆ ಕೈಗೊಂಡ ಕ್ರಮ ಇನ್ನೂ ಜಾರಿಯಾಗಿಲ್ಲ ಎಂದು ತಿಳಿಸಿದರು.

'ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ 2006 ರ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಅರಣ್ಯವಾಸಿಗಳ ಕಾಯ್ದೆ ಜಾರಿಗೆ ಬಂದಿದ್ದರೂ ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಅದರ್ ರಯೋಜನ ಪಡೆಯಲು ಸಾಧ್ಯವಾಗಿಲ್ಲ. ಈ ಕಾಯ್ದೆ ಜಾರಿಗೆ ಬಂದು ಮೂರು ವರ್ಷ ಕಳೆದಿದ್ದು ಆದಿವಾಸಿಗಳಿಂದ ಬಂದಿರುವ 27,457 ಅರ್ಜಿಗಳಲ್ಲಿ 6522 ಪುರಸ್ಕಾರಗೊಂಡಿದ್ದು, 11,262 ಅರ್ಜಿಗಳು ತಿರಸ್ಕೃತಗೊಂಡಿವೆ. ಆದರೆ ತ್ರಿಪುರ ರಾಜ್ಯದಲ್ಲಿ ಈ ಕಾಯ್ದೆಯನ್ನು ಸಮರ್ಥವಾಗಿ ಅನುಷ್ಠಾನಗೊಳಿಸಲಾಗಿದೆ. ಆದಿವಾಸಿಗಳಾದ ನಮ್ಮನ್ನು ಇನ್ನೂ ಬಹುತೇಕ ಕಡೆಗಳಲ್ಲಿ ಅಸ್ಪೃಶ್ಯರಂತೆ ಕಾಣಲಾಗುತ್ತಿದೆ. ಹಸಿವಿನಿಂದ ಸಾಯುತ್ತಿರುವವರು ನಾವೇ. ದೌರ್ಜನ್ಯಕ್ಕೊಳಗಾಗುತ್ತಿರುವ ಮಹಿಳೆಯರು ನಮ್ಮವರು ಎಂದರು.

ಮೀಸಲಾತಿ ಕಲ್ಪಿಸುತ್ತಿಲ್ಲ:

ಆದಿವಾಸಿಗಳಿಗೆ ಕಾನೂನು ಪ್ರಕಾರ ಸಿಗಬೇಕಾದ ಮೀಸಲಾತಿ ದೊರೆಯುತ್ತಿಲ್ಲ. ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಉದ್ಯೋಗದಲ್ಲಿ ಶೇ.7 ರಷ್ಟು ಮೀಸಲಾತಿ ಕಲ್ಪಿಸಿಲ್ಲ. ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಕಲ್ಪಿಸಬೇಕು. ಆದರೆ, ಈ ಕೆಲಸವನ್ನು ಕರ್ನಾಟಕದ ಬಿಜೆಪಿ ಸರ್ಕಾರ ಸೇರಿದಂತೆ ಯಾವ ಸರ್ಕಾರವೂ ಕೈಗೊಳ್ಳುತ್ತಿಲ್ಲ. ಈ ವಿರುದ್ಧ ಹೋರಾಟ ಅಗತ್ಯ ಎಂದರು.

ಆದಿವಾಸಿಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ರೂಪಿಸಿರುವ ಅರಣ್ಯ ಹಕ್ಕು ಕಾಯ್ದೆಯನ್ನು

ಪುಟ 14 ಕ್ಕೆ

ಅತಂತ್ರರಾಗಲು ಸರ್ಕಾರ ಕಾರಣ

"ದೇಶದಲ್ಲಿ 9 ಕೋಟಿ, ಕರ್ನಾಟಕದಲ್ಲಿ 40 ಲಕ್ಷ ಆದಿವಾಸಿಗಳು ಇದ್ದಾರೆ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿರುವ ಆದಿವಾಸಿಗಳು ಇನ್ನೂ ಸಹ ಪ್ರಾಣಿ, ಪಕ್ಷಿಗಳಂತೆ ಅರಣ್ಯದಲ್ಲಿ ವಾಸ ಮಾಡುತ್ತಿದ್ದಾರೆ.

ಆದಿವಾಸಿಗಳು ಇಂದು ಅತಂತ್ರ ಸ್ಥಿತಿಗೆ ತಲುಪಿದ್ದಾರೆ. ಇದರ ವಿರುದ್ಧ ಚಳುವಳಿ ರೂಪಿಸಬೇಕಿದೆ. ಶೇ.7 ರಷ್ಟು ಹಣವನ್ನು ಆದಿವಾಸಿಗಳಿಗೆ ಮೀಸಲಿಡುವಲ್ಲಿ ರಾಜ್ಯ ಬಿಜೆಪಿ ಸರ್ಕಾರ ವಿಫಲವಾಗಿದೆ. ಮುಖ್ಯಮಂತ್ರಿ ಯಡಿಯೂರಪ್ಪ ಸೋತಿದ್ದಾರೆ."

- ಜಿ.ಸಿ.ಬಯ್ಯಾರೆಡ್ಡಿ,
ಪ್ರ. ಕಾರ್ಯದರ್ಶಿ, ಕರ್ನಾಟಕ ಪ್ರಾಂತ ರೈತ ಸಂಘ ಕಾರ್ಯದರ್ಶಿ

'ಆದಿವಾಸಿಗಳಿಗೆ ಕುತ್ತಾದ ಗಣಿ ಮಾಫಿಯಾ'

"ಅರಣ್ಯ ಪ್ರದೇಶಗಳಲ್ಲಿ ನಡೆಯುವ ಅಕ್ರಮ ಗಣಿಗಾರಿಕೆ ಮೂಲಕ ಸಂಪತ್ತು ಸಾಗಣೆಗೆ ಅರಣ್ಯಲಾಖೆ ಅಧಿಕಾರಿಗಳೇ ಮಧ್ಯವರ್ತಿಗಳಾಗಿದ್ದಾರೆ .

ಗಣಿ ಮಾಫಿಯಾ ಆದಿವಾಸಿಗಳನ್ನು ಅರಣ್ಯದಿಂದ ಒಕ್ಕಲೆಬ್ಬಿಸುತ್ತಿದೆ. ಅಭಿವೃದ್ಧಿ ಎನ್ನುವುದು ದು ಸ್ವಪ್ನದಂತಾಗಿದ್ದು, ಆದಿವಾಸಿಗಳು ಭಿಕ್ಷೆ ಮಾಡುವ ಸ್ಥಿತಿಗೆ ತಲುಪಿದ್ದಾರೆ.

ನಾಗರೀಕತೆ ಬೆಳೆದಂತೆಲ್ಲಾ, ಆದಿವಾಸಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಕಾಡನ್ನೇ ಮನೆಯಾಗಿ ಮಾಡಿಕೊಂಡಿದ್ದ ಆದಿವಾಸಿಗಳನ್ನು ಸ್ಥಳಾಂತರಗೊಳಿಸಿ, ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಕಾಯ್ದೆ ಮರು ತಿದ್ದುಪಡಿ ಅಗತ್ಯ.

ಆದಿವಾಸಿಗಳು ಕಾಡನ್ನು ದೇವಾಲಯ ಎಂಬಂತೆ ಪೂಜಿಸುತ್ತಾರೆ. ಮರಗಳಲ್ಲಿ ತಮ್ಮ ಪೂರ್ವಜರು ದೇವರಾಗಿದ್ದಾರೆ ಎಂದು ಭಾವಿಸುತ್ತಾರೆ. ನಾವು ಮನೆ ಕಟ್ಟಿದರೆ ಬಾಗಿಲಿಗೆ ಸಾಗವಾನಿಯೇ ಬೇಕು. ಮಂಚಕ್ಕೆ ತೇಗದ ಮರವೇ ಬೇಕು. ಆದರೆ, ಕಾಡಿನಲ್ಲಿಯೇ ಇರುವ ಆದಿವಾಸಿಗಳು ತಮ್ಮ ಗುಡಿಸಲಿಗೆ ಇಂತಹ ಮರಗಳನ್ನು ಹಾಕುವುದೇ ಇಲ್ಲ. ಹೀಗೆ ನೋಡಿದರೆ ನಾಗರಿಕರ್ಯಾರು, ಅನಾಗರಿಕರ್ಯಾರು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು."

- ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ
ಸಿದ್ಧತಾ ಸಮಿತಿ ಗೌರವಾಧ್ಯಕ್ಷರು

ಕಾರ್ಟೂನ್ ಕಾರ್ನರ್



ದೇವದುರ್ಗ : ಬರಬೀಸುವ ಬಿಸಿಲು ಹೋರಾಡಿ ಪಡೆದ ನೀರು

ದೋಆಬ್ ಪ್ರದೇಶವೆಂದು ಹೆಸುರುವಾಸಿಯಾದ ರಾಯಚೂರು ಜಿಲ್ಲೆಗೆ ಎರಡು ಜೀವ ನದಿಗಳಿವೆ. ತುಂಗಭದ್ರ ಮತ್ತು ಕೃಷ್ಣಾ ಕೃಷ್ಣಾ ಕಣಿವೆ ಯೋಜನೆಯ ಭಾಗವಾಗಿ ನಾರಾಯಣಪುರ ಆಣೆಕಟ್ಟೆಯಾಗಿ ಅದಕ್ಕೆ ಎಡ ಮತ್ತು ಬಲದಂಡೆಗಳಾಗಿ ಉತ್ಪಾದನೆ ಹೆಚ್ಚುವುದರ ಜೊತೆಗೆ ಸಮಸ್ಯೆಗಳು ಹೆಚ್ಚಾಗಿವೆ.

2-1ಲಕ್ಷ ಎಕರೆಗಳಿಗೆ ನೀರು ಕೊಡುವ ಉದ್ದೇಶದಿಂದ ಶುರುವಾದ ನಾರಾಯಣಪುರ ಬಲದಂಡೆಯಿಂದ ಇಲ್ಲಿಯವರಿಗೆ 80,000 ಎಕರೆಗಳಿಗೆ ಮಾತ್ರ ನೀರಾವರಿಯಾಗಿದೆ. ಉಳಿದಂತೆ ಇಂದು ನೀರು ಬಂದಾವು-ನಾಳೆ ನೀರು ಬಂದಾವು ಎಂದು ರೈತರು ಜಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಅವರ ಪಾಲಿಗೆ ನೀರು ಮರೀಚಿಕೆಯಾಗಿ ಮಳೆ ಬಂದರೆ ಬೆಳೆ ಇಲ್ಲವಾದರೆ ಬರ ಅಥವಾ ಬೆಂಗಳೂರಲ್ಲಿ ಕೂಲಿ ಕೆಲಸ ಎಂಬಂತಾಗಿದೆ.

ಇಂತಹ ಸ್ಥಿತಿಯಲ್ಲಿ ನೀರು ಕಂಡ ದೇವದುರ್ಗ ರೈತರ ಬವಣೆಗಳಿಗೆ ಕೊನೆಯೆ ಇಲ್ಲವೆಂಬಂತಾಗಿದೆ. ಬಲದಂಡೆಯ 9ನೇ ವಿತರಣಾ ಕಾಲುವೆಯಿಂದ ಹಿಡಿದು 18ನೇ ಕಾಲುವೆಗಳವರೆಗೆ ನೀರು ಬಳುಸುವ ರೈತರು ಕಷ್ಟಗಳ ಮೇಲೆ ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಕೆಲವೆ ತಿಂಗಳ ಕೆಳಗೆ ಕಳೆಪೆ ಬೀಜ ಮತ್ತು ಗೊಬ್ಬರದ ಕೊರತೆ ವಿರೋಧಿಸಿ ಹೋರಾಡಿದ ರೈತರು ಕಳೆದ ವರ್ಷ ನವಂಬರ್ 16ರಂದು ಭತ್ತಕ್ಕೆ ಬೆಂಬಲಿತ ಬೆಲೆಗಾಗಿ ಈ ಭಾಗದ ಮಹತ್ವದ ಹೋರಾಟವನ್ನು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಭತ್ತ ಬೆಳೆಗಾರರ ಹೋರಾಟ ಸಮಿತಿಗಳ ಮುಖಾಂತರ ಮಾಡಿದರು.



ಈಗ ನಾರಾಯಣಪುರ ಮತ್ತು ಆಲಮಟ್ಟಿ ಆಣೆಕಟ್ಟುಗಳಲ್ಲಿ ಸಾಕಷ್ಟು ನೀರಿನ ಸಂಗ್ರಹವಿದ್ದರೂ ನೀರು ಕಾಣದೆ ಸುಮಾರು 15 ರಿಂದ 20 ಕೋಟಿ ರೂಪಾಯಿಗಳ ಮೌಲ್ಯದ ಬೆಳೆ ಕಳಕೊಳ್ಳುವಂತಹ ದುಸ್ಥಿತಿ ಬಂದಿತ್ತು. ವಿತರಣಾ ಕಾಲುವೆ 1 ರಿಂದ ಹಿಡಿದು 18ರವರಿಗೆ ವ್ಯಾಪಕವಾಗಿ ಭತ್ತ ಹಾಕಲಾಗಿತ್ತು. ಈ ವರ್ಷ ಎರಡು ಆಣೆಕಟ್ಟೆಗಳಲ್ಲಿ ಸಾಕಷ್ಟು ನೀರಿನ ಸಂಗ್ರಹವಿರುವುದು ರೈತರಿಗೆ ಗೊತ್ತಾಗಿ ಕಳೆದ ವರ್ಷ ಭತ್ತಕ್ಕೆ ಉತ್ತಮ ಬೆಲೆ ಸಿಕ್ಕ ಕಾರಣ ರೈತರು ಭತ್ತ ಬೆಳೆಯನ್ನು ವ್ಯಾಪಕವಾಗಿ ಬೆಳೆದಿದ್ದರು. ಭತ್ತ ಕಾಳು ಕಟ್ಟಲು ಆರಂಭಿಸಿತ್ತು. ಇಂತಹ ಸಂದರ್ಭದಲ್ಲಿ 2 ವಾರದಿಂದ 3 ವಾರದವರಿಗೆ ಗದ್ದೆಗಳಲ್ಲಿ ನಿರಂತರವಾಗಿ ನೀರು ನಿಲ್ಲಿಸಿದರೆ ಮಾತ್ರ ಭತ್ತ ಸರಿಯಾದ ರೀತಿಯಲ್ಲಿ ಕಾಳು ಕಟ್ಟುತ್ತದೆ. ಅದರೆ ಇಂತಹ ಸಂದರ್ಭದಲ್ಲಿ ಎಪ್ರಿಲ್ 10ಕ್ಕೆ ನೀರು ನಿಲ್ಲಿಸುವುದಾಗಿ ಅಧಿಕಾರಿಗಳು ಘೋಷಿಸಿದ್ದು ರೈತರನ್ನು ಕಂಗೆಡಿಸಿತ್ತು.

ಇದನ್ನೆಲ್ಲಾ ಗಮನಿಸಿದ ಕರ್ನಾಟಕ ಪ್ರಾಂತ ರೈತ ಸಂಘವು ದೇವದುರ್ಗ ತಾಲೂಕ ಸಮಿತಿ ನೇತೃತ್ವದಲ್ಲಿ ಏಪ್ರಿಲ್ 8, 2011 ರಂದು ದೇವದುರ್ಗದ ಜಹಿರುದ್ದೀನ್ ಚೌಕಿನಲ್ಲಿ ಬೃಹತ್ ಪ್ರಮಾಣದಲ್ಲಿ ರಸ್ತಾರೋಖ ನಡೆಸಲು ಕರೆ ನೀಡಿತು. ಅಂದು ಬೃಹತ್ ಪ್ರಮಾಣದಲ್ಲಿ ನೆಡೆದ ಹೋರಾಟದಲ್ಲಿ ತಾಲೂಕ ಸಮಿತಿ ಮುಖಂಡರು ಮತ್ತು ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ ಭಾಗವಸಿದ್ದರು ಚಳುವಳಿ ನಿರತರನ್ನು ಉದ್ದೇಶಿಸಿ ಮಾರುತಿ ಮಾನ್ಪಡೆ ತಾಲೂಕಾಧ್ಯಕ್ಷ ಹನುಮನಗೌಡ ಮದರಕಲ್ ತಾಲೂಕಾ ಕಾರ್ಯದರ್ಶಿ ನರಸಣ್ಣ ನಾಯಕ ಮತ್ತು ಜೆ.ಡಿ(ಎಸ್)ಮುಖಂಡ ಜಗನಾಥರಾಯ ಪಾಟೀಲ್ ಮಾತನಾಡಿ ಎಪ್ರಿಲ್ 20 ರವರಿಗೆ ನೀರು ಬೀಡಲು ಒತ್ತಾಯಿಸಿದರು. ಮನವಿ ಸ್ವೀಕರಿಸಿದ ಕಾರ್ಯ ನಿರ್ವಾಹಕ ಅಭಿಯಂತರರಾದ ರಂಗರಾಮ ಎಪ್ರಿಲ್ 15ರವರಿಗೆ ನೀರು ಬಿಡುವುದಾಗಿ ಹೇಳಿದ ನಂತರ ಹೋರಾಟ ಮುಕ್ತಾಯಗೊಂಡಿತು.

ಕುಡಿಯುವ ನೀರಿನ ಹೆಸರಿನಲ್ಲಿ ಹತ್ತಾರು ಟಿ.ಎಂ.ಸಿ.ನೀರನ್ನು ಉಳಿಸಿಕೊಳ್ಳುವ ಅಧಿಕಾರಿಗಳು ಕೊಪ್ಪಳ ಭಾಗದ ಕೈಗಾರಿಕಾ ಮಾಲಿಕರ ಲಾಬಿಗೆ ಬಲಿಯಾಗಿ ಅವರಿಗೆ ನೀರು ಬಿಟ್ಟು ರೈತರಿಗೆ ಮೋಸ ಮಾಡಬಹುದೆಂಬ ಆತಂಕ ರೈತರಲ್ಲಿ ಮನೆ ಮಾಡಿತ್ತು. ಸುಮಾರು 42 ಡಿಗ್ರಿ ಕಡು ಬಿಸಿಲಿನಲ್ಲಿ ಬೆಂದು ಬೇಯುತ್ತಿರುವ ರೈತರನ್ನು ಈ ಕಡು ಬಿಸಿಲಿಗಿಂತ ಅಧಿಕಾರಿಗಳು ಮೋಸ ಕಾರ್ಖಾನೆಗಳ ಮಾಲಿಕರ ಲಾಬಿ, ಜನಪ್ರತಿನಿಧಿಗಳ ಹೇಡಿತನ ಕಾಲುವೆಗಳ ಕಳಪೆ ಕಾಮಗಾರಿ, ವ್ಯಪಾರಿಗಳ ಮೋಸ ಇವುಗಳೆ ಜಾಸ್ತಿ ಕಾಡುತ್ತವೆ. ಅಂತೂ ಈ ಹೋರಾಟದಿಂದ ಏಪ್ರಿಲ್ 20 ರವರೆಗೆ ನೀರು ದೊರಕಿ ರೈತರ ಬೆಳೆ ಈಗ ಕೈಗೆ ಬಂದಿದೆ. ಆದರೆ ಭತ್ತಕ್ಕೆ ಬೆಲೆ ಕುಸಿದಿದೆ. ಅದು ಮತ್ತೊಂದು ಬಗೆಯ ಸಮಸ್ಯೆ.

ವರದಿ : ಮಲ್ಲಯ್ಯ ಜಾಲಹಳ್ಳಿ

ಏಳನು ಯಡ್ಡ, ಕೇಳನು ಕಿವ್ಡ!

ಯಣ್ಣ ಬ್ರಹ್ಮಾಂಡ ನೋಡ್ದ?

ಏ.. ನ್ಯನ್ನೆ ಇನ್ನೂ ಚನ್ನಾಗಿದ್ದೆ, ಇವತ್ತೇನಾಯ್ತಣ್ಣ ನಿಂಗೆ?

ಯಾಕೆ? ಏನೋ ಕೇಳಿದ್ರೆ ನೀನೇನೋ ಕೇಳ್ತಿಯಲ್ಲಣ್ಣ?

ಅಲ್ಲ, ಈ ಬೂಮಿ, ಚಂದ್ರ, ಸೂರ್ಯ, ಗ್ರಹಗಳು, ನಕ್ಷತ್ರಗಳು ಯಲ್ಲ ಸೇರ್ಕಂಡು ಬ್ರಹ್ಮಾಂಡ ಅಂತರೆ. ಅದ ನೋಡಕೆ ಯಾರ್ ಕೈಲಾಯ್ತದೆ ಏಳು? ಅದ್ಕೆ ನಿಂಗೆ ಏನಾರ ಆಗಿದ್ದತೋ ಅಂತ ಕೇಳ್ದೆ

ಆ ಬ್ರಹ್ಮಾಂಡ ಅಲ್ಲ ಕಣಣ್ಣ. ಬ್ರಹ್ಮಾಂಡ ಅನ್ನ ಪೋಗ್ರಾಂ ಟೀವಿಲಿ ಬತ್ತದಲ, ಅದ್ರಲಿ ವಬ್ಬ ಬಂದು ಮಾತಾಡ್ತನೆ, ಅದ ಬ್ರಹ್ಮಾಂಡ ಅಂತಾರೆ. ಅದ ಯಲ್ರೂ ನೋಡ್ಬೇಕು, ಅಂತಂತ ಮಾತಾಡ್ತನೆ!

ಅಂತದೇನ್ ಮಾತಾಡ್ತನೆ?

ಏನೂ ಇಲ್ಲ, ಯಂಡ ಕುಡ್ದಾಗ ಜನ ಯಂಗ್ ಮಾತಾಡ್ತರೋ, ಅಂಗೆ ಮಾತಾಡ್ತನೆ, ಕೇಳಕೇನೋ ತಮಾಸಿಯಾಗಿರ್ತದೆ, ಆದ್ರೆ ಬಾಳ ಡೇಂಜರ್!

ಏನ್ ಮಾತಾಡ್ತನೆ ಏಳು ನೋಡನ

ನೋಡಿ, ಜ್ಞಾನ ಅನ್ನದು ಸುಮ್ಕೆ ಬರದಿಲ್ಲ, ಬಾಳ ಸಾದ್ನೆ ಮಾಡ್ಬೇಕು. ನನ್ನೇ ನೋಡಿ, ನಾನು ತುಂಬಾ ಸಾದ್ನೆ ಮಾಡಿ ಜ್ಞಾನ ಪಡ್ಕಂಡಿದಿನಿ, ನಂಗೆ ಬಂದಿರೋ ಜ್ಞಾನ ಯಾರಿಗೂ ದಕ್ಕಿಲ್ಲ ಅಂತನೆ, ಇದ್ಕೇನಂತಿಯ?

ಅಂಗಾರೆ ನೀನೇಳದು ಸರಿ ಬುಡು, ಅವುಂಗೆ ತಲೆ ಕೆಟ್ಟದೆ ಅನುಸ್ತದೆ. ಯಾಕೇಂದ್ರೆ ಮರ್ಕಿಂತ ಮರ ಡೊಡ್ಡಿರ್ತದೆ, ಅಂತದ್ರಲಿ ನಾನ್ವಬ್ನೇ ಜ್ಞಾನಿ ಅಂದ್ರೆ ಅವುಂಗಿಂತ ಅಜ್ಞಾನಿ ಯಾರೂ ಇಲ್ಲ ಅನುಸ್ತದೆ.

ಅಷ್ಟೇ ಅಲ್ಲ ಕಣಣ್ಣ, ಅವುನ್ನ ನೋಡಿದ್ರೆ ಜ್ಞಾನಿ ಅನ್ಸದಿಲ್ಲ, ವಳ್ಳೆ ಓಟ್ಟು ಬಟ್ಟ ಇದ್ದಂಗವ್ನೆ, ಆನೆ ಮರಿ ತರ ಕೂತ್ಕಂಡು ಬಾಯಿಗ್ ಬಂದಂಗೆ ವದುರ್ತ ಇರ್ತನೆ, ಇವುಂಗೆ ಆ ಟಿವಿ ನವ್ರು ಯಾಕ್ ಮಡಿಕಂಡವ್ರೋ ನಂಗಂತೂ ಗೊತ್ತಾಯ್ತ ಇಲ್ವಪ್ಪ.

ಕ್ಯಾತೆ

ಈ. ಬಸವರಾಜು
ಮಲ್ಲೇನಹಳ್ಳಿ

ಇನ್ನೇನ್ ಅಂತನೆ?

ಯಂಡ ಕುಡಿರಿ, ಆದ್ರೆ ಸಲ್ಪ ಕುಡಿರಿ ಅಂತನೆ. ಅವು ಏಕಾಂತದಲ್ಲಿ ಇದ್ದಾರೆ ಅಂತ ಅವ್ರ ಸ್ವಾಮಿಗೋಳು ನಿದ್ದೆ ವಡೀತಾ ಇರ್ತರೆ ಇಲ್ಲ ಇರ್ತರೆ ಅಂತ ಏಳ್ತನಪ್ಪ.

ಸ್ವಾಮಿಗಳ್ನ ನೋಡಕೋಯ್ತಿರಲ, ಶಿಷ್ಯರು ಹೇಳ್ತರೆ. ಆದ್ರೆ ವಳ್ಗೆ ಅಂದ್ರೆ ಗೋಡಂಬಿ ದ್ರಾಕ್ಷಿ ತಿಂತಾ

ಅವ್ನ ಏಳದ್ನ ಯಾರೂ ಸ್ವಾಮಿಗೋಳು ಕೇಳಿಸ್ಕಂಡಿಲ್ವೆ?

ಕೇಳಿಸ್ಕಂಡಿರ್ತರೆ, ಆದ್ರೆ ಇವ್ನ ಸ್ವಲ್ಪ ಅವ್ರ ಕಡೇವ್ನಲ್ವೆ, ಕರ್ದು ಅಂಗ್ಯಲ್ಲ ಏಳ್‌ಬ್ಯಾಡ ಕಣಪ್ಪ ಅಂತ ಏಳ್ ಬೌದು.

ಯಲ್ರೂ ಸರಿ ಇಲ್ಲ ಅಂದ್ ಮ್ಯಾಲೆ ಅವ್ನ ಸರಿ ಅವ್ನಂತೋ?

ಊ ಕಣಣ್ಣ, ನಾನೇ ಸರಿ ಅಂತ ಕುಂತವ್ನೆ ಬೂಪತಿ! ಯಂಗುಸ್ರುನ್ನ ರಂಡೇರು, ಮುಂಡೇರು ಅಂತನೆ, ಯಾರಾರ ಪೋನ್ ನಲ್ಲಿ ಮಾತಾಡ್ತಾ ಇದ್ರೆ ಕೇಳಮ್ಮ ಇಲ್ಲಿ ಅಂತ ಏಕ ವಚನದಲ್ಲಿ ಮಾತಾಡುಸ್ತನೆ, ಯಾರ್ನೂ ಲ್ಯಕ್ಕಕ್ಕೇ ಇಟ್ಕಂಡಿಲ್ಲ.

ಮತ್ತೆ ಟಿ.ವಿ ನವ್ರು ಯಂಗ್ ಲ್ಯಕ್ಕುಕ್ಕಿಟ್ಕಂಡವ್ರೆ?

ಯಂಗೆ ಅಂದ್ರೆ ಅವ್ನ ಪೋಗ್ರಾಂ ನ ಮನೇಲಿರ ಯಂಗುಸ್ರು ಜಾಸ್ತಿ ನೋಡ್ತರೆ ಅಂತ ಟಿ.ವಿನವ್ರಿಗೆ ಗೊತ್ತಾಗ್ಯದಂತೆ. ಇವ್ನ ಆ ಪೂಜೆ ಮಾಡಿ, ಈ ಪೂಜೆ ಮಾಡಿ ವಳ್ಳೇದಾಯ್ತದೆ ಅಂತ ಏಳ್ತಿರ್ತನಂತೆ. ಅದ್ರಿಂದ ಟಿ.ವಿ. ನವ್ರಿಗೆ ವಳ್ಳೆ ಅಡ್ವಿಟೇಜ್ ಸಿಕ್ತದಂತೆ. ಅದ್ಕೆ ನಡ್ಯತಕ ನಡಿಲಿ ಅಂತ ಇವ್ನ ಪೋಗ್ರಾಂ ಕೊಡ್ತಾ ಅವ್ರೆ.

ಅವ್ರಿಗೆ ದುಡ್ ಸಿಕ್ತಾ ಅದೆ ಅಂತವ ಇಂತನ್ನ ಕರ್ಕಂಡ್ ಬಂದು ಪೋಗ್ರಾಂ ಕೊಡ್ಸರು ಅದ್ಯಂತರಪ್ಪ, ನಾಚ್ಗೆ ಅನುಸ್ತದೆ.

ನೀನು ನಾಚ್ಗೆ ಅಂತಿಯ. ಆದ್ರೆ ಕ್ಯಲುವ್ರು ಅವ್ನ ಏಳಿದ್ನೇ ಮಾಡ್ತಾ ಕುಂತವ್ರೆ?

ಏನ್ ಮಾಡ್ಯವ್ರೆ?

ಬೂಕಂಪ ಆಯ್ತದೆ, ಜನ ಸಾಯ್ತರೆ, ಅದ್ಕೆ ಯಲ್ಲ ಮನೆ ಮುಂದೆ, ದೇವುಸ್ತಾನ್ ದಲಿ ದೀಪ ಅಚ್ಚಿ ಅಂದ. ಸುಮಾರ್ ಜನ ಯದ್ರಿಕಂಡು ಅಚ್ಚಿದ್ರು.

ಅಲ್ಲ ಬೂಕಂಪ ಆಗದ ಯಾರ್ ಕೈಲೂ ನಿಲ್ಸಕಾಗದಿಲ್ವಂತೆ, ದೀಪ ಅಚ್ಚಿದ್ರೆ ಅದ್ಯಂಗ್ ನಿಂತತು? ಅವ್ನೇನೋ ಏಳ್ದ ಅಂದ್ರೆ ಈ ಕೇಳ್ದರು ಯಂತರು?

ಅದೇ ಏಳ್ತಿವಲ್ಲಣ್ಣ, ಏಳನು ಯಡ್ಡ, ಕೇಳನು ಕಿವ್ಡ ಅಂತವ, ಅಂಗಾಗ್ಯದೆ ಪರಿಸಿತಿ.

ಮುಂದೇನ್ ಮಾಡ್ತನಂತೆ?

ಮುಂದೆ ಪ್ರಪಂಚ ಪ್ರಳಯ ಆಗಿ ನಾಸ್ವಗೋಯ್ತದೆ, ಅದ ಕಾಪಾಡಕೆ ನಾನ್ವಬ್ನೆ ಇರನು, ಒಂದು ದ್ವಡ್ಡ ಯಜ್ಞ ಮಾಡ್ತಿನಿ, ಅದ್ರಿಂದ ಪ್ರಪಂಚಕ್ಕೆ ವಳ್ಳೇದಾಯ್ತದೆ, ಈ ಬೂಮಿಯ ಉಳುಸ್ತಿನಿ, ನೀವ್ಯಲ್ಲ ನಾನೇಳಿದಂಗೆ ಕೇಳಿ ಅಂತ ಏಳ್ತಾ ಅವ್ನೆ.

ಯಣ್ಣ, ಇದ್ಯಲ್ಲಾನು ಕೇಳಿದ್ರೆ ಅವ್ನ ವಬ್ಬ ಬುಂಡೆ ದಾಸ ಅನುಸ್ತದೆ, ಅವ್ನ ಏಳಿದ್ದ ಕೇಳಿಸ್ಕಂಡು ನಾವು ಇಷ್ಟತ್ತೂ ಮಾತಾಡಿದ್ವಲ್ಲ, ಅದೇ ತಪ್ಪು ಅನುಸ್ತದೆ, ನಡಿ ವಲುದ್ ಕಡಿಕೋಗನ.

ಜನಶಕ್ತಿ
ಕನ್ನಡ ವಾರಪತ್ರಿಕೆ

ದಲಿತರು ನಿಕೃಷ್ಟ ಕೆಲಸವನ್ನೇ ಮಾಡಿಕೊಂಡಿರಬೇಕೆಂದು ನಿರೀಕ್ಷಿಸಲಾಗುತ್ತದೆ. ನಿರಾಕರಿಸಿದರೆ ದೌರ್ಜನ್ಯ, ದಬ್ಬಾಳಿಕೆ... ಇಂತಹ ಸಂದರ್ಭದಲ್ಲಿ ಹಾಸನ ಜಿಲ್ಲೆಯ ಕೆರಗೋಡಿಗೆ ಬಂದ ಬಿಜೆಪಿ ಸಚಿವರುಗಳು ಹೇಳಿದ್ದೇನು?... ಓದಿ.

ಕೆರಗೋಡು

ಬಹಿಷ್ಕಾರದ ವಿರುದ್ಧ ದಲಿತರ ದನಿ

ಶಿಥ*]JSL, A@O*

ಒಂದೆರಡು ಕ್ಷಣ ಉಸಿರನ್ನು ಬಿಗಿಹಿಡಿದು ನೀಳವಾಗಿ ನಿಟ್ಟುಸಿರನ್ನು ಬಿಡುವಂತಹ ಪರಿಸ್ಥಿತಿ ನೂರಿಪ್ಪತ್ತು ಕರ್ಮಠ ಜಾತಿವಾದಿ ಮಠಗಳಲ್ಲದೇ ಈಗ ಅಧಿಕಾರಸ್ಥರ ಬೆಂಬಲವೂ ಇರುವ ಸವರ್ಣೀಯರನ್ನು ಎದುರು ಹಾಕಿಕೊಂಡು ಸ್ವಾಭಿಮಾನವ ಗೆಲ್ಲಿಸಿಕೊಂಡ ಏಳು ದಲಿತ ಕುಟುಂಬಗಳ ಯಶೋಗಾಥೆ ಇದು. ಸಿಪಿಐ(ಎಂ)ನ ಸಮರ್ಪಕ ಮಧ್ಯಪ್ರವೇಶದಿಂದ ಅಷ್ಟೂ ದಲಿತ ಕುಟುಂಬಗಳು ಸ್ವಾಭಿಮಾನದಿಂದ ತಲೆ ಎತ್ತುವಂಥಾಗಿದ್ದು, ನಿಸ್ತೇಜಗೊಂಡಿದ್ದ ಅವರ ಕಣ್ಣುಗಳಲ್ಲಿ ಈಗ ಅವರ್ಣನೀಯ ಕಾಂತಿ.

ಈ ಅಮಾನವೀಯ, ನಾಗರೀಕ ಸಮಾಜ ತಲೆ ತಗ್ಗಿಸಿ ಛೀ ಎನ್ನುವ ಗುಪ್ತ ಬಹಿಷ್ಕಾರ ಪ್ರಕರಣ ನಡೆದಿರುವುದು ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ರಾಮನಾಥಪುರ ಹೋಬಳಿಯ ಕೆರಗೋಡು ಗ್ರಾಮದಲ್ಲಿ. ಕುಲವಾಡಿಕೆ ಮಾಡುವುದು. ಸತ್ತ ಪ್ರಾಣಿಗಳನ್ನು ಊರಿನ ಹೊರಗೆ ಎಳೆದು ಹಾಕುವುದು, ಶವಗಳನ್ನು ಹೂಳಲು ಗುಂಡಿ ತೋಡುವುದು ಇಲ್ಲಿ ದಲಿತರ 'ಪವಿತ್ರ' ಕಾರ್ಯಗಳು. ಸಮಾಧಿ ತೆಗೆಯಲು ಕೂಲಿ ಒಂದುಕಾಲು ರೂ. ಮಾತ್ರ ಪಡೆಯಬೇಕು ಎನ್ನುವ ನಿರ್ಬಂಧ ಬೇರೆ. ಊರಿನ ಕೆರೆಯನ್ನು ಇಬ್ಭಾಗ ಮಾಡಿ ಮೇಲ್ಜಾತಿಯವರು ಬಟ್ಟೆ ತೊಳೆದ ನಂತರ ದಲಿತ ಹೆಣ್ಣುಮಕ್ಕಳು ಬಟ್ಟೆ ತೊಳೆಯಬೇಕು. ಮೇಲ್ಜಾತಿಯವರು ದನಕರುಗಳನ್ನು ತೊಳೆಯುವವರೆಗೂ ಕಾದಿದ್ದು ನಂತರ ಯಾತಕ್ಕಾದರೂ ಆ ಕೆರೆಯ ನೀರನ್ನು ಬಳಸಬೇಕು ಎನ್ನುವ ಜಾತಿ ಪಂಚಾಯ್ತಿ ನಿರ್ಣಯ ಇವೆಲ್ಲವನ್ನೂ ಧಿಕ್ಕರಿಸಿ ನಿಂತ ದಲಿತ ಕುಟುಂಬಗಳಿಗೆ ಸಾಥ್ ನೀಡಿದ್ದು ಸಿಪಿಐ(ಎಂ).

ಪ್ರಕರಣದ ಹಿನ್ನೆಲೆ

2010 ರ ದೀಪಾವಳಿಯ ಸಂಭ್ರಮದಲ್ಲಿ ಇಡೀ ದೇಶವೇ ತೇಲುತ್ತಿದ್ದರೆ ಕೆರಗೋಡಿನ ದಲಿತ ಕುಟುಂಬಗಳ ಪಾಲಿಗೆ ದೀಪಾವಳಿ ಅಮವಾಸ್ಯೆಯ ಕಾರ್ಗತ್ತಲ ಕಠಾಳತೆ. ಅಂದು ತಮಗೆ ಪ್ರವೇಶವಿಲ್ಲದ ಬಸವೇಶ್ವರ ದೇವಾಲಯದ ಹೊರ ಆವರಣವನ್ನು ಸ್ವಚ್ಛಗೊಳಿಸಲು ಸವರ್ಣೀಯರು ಸೂಚಿಸಿದರು. ಹಿಂದಿನಿಂದಲೂ ಇದನ್ನು ಮಾಡಿಕೊಂಡು ಬರುತ್ತಿದ್ದ ಬಸವರಾಜು ಎಂಬಾತ ಅದನ್ನು ನಿರಾಕರಿಸಿದ್ದಾರೆ. ಇದು ಲಿಂಗಾಯಿತರ ಅಹಂಗೆ ಬಿದ್ದ ಪೆಟ್ಟು ಎಂಬುದಾಗಿ ಭಾವಿಸಿ ಬಸವರಾಜು ಅವರನ್ನು ಯಾರೂ ಮಾತನಾಡಿಸಬಾರದೆಂದು ಆ ಗ್ರಾಮದ ನವೋದಯ ಸಂಘ ಎಂಬ ಖಾಸ್ ಪಂಚಾಯತಿ ಎಲ್ಲರಿಗೂ ಸೂಚಿಸಿದೆ. ಅದರಂತೆ ಬಸವರಾಜು ಅವರನ್ನು ಊರಿನ ಲಿಂಗಾಯಿತರು ಹಾಗೂ ಬಸವರಾಜು ಅವರ ದಾಯಾದಿಗಳೂ ಮಾತನಾಡಿಸಲು ಹಿಂಜರಿದರು. ಪುಗಸಟ್ಟೆ ಚಾಕರಿ ಮಾಡಲು ನಿರಾಕರಿಸಿದ ಬಸವರಾಜನನ್ನು ಹೇಗಾದರೂ ಮಾಡಿ ಪಂಚಾಯಿತಿಗೆ ಕರೆದು ಹಣಿಯಬೇಕು ಎಂದು ತೀರ್ಮಾನಿಸಿ ಬಿದ್ದುಹೋಗಿರುವ ತನ್ನ ಮನೆಯನ್ನು ಕಟ್ಟಿಕೊಳ್ಳಲು ತಂದುಹಾಕಿದ್ದ ಸೈಜುಗಲ್ಲು, ಇಟ್ಟಿಗೆಗಳನ್ನು ರಾತ್ರೋರಾತ್ರಿ ತೆಗೆದುಕೊಂಡು ಹಾಕಿಕೊಂಡಿದ್ದಾರೆ. ಇದನ್ನು ಪ್ರಶ್ನಿಸಿದ ಬಸವರಾಜು ಮೇಲೆ ದೈಹಿಕ ಹಲ್ಲೆಯನ್ನೂ ಮಾಡಲಾಗಿದೆ. ಇದಾಗಿ ಸುಮಾರು 3 ತಿಂಗಳು ನಡೆದಿದೆ. ಈ ನಡುವೆ ಇವರ ದಾಯಾದಿಗಳಾದ ಸಣ್ಣ ಈರಯ್ಯ, ರಾಮಯ್ಯ, ದ್ಯಾವಯ್ಯ ಮುಂತಾದವರನ್ನು ಪುಸಲಾಯಿಸಿ ಬಸವರಾಜು ಅವರನ್ನು ಪಂಚಾಯಿತಿಗೆ ಕರೆದು ಬಹಿಷ್ಕಾರ ಹಾಕುವುದಾಗಿ ಹಾಗೂ ಅವರ ಜಮೀನನ್ನು ಉಳಿದವರಿಗೆ ಹಂಚಿಕೊಡುವುದಾಗಿ ಹೇಳಿದ್ದಾರೆ. ಇದಕ್ಕೆ ಈ ಮೂರೂ ಕುಟುಂಬಗಳು ಒಪ್ಪಿದ್ದಲ್ಲದೆ ಇದನ್ನು ಜಾರಿಗೊಳಿಸಲು ಹೊರಟಿದ್ದಾರೆ.

ಇದನ್ನು ತಿಳಿದ ಎಸ್‌ಎಫ್‌ಐನ ಜಿಲ್ಲಾ ಉಪಾಧ್ಯಕ್ಷ ಹಾಗೂ ಸಣ್ಣ ಈರಯ್ಯನ ಮಗ ಹಾಸನದಲ್ಲಿ ಕನ್ನಡ ಎಂ.ಎ. ಮಾಡುತ್ತಿರುವ ಕೆ.ಎಸ್.ಮಂಜುನಾಥ ದಲಿತ ಕುಟುಂಬಗಳಿಗೆ ತಿಳಿಹೇಳಿ ಬಸವರಾಜು ಅವರನ್ನು ಮಾತನಾಡಿಸುವಂತೆ, ಜಾತಿ ಪಂಚಾಯ್ತಿ ತೀರ್ಮಾನಕ್ಕೆ ಬೆಲೆ ನೀಡದಂತೆ ಧೈರ್ಯ ತುಂಬಿದ್ದಾರೆ. ಅಲ್ಲದೆ ಒಂದು ಸಂಘ ಕಟ್ಟಿಕೊಳ್ಳಲು ಪ್ರೇರೇಪಿಸಿದ್ದಾರೆ. ಇದನ್ನು ತಿಳಿದ ಲಿಂಗಾಯಿತರು ಸಣ್ಣ ಈರಯ್ಯ, ರಾಮಯ್ಯ, ದ್ಯಾವಯ್ಯ ಎಂಬುವವರಿಗೆ ತಲಾ 50 ರೂ. ದಂಡ ವಿಧಿಸಿದ್ದಾರೆ. ಅಲ್ಲದೆ ಲಿಂಗಾಯಿತರಿಗೆ ಯಾವ ದಲಿತ ಕುಟುಂಬಗಳನ್ನು ಮಾತನಾಡಿಸದಂತೆ ಸೂಚಿಸಿದ್ದಾರೆ.

ಒಡೆದು ಹಾಕುವ ಹುನ್ನಾರ



ಒಂಭತ್ತು ಕುಟುಂಬಗಳು ಇರುವ ಈ ದಲಿತರಲ್ಲಿ ಎರಡು ಕುಟುಂಬಗಳು ಲಿಂಗಾಯಿತರ ಮರ್ಜಿಗೆ ಒಳಗಾಗಿವೆ. ಅದರಲ್ಲಿ ಒಂದಷ್ಟು ರಾಜಕೀಯ ಮಾಡುತ್ತಾ ಓಡಾಡಿಕೊಂಡಿದ್ದ – ಅಷ್ಟು ಕುಟುಂಬಗಳಿಗೆ ಮಾರ್ಗದರ್ಶನ ಮಾಡುತ್ತಿದ್ದ ಲಕ್ಷ್ಮಯ್ಯ ಎಂಬಾತನನ್ನು ಹಾಗೂ ವಾಸು ಎಂಬಾತನನ್ನು ತಮ್ಮ ಕಡೆಗೆ ಸೆಳೆದುಕೊಂಡ ಲಿಂಗಾಯಿತರು ಹೊರಲೋಕಕ್ಕೆ ಗುರಾಣಿಯನ್ನಾಗಿ ಬಳಸಿಕೊಳ್ಳಲು ಆರಂಭಿಸಿದರು. ಜಾತಿ ಪಂಚಾಯ್ತಿಯಂತೆ ಕೆಲಸ ಮಾಡುತ್ತಿರುವ ರೈತಸಂಘದ ಬುದ್ಧಿಜೀವಿ, ಮೈಸೂರು ವಿ.ವಿ.ಯ ಪ್ರಾಧ್ಯಾಪಕ ಪ್ರೊ. ಕೆ.ಸಿ.ಬಸವರಾಜು ನೇತೃತ್ವದ ನವೋದಯ ಯುವಕ ಸಂಘ ನಡೆಸುತ್ತಿರುವ ಮಹಾತ್ಮಗಾಂಧಿ ಪ್ರೌಢಶಾಲೆಯಲ್ಲಿ ಇದೇ ಲಕ್ಷ್ಮಯ್ಯ ಸದಸ್ಯ ಹಾಗೂ ಅವರ ಮಗ ಬಸವರಾಜು ಎಂಬಾತ ಶಿಕ್ಷಕ. ಈತನಿಗೆ ವೇತನ ತಿಂಗಳಿಗೆ ಬರೋಬ್ಬರಿ 1000 ರೂ.ಗಳು. ಲಕ್ಷ್ಮಯ್ಯನನ್ನು ಈ ವಿವಾದ ಆರಂಭಗೊಂಡ ನಂತರ ಸದಸ್ಯನ್ನಾಗಿ ಮಾಡಿಕೊಳ್ಳಲಾಗಿದೆ.

ಸಿಪಿಐ(ಎಂ)ನ ರಂಗ ಪ್ರವೇಶವೂ, 'ಅನುಸರಿಸಿಕೊಂಡು ಹೋಗಿ' ಎನ್ನುವ ಪುಕ್ಕಟೆ ಸಲಹೆಯೂ



ಹೀಗೆ ಬೂದಿ ಮುಚ್ಚಿದ ಕೆಂಡದಂತಿದ್ದ ಪ್ರಕರಣ ಜಾತಿ ದೌರ್ಜನ್ಯ ವಿರೋಧಿ ಸಮಿತಿಯ ಗಮನಕ್ಕೆ ಬಂದಿದ್ದು ತಡವಾಗಿಯೇ. ಯುಗಾದಿ ಹಬ್ಬದ ದಿನ ಇದನ್ನು ಸ್ಫೋಟಗೊಳಿಸಲು ವೇದಿಕೆ ಸಿದ್ದಪಡಿಸಿಕೊಂಡ ಸಿಪಿಐ(ಎಂ) ನೇತೃತ್ವದ ಜಾತಿ ದೌರ್ಜನ್ಯ ವಿರೋಧಿ ಸಮಿತಿ ಜಿಲ್ಲಾ ಸಂಚಾಲಕ ಲಿಂಗರಾಜು, ಸದಸ್ಯರಾದ ಪೃಥ್ವಿ, ಹರೀಶ ಯುಗಾದಿ ಹಬ್ಬದ ದಿನ ಕೆರಗೋಡಿಗೆ ತೆರಳಿ ಎಲ್ಲರೊಂದಿಗೆ ಮಾತನಾಡಿ ಉತ್ಸವದಲ್ಲಿ ದೇವರು ಬರುವಾಗ ಪೂಜೆ ಮಾಡಿಸುವುದು. ಒಂದು ವೇಳೆ, ಪೂಜೆ ಮಾಡಲು ನಿರಾಕರಿಸಿದರೆ ಜಾತಿ ಅಸ್ಪೃಶ್ಯತೆ ಆಚರಣೆ ಮಾಡಲಾಗಿದೆ ಎಂದು ದೂರು ದಾಖಲಿಸುವುದು ಎಂದು ನಿರ್ಣಯಿಸಲಾಯಿತು. ಘಟನೆಗಳೂ ಅದೇ ರೀತಿ ನಡೆದು ಕೋಣನೂರು ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಯಿತಲ್ಲದೆ, ಅರಕಲಗೂಡು ತಾಲ್ಲೂಕು ಆಡಳಿತಕ್ಕೆ ಸಹ ದೂರು ಸಲ್ಲಿಸಲಾಯಿತು.

ನಂತರ ಹಾಸನ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಒತ್ತಾಯಿಸಲಾಯಿತು. ಹಾಸನದಲ್ಲಿ ಪ್ರತಿಭಟನೆ ನಡೆಯುತ್ತಿರುವಾಗಲೇ ತಾಲ್ಲೂಕು ಆಡಳಿತ ಕೆರಗೋಡಿನಲ್ಲಿ 'ಶಾಂತಿ' ಸಭೆ ನಡೆಸಿ 'ಅನುಸರಿಸಿಕೊಂಡು' ಹೋಗುವಂತೆ ಸಲಹೆ ನೀಡಿದೆ.

ಸಿಪಿಐ(ಎಂ) ಈ ರೀತಿಯ ನಿಲುವುಗಳು ಸ್ಥಿತಿಯನ್ನು ಬದಲಾಯಿಸದೆ, ದಲಿತರು ಅಸ್ಪೃಶ್ಯತೆ ವಿರುದ್ಧ ನಡೆಸುವ ಹೋರಾಟಗಳ ಆತ್ಮಸ್ಥೈರ್ಯ ಕುಗ್ಗಿಸುತ್ತವೆ ಎಂದು ತೀರ್ಮಾನಿಸಿ ಜಿಲ್ಲಾಕೇಂದ್ರದಿಂದ ಎಲ್ಲಾ ಮಾಧ್ಯಮಮಿತ್ರರನ್ನು ಕೆರಗೋಡಿಗೆ ಕರೆದುಕೊಂಡು ಸ್ಥಳ ಪರಿಚಯ ಮಾಡಿಸಿ ಸಮಸ್ಯೆಯ ಗಂಭೀರತೆಯನ್ನು ಇಡೀ ರಾಜ್ಯಕ್ಕೆ ಮನದಟ್ಟು ಮಾಡಿಕೊಟ್ಟಿತು.

ಆಗ ಪ್ರೊ। ಕೆ.ಸಿ.ಬಸವ ರಾಜು ರಾಜಿಗೆ ಯತ್ನಿಸಿದ್ದಾರೆ. ಪಿಎಸ್‌ಐ ಪ್ರವೀಣ್‌ಕುಮಾರ್ ದಲಿತರಿಗೆ ಅವರು ಮಾಡಲು ನಿರಾಕರಿಸಿದ ಕೆಲಸಗಳನ್ನು ಮಾಡುವುದರಲ್ಲಿ ತಪ್ಪೇನೂ ಇಲ್ಲ ಎಂದು ಬುದ್ಧಿ ಹೇಳಿದ್ದಾರೆ. ಪ್ರಕರಣ ರಾಜ್ಯಮಟ್ಟದಲ್ಲಿ ಸುದ್ದಿ ಆದ ಮೇಲೆ ಲಿಂಗಾಯಿತರ ಅಘೋಷಿತ ವಕ್ತಾರ, ಜಿಲ್ಲಾ ಉಸ್ತುವಾರಿ ಮಂತ್ರಿ ವಿ.ಸೋಮಣ್ಣ ಕೆರಗೋಡಿಗೆ ಬಂದು ಸಭೆ ನಡೆಸಿ ಇಡೀ ಗ್ರಾಮವನ್ನು ದತ್ತು ತೆಗೆದುಕೊಳ್ಳುವುದಾಗಿ ಹೇಳಿಹೋಗಿದ್ದಾರೆ. ಅದೂ ದಲಿತರಿಗೆ ಪ್ರವೇಶವಿಲ್ಲದ ದೇವಾಲಯಕ್ಕೆ 20 ಲಕ್ಷ, ಲಿಂಗಾಯತ ಬಡವರಿಗೆ ಭೂಮಿ, ಮನೆ ನೀಡುವ ಮೂಲಕ ಗ್ರಾಮವನ್ನು ಅಭಿವೃದ್ಧಿಪಡಿಸುವುದಾಗಿ

ಪುಟ 13ಕ್ಕೆ

ನಿವೇಶನ ನೀಡದಿದ್ದರೆ ಸರ್ಕಾರಿ ಭೂಮಿ ಅತಿಕ್ರಮಣ

ದಕ್ಷಿಣ ಕನ್ನಡ ಜಿಲ್ಲಾ ಭೂಮಿ ಹೋರಾಟದ ಘೋಷಣೆ



ವಾ. ಉ.

ನಿವೇಶನ ರಹಿತರಿಗೆ ಮನೆ ನಿವೇಶನ, ಮನೆ ಬಾಡಿಗೆ ನಿಯಂತ್ರಣ ಕಾಯ್ದೆ ಜಾರಿ ಹಾಗೂ ಈಗಾಗಲೇ ಸರಕಾರಿ ಭೂಮಿಯಲ್ಲಿ ಮನೆ ಕಟ್ಟಿ ವಾಸಿಸುತ್ತಿರುವವರಿಗೆ ಉಚಿತವಾಗಿ ಹಕ್ಕುಪತ್ರ ನೀಡಬೇಕೆಂದು ಆಗ್ರಹಿಸಿ ಏಪ್ರಿಲ್ 26 ರಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಡಿವೈಎಫ್‌ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಐದರಿಂದ ಆರು ಸಾವಿರದಷ್ಟು ಸಂಖ್ಯೆಯಲ್ಲಿ ನಿವೇಶನರಹಿತರು ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಎದುರು ನಡೆಯುತ್ತಿರುವ ಪ್ರತಿಭಟನಾ ಪ್ರದರ್ಶನಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಜನಸಾಮಾನ್ಯರು ಭಾಗವಹಿಸಿದ ಬಹುದೊಡ್ಡ ಮತಪ್ರದರ್ಶನ ಇದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿವೇಶನ ಇಲ್ಲದೆ ಸ್ವಂತ ಮನೆ ಇಲ್ಲದವರ ಪ್ರಮಾಣ ಸಾವಿರಗಟ್ಟಲೆ ಸಂಖ್ಯೆಯಲ್ಲಿದೆ. ಮನೆ ಸದಸ್ಯರ ಸಂಖ್ಯೆ ಹೆಚ್ಚುತ್ತಿದ್ದರೂ, ನಿವೇಶನ ಇಲ್ಲದಿರುವುದರಿಂದ ಒಂದೇ ಮನೆಯೊಳಗೆ ಹಲವು ಕುಟುಂಬಗಳು ವಾಸವಾಗಿವೆ. ಬಡವರು ಸರ್ಕಾರೀ ಜಾಗದಲ್ಲಿ ಮನೆ ಕಟ್ಟಿಕೊಂಡು 15 ವರ್ಷಗಳ ಮೇಲಾಗಿದ್ದರೂ ಹಕ್ಕುಪತ್ರ ಮಂಜೂರಾಗದೇ ಇರುವ ಪ್ರಕರಣಗಳೂ ಸಾವಿರಗಟ್ಟಲೆ ಸಂಖ್ಯೆಯಲ್ಲಿವೆ. ಇತ್ತೀಚೆಗೆ ಮಂಗಳೂರು ನಗರದಲ್ಲಿ ವಿಶೇಷ ಆರ್ಥಿಕ ವಲಯ ಅಲ್ಲದೆ ಅನೇಕ ಉದ್ದಿಮೆಗಳು ಮೂಡಿಬರುತ್ತಿದ್ದು, ಇದರಿಂದಾಗಿ ಬಾಡಿಗೆ ಮನೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ನಗರದ ಹೊರಗಿನ ಗ್ರಾಮೀಣ ಪ್ರದೇಶಗಳಿಂದ ಬಂದು ವಾಸವಾಗಿದ್ದಾರೆ. ಇಂಥ ಸಂದರ್ಭವನ್ನು ದುರುಪಯೋಗ ಮಾಡಿಕೊಂಡು ಮನೆ ಬಾಡಿಗೆ ಹೆಚ್ಚಿಸುವುದೋ ಅಥವಾ ಹೆಚ್ಚಿನ ಬಾಡಿಗೆಗಾಗಿ ಬಾಡಿಗೆದಾರರನ್ನು ಒಕ್ಕಲೆಬ್ಬಿಸುವುದನ್ನೋ ಮನೆ ಮಾಲೀಕರು ಮಾಡುತ್ತಿದ್ದಾರೆ. ಬಾಡಿಗೆ ನಿಯಂತ್ರಣ ಕಾಯ್ದೆಯೊಂದು ಅನುಷ್ಠಾನದಲ್ಲಿಲ್ಲದಿರುವ ಪರಿಸ್ಥಿತಿಯಿಂದ ಬಡ, ಮಧ್ಯಮ ವರ್ಗದವರು ತೀವ್ರ ಸಂಕಷ್ಟದಲ್ಲಿದ್ದಾರೆ. ಇದೇ ವೇಳೆಗೆ ಸರ್ಕಾರ ಉದಾರವಾಗಿ ನಗರ ಸುತ್ತಲಿನ ಭೂಮಿಯನ್ನು ಎಸ್‌ಇಜೆಡ್ ಹಾಗೂ ಸಿಆರ್‌ಜೆಡ್ (ಕರಾವಳಿ ನಿಯಂತ್ರಣ ವಲಯ)ದ ಹೆಸರಿನಲ್ಲಿ ತನ್ನ ವಶಕ್ಕೆ ತೆಗೆದುಕೊಂಡು ಉದ್ಯಮಪತಿಗಳಿಗೆ, ಪ್ರವಾಸೋದ್ಯಮ ಮಾಡುವವರಿಗೆ ತೀರಾ ಕಡಿಮೆ ದರದಲ್ಲಿ ವಿತರಣೆ ಮಾಡುತ್ತಿದೆ. ನಗರಗಳಲ್ಲೂ ಗ್ರಾಮಾಂತರಗಳಲ್ಲಿಯೂ ಬಡಜನರಿಗೆ ವಾಸಕ್ಕೆ ಕೊಡದ ಸರ್ಕಾರದ ವಂಶ ತುಂಡುಭೂಮಿ ಕೂಡಾ ಇಲ್ಲವೆಂಬಂತೆ ವರ್ತಿಸುತ್ತಿದೆ; ಅದೇ ವೇಳೆಗೆ ಉದ್ಯಮಿಗಳು ಬೇಕೆಂಬಷ್ಟು ಭೂಮಿಯನ್ನು ಸರ್ಕಾರದಿಂದ ಪಡೆಯುತ್ತಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘವು ರಾಜ್ಯಮಟ್ಟದಲ್ಲಿ ಭೂಮಿ ಹೋರಾಟವನ್ನು ಮುಖ್ಯ ಕಾರ್ಯಕ್ರಮವಾಗಿ ಅಂಗೀಕರಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸಮಸ್ಯೆಗಳ ಆಧಾರದಲ್ಲಿ ಕಳೆದ ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕು, ಮೂಡಬಿದ್ರೆ, ಬೆಳ್ತಂಗಡಿ, ಬಂಟ್ವಾಳ, ಸುಳ್ಯಗಳಲ್ಲಿ ಪ್ರಾಂತ ರೈತ ಸಂಘ ನಿವೇಶನರಹಿತರ ಅರ್ಜಿಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ತಹಶೀಲ್ದಾರರಿಗೆ ಸಲ್ಲಿಸಿತ್ತು. ಆದಾಗ್ಯೂ ಭೂಮಿ ಹಂಚಿಕೆ, ನಿವೇಶನಗಳ ಗುರುತಿಸುವಿಕೆ ಇವುಗಳಲ್ಲಿ ಏನೊಂದೂ ಗಮನಾರ್ಹ ಪ್ರಗತಿ ಆಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಡಿವೈಎಫ್‌ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯೂ ಭೂ ಹೋರಾಟದ ಕಣಕ್ಕಿಳಿಯಿತು. ನಿವೇಶನರಹಿತರಿಂದ, ಸರ್ಕಾರಿ ಜಮೀನಿನಲ್ಲಿ ವಾಸವಾಗಿರುವುದರಿಂದ, ನಗರದಲ್ಲಿ ಬಾಡಿಗೆ ಸಂತ್ರಸ್ತರಿಂದ ಅರ್ಜಿಗಳನ್ನು ಸಂಗ್ರಹಿಸಿ, ಅವರ ಸಮಾವೇಶ ನಡೆಸಿ ಬಳಿಕ ಸಂಬಂಧಪಟ್ಟ ಗ್ರಾಮ ಪಂಚಾಯತುಗಳ ಮೂಲಕವೋ ನಗರ ಕಾರ್ಪರೇಷನ್ ಮೂಲಕವೋ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವ ಪ್ರಕ್ರಿಯೆ ಆರಂಭವಾಯಿತು. ಕೆಲವು ಪ್ರದೇಶಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ವಲಯ ಸಮಿತಿಗಳೊಂದಿಗೆ ಜಂಟಿಯಾಗಿ ಸಮಾವೇಶ, ಪ್ರತಿಭಟನಾ ಮೆರವಣಿಗೆ, ಅರ್ಜಿ ಸಲ್ಲಿಕೆ ಪ್ರಕ್ರಿಯೆಗಳು ನಡೆದವು. ಇದೀಗ ಏಪ್ರಿಲ್ 26 ರಂದು ಎರಡೂ ಸಂಘಟನೆಗಳು ಜಂಟಿಯಾಗಿ 'ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಚಲೋ' ಎಂಬ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಂಡಿತು.

ಜಿಲ್ಲಾಧಿಕಾರಿ ಕಚೇರಿ ಎದುರಿನ ಧರಣಿಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾಸಮಿತಿ ಅಧ್ಯಕ್ಷ ಕೆ.ಆರ್.ಶ್ರೀಯಾನ್ ಉದ್ಘಾಟಿಸಿದರು. ನಗರದಲ್ಲಿ ಗಗನಚುಂಬಿ ಕಟ್ಟಡಗಳು ಒಂದರ ಮೇಲೊಂದರಂತೆ ತಲೆಯೆತ್ತುತ್ತಿವೆಯಾದರೂ ಅವುಗಳನ್ನು ರಚಿಸುವ ಕಾರ್ಮಿಕರಿಗೆ ಮಾತ್ರ ತಲೆಯ ಮೇಲೊಂದು ಸೂರಿಲ್ಲದೆ ಬೀದಿ ಪಾಲಾಗುವ ಸ್ಥಿತಿ ನಿರ್ಮಾಣವಾಗಿದ್ದರೂ ಸರಕಾರ ಮೌನ ವಹಿಸಿದೆ ಎಂದು ದೂರಿದರು. ಜನಪರ ಚಿಂತನೆ, ಕಾಳಜಿ ಸರಕಾರಕ್ಕೆ ಇಲ್ಲವಾಗಿದೆ. ಯಡಿಯೂರಪ್ಪನವರು ದಿನ ಬೆಳಗಾದರೆ ಭರವಸೆಗಳನ್ನು ಮಾತ್ರ ನೀಡುತ್ತಾರೆ. ವರ್ಷದಲ್ಲಿ ಎರಡು ಲಕ್ಷ ಜನರಿಗೆ ಮನೆ ಕಟ್ಟುವುದಾಗಿ ಘೋಷಣೆ ಮಾಡುತ್ತಾರೆ. ಆದರೆ ಕಳೆದ ವರ್ಷ ನೆರೆಪೀಡಿತ ಪ್ರದೇಶಗಳಲ್ಲಿ ಮನೆಮಠ ಕಳೆದು ಕೊಂಡವರಿಗೆ ಇನ್ನೂ ಸರಕಾರದಿಂದ ಮನೆ ನಿರ್ಮಿಸಿ ನೀಡುವ ಕೆಲಸವಾಗಿಲ್ಲ. ಕಳೆದ 15 ವರ್ಷಗಳಿಂದ ನಿವೇಶನರಹಿತರು ಅರ್ಜಿಗಳನ್ನು ಹಿಡಿದು ಸರಕಾರಿ ಕಚೇರಿಗಳಿಗೆ ಅಲೆಯುತ್ತಿದ್ದರೂ ಸ್ಪಂದನೆ ದೊರಕಿಲ್ಲ. ಯಡಿಯೂರಪ್ಪನವರು ಕೇವಲ ಸುಳ್ಳು ಭರವಸೆಗಳನ್ನು ಮಾತ್ರ ನೀಡುತ್ತಾರೆ ಎಂದು ಅವರು ಟೀಕಿಸಿದರು. ಪ್ರಜಾಪ್ರಭುತ್ವ ದೇಶದಲ್ಲಿ ಮನುಷ್ಯರಾಗಿ ಬದುಕಲು ಸೂರು ಇಲ್ಲ ಎಂಬುದು ನಾಚಿಕೆಗೇಡು. ಇಷ್ಟೊಂದು ಸಂಖ್ಯೆಯಲ್ಲಿ ನಿವೇಶನರಹಿತರು ಸಮಾವೇಶ ಗೊಂಡಿರುವುದನ್ನು ನೋಡಿದರೆ ನಿವೇಶನದ ಭೂಮಿಪ್ರಶ್ನೆ ಎಷ್ಟು ಮುಖ್ಯವಾದುದು ಎಂಬುದು ಗೊತ್ತಾಗುತ್ತದೆ ಎಂದು ವಿವರಿಸಿದರು.

ಡಿವೈಎಫ್‌ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ನಿರ್ವಸಿತರಿಗೆ ತಿಂಗಳೊಳಗಾಗಿ ನಿವೇಶನ ಮತ್ತು ಮನೆ ನಿವೇಶನ ಹಕ್ಕುಪತ್ರ ನೀಡದಿದ್ದಲ್ಲಿ ಸರ್ಕಾರಿ ಜಾಗ ಅತಿಕ್ರಮಣ ಮಾಡಿ ಮನೆ ಕಟ್ಟುವ ಪರಿಸ್ಥಿತಿ ಬರುತ್ತಿದ್ದರಿಂದ ಸರ್ಕಾರ ಈ ಬಗ್ಗೆ ಎಚ್ಚರ ವಹಿಸಲಿ ಎಂದು ಅವರು ಆಗ್ರಹಿಸಿದರು. ಜಿಲ್ಲೆಯಲ್ಲಿ ವಸತಿರಹಿತರ ಪರವಾಗಿ ಡಿವೈಎಫ್‌ಐ ನಿಂದ ಈಗಾಗಲೇ 5000 ಪ್ರಾಂತ ರೈತ ಸಂಘದಿಂದ 3600 ಅರ್ಜಿಗಳನ್ನು ಸರ್ಕಾರಕ್ಕೆ ಸ್ಥಳೀಯ ಸಂಸ್ಥೆಗಳ ಮೂಲಕವೋ ತಹಶೀಲ್ದಾರರ ಮೂಲಕವೋ ಸಲ್ಲಿಸಲಾಗಿದೆ. ಮಹಾನಗರಪಾಲಿಕೆಗೆ 3,950 ಅರ್ಜಿ ಸಲ್ಲಿಸಲಾಗಿದೆ. ಇಂದು 4,300 ಅರ್ಜಿಗಳನ್ನು ನೀಡಲಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುವುದು. ಆದರೆ ವಸತಿರಹಿತರಿಗೆ ಪಾಲಿಕೆ ವ್ಯಾಪ್ತಿಯಲ್ಲಿ ಕೇವಲ 6 ಎಕರೆ, ಗ್ರಾಮಾಂತರದಲ್ಲಿ 284 ಎಕ್ರೆ ಕಾದಿರಿಸಿದ್ದು, ಇಷ್ಟರಿಂದ ಮನೆ ನಿವೇಶನರಹಿತರ ಬೇಡಿಕೆಗಳನ್ನು ಸರ್ಕಾರ ಹೇಗೆ ಈಡೇರಿಸುವುದು ಎಂದು ಪ್ರಶ್ನಿಸಿದರು. ವಸತಿ ಸಚಿವರಾಗಿರುವ ಸೋಮಣ್ಣ ವಸತಿರಹಿತ ಬಡವರ ಬಗ್ಗೆ ಮೌನವಾಗಿದ್ದಾರೆ. ಇತ್ತೀಚೆಗೆ ಮಂಗಳೂರಿಗೆ ಆಗಮಿಸಿದ್ದ ಅವರು 1,200 ಕೋಟಿ ರೂ. ವೆಚ್ಚದ ವಸತಿ ಸಮುಚ್ಚಯದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಇತರ ಸಚಿವರ ಜೊತೆ ಭಾಗವಹಿಸಿದ್ದರೂ, ಜಿಲ್ಲೆಯ ಬಡ ವಸತಿರಹಿತರ ಬಗ್ಗೆ ಕನಿಷ್ಠ ಸಭೆಯನ್ನು ನಡೆಸುವ ಸೌಜನ್ಯವನ್ನು ತೋರಲಿಲ್ಲ ಎಂದು ಮುನೀರ್ ಕಾಟಿಪಳ್ಳ ದೂರಿದರು. ತಿಂಗಳೊಳಗೆ ನಿವೇಶನರಹಿತರಿಗೆ ಪೂರಕವಾದ ಪ್ರಕ್ರಿಯೆಯನ್ನು ಸರ್ಕಾರ ಕೈಗೊಳ್ಳದಿದ್ದರೆ, ನಿವೇಶನರಹಿತರು ಜಿಲ್ಲಾಧಿಕಾರಿ ಕಚೇರಿ ಮುಂದೆಯೇ ಅಡುಗೆ ಪಾತ್ರೆ, ಟೆಂಟು, ಚಾಪೆಗಳೊಂದಿಗೆ ಠಿಕಾಣಿ ಹೂಡಲಿದ್ದಾರೆ ಎಂದು ಎಚ್ಚರಿಸಿದರು.

ಜಿಲ್ಲಾಧಿಕಾರಿಗಳು ಧರಣಿ ಸ್ಥಳಕ್ಕೆ ಬಂದು ಅರ್ಜಿ ಸ್ವೀಕರಿಸಬೇಕೆಂದು ನಿವೇಶನರಹಿತರು ಹಠ ಹಿಡಿದುದರಿಂದ, ಒತ್ತಾಯಕ್ಕೆ ಮಣಿದ ಜಿಲ್ಲಾಡಳಿತ ಹೆಚ್ಚುವರಿ ಜಿಲ್ಲಾಧಿಕಾರಿಯವರನ್ನು ಸ್ಥಳಕ್ಕೆ ಕಳುಹಿಸಬೇಕಾಯಿತು. ಅವರು ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಧರಣಿನಿರತರಿಗೆ ಭರವಸೆ ನೀಡಿದರು.

ಮಂಗಳೂರು ತಾಲ್ಲೂಕು ಪಂಚಾಯತು ಆವರಣದಿಂದ ಮೆರವಣಿಗೆ ಹೊರಟು ಘೋಷಣೆಗಳೊಂದಿಗೆ ನಿವೇಶನರಹಿತರು ಜಿಲ್ಲಾಧಿಕಾರಿ ಕಚೇರಿ ಮುಂದೆ ಸಮಾವೇಶಗೊಂಡು ಧರಣಿ ನಡೆಸಿದರು. ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕೆ.ಯಾದವಶೆಟ್ಟಿ ಪ್ರಾಸ್ತವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಹರಿದಾಸ್ ಎಸ್.ಪಿ ಕೂಡಾ ಸಭಿಕರನ್ನುದ್ದೇಶಿಸಿ ಮಾತನಾಡಿದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ದಯಾನಂದಶೆಟ್ಟಿ ಧನ್ಯವಾದ ಸಲ್ಲಿಸಿದರು. ಡಿವೈಎಫ್‌ಐ ನಗರ ಸಮಿತಿ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್ ಕಾರ್ಯಕ್ರಮ ನಿರೂಪಿಸಿದರು. ಉರಿಬಿಸಿಲನ್ನು ಲೆಕ್ಕಿಸದೆ ಸಾವಿರಾರು ಜನ ಮೆರವಣಿಗೆ ಹಾಗೂ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು, ಸಮಸ್ಯೆಯ ತೀವ್ರತೆಯನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿತು. ಪ್ರಾಂತ ರೈತ ಸಂಘದ ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ್, ಸುಕನ್ಯಾ, ಡಿವೈಎಫ್‌ಐನ ಸಂತೋಷ್ ಬಜಾಲ್, ಮಹಾಬಲ ದೆಪ್ಪಲಿಯಾರ್, ಅಶೋಕ್ ಶೆಟ್ಟಿ ಉಪಸ್ಥಿತರಿದ್ದರು.



ಪ್ರತಿಭಟನೆಯನ್ನು ಉದ್ದೇಶಿಸಿ ಶ್ರೀಯಾನ್‌ರವರು ಮಾತನಾಡುತ್ತಿರುವುದು

'ಅಲ್ಪ ಸಂಖ್ಯಾತರ ಪರಿಸ್ಥಿತಿ ಪ.ಬಂಗಾಳದಲ್ಲಿ ದಯನೀಯವಾಗಿದೆ. ಅಲ್ಪ ಸಂಖ್ಯಾತರು ಎಡರಂಗದಿಂದ ದೂರ' ಎಂಬಿತ್ಯಾದಿ ಹುಸಿ ಸುದ್ದಿಯನ್ನು ಪ್ರಚಾರಿಸಲಾಗುತ್ತಿದೆ. ಆದರೆ ಆ ಸಮುದಾಯದ ಪ್ರಗತಿಗೆ ಎಡರಂಗ ಸರ್ಕಾರ ಹಲವಾರು ಗಮನಾರ್ಹ ಕ್ರಮ ವಹಿಸಿದೆ. ಅವೇನು?

ಅಲ್ಪಸಂಖ್ಯಾತರ ಏಳಿಗೆಯಲ್ಲಿ ಎಡರಂಗದ ಹಾದಿ

ಕನ್ನಡಕ್ಕೆ ಸಿಮ್ಮಿಸಿ

ದೇಶದ ಎಡ ಚಳವಳಿಯಲ್ಲಿ ಅತಿ ಪ್ರಮುಖವಾದ ಸ್ಥಾನ ಪಡೆದ ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುತ್ತಿವೆ. ಪ್ರತಿಬಾರಿಯಂತೆ ಈ ಬಾರಿಯೂ ಮಾಧ್ಯಮಗಳು, ಬಂಡವಾಳ ಶಾಹಿ ಪಕ್ಷಗಳು ಸಿಪಿಎಂ ನೇತೃತ್ವದ ಎಡರಂಗದ ಸರ್ಕಾರವನ್ನು ಕಿತ್ತೊಗೆಯಲೇ ಬೇಕು ಎಂಬ ಹಠದಿಂದ ಸುಳ್ಳು ಹಾಗೂ ಕಪೋಲಕಲ್ಪಿತ ಪ್ರಚಾರಗಳನ್ನು ನಡೆಸುತ್ತಲೇ ಇದೆ.

ಯುಪಿಎ ಸರ್ಕಾರದ ಅವಧಿಯಲ್ಲಿ ಪರಮಾಣು ಒಪ್ಪಂದ ಜಾರಿಯಾಗದಂತೆ ಎಡಪಕ್ಷಗಳು ಪ್ರಬಲ ಹೋರಾಟವನ್ನೇ ಮಾಡಿದ್ದವು. ಈ ಹಿನ್ನೆಲೆಯಲ್ಲಿ ದೇಶದಲ್ಲಿ ಎಡ ಶಕ್ತಿಗಳನ್ನು ಹತ್ತಿಕಬೇಕೆಂದು ಅಮೇರಿಕ ದೊಡ್ಡ ಪ್ರಮಾಣದಲ್ಲಿ ಆಳುವ ಶಕ್ತಿಗಳಿಗೆ ನೆರವು ನೀಡುತ್ತಿದೆ. ಇತ್ತೀಚೆಗೆ ಪ್ರಕಟವಾದ ವಿಕಿಲೀಕ್ಸ್ ಕೇಬಲ್‌ನಲ್ಲಿ ಇದು ದೃಢಪಟ್ಟಿದೆ.


ಇದೇ ಹಿನ್ನೆಲೆಯಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್‌ನ ಚುನಾವಣಾ ಪ್ರಚಾರಗಳಿಗೆ ದೊಡ್ಡ ಪ್ರಮಾಣದಲ್ಲಿ ಹಣಕಾಸಿನ ನೆರವು ಹರಿದುಬರುತ್ತಿದೆ. ಕಪ್ಪು ಹಣದ (ಬ್ಲ್ಯಾಕ್‌ಮನಿ) ಬಗ್ಗೆ ಸಿಪಿಎಂ ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ನೇತೃತ್ವದಲ್ಲಿ ಎಡಪಕ್ಷಗಳ ನಿಯೋಗ ಚುನಾವಣಾ ಆಯುಕ್ತರಿಗೆ ಲಿಖಿತ ದೂರನ್ನು ಸಲ್ಲಿಸಿದ್ದು, ಚುನಾವಣೆಯಲ್ಲಿ ಬಳಸಲಾದ ಹಣದ ಬಗ್ಗೆ ತನಿಖೆಯನ್ನು ಮಾಡಬೇಕೆಂದು ಒತ್ತಾಯಿಸಿದೆ.

ಈ ಮಧ್ಯೆ, ಎಡರಂಗ ಸರ್ಕಾರದ ವಿರುದ್ಧ ಕೀಳುಮಟ್ಟದ ಅಪಪ್ರಚಾರ ನಡೆಯುತ್ತಲೇ ಇದೆ. ಸರ್ಕಾರ ನಡೆಸಿದ ಸಾಧನೆಯನ್ನು ಅಲ್ಲಗಳೆಯುವ ಹೇಳಿಕೆಗಳು ಕಾಂಗ್ರೆಸ್ ನಾಯಕರಿಂದ ಬರುತ್ತಿದೆ. ಇಂಥ ಅಪಪ್ರಚಾರಗಳಿಗೆ ಎಡಪಕ್ಷಗಳ ನಾಯಕರು ಸಮರ್ಪಕ ಪ್ರತ್ಯುತ್ತರವನ್ನೂ ನೀಡುತ್ತಿದ್ದಾರೆ.

ಅಪಪ್ರಚಾರದ ಸ್ಯಾಂಪಲ್

ಎಡರಂಗ ಸರ್ಕಾರದ ಆಳ್ವಿಕೆಯಲ್ಲಿ ಅಲ್ಪಸಂಖ್ಯಾತರನ್ನು ಕಡೆಗಣಿಸಲಾಗಿದೆ ಎಂಬುದು ಅಪಪ್ರಚಾರದ ಪ್ರಮುಖ ಭಾಗ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಸರ್ಕಾರ ನಡೆಸಿದ ಅನೇಕ ಯೋಜನೆಗಳನ್ನು ಪ್ರಶ್ನೆ ಮಾಡಲಾಗುತ್ತಿದೆ. ಅಲ್ಪಸಂಖ್ಯಾತರ ಪರಿಸ್ಥಿತಿ ಪಶ್ಚಿಮ ಬಂಗಾಳದಲ್ಲಿ ದಯನೀಯವಾಗಿದೆ ಎಂಬುದಾಗಿ ಬಿಂಬಿಸಲಾಗುತ್ತಿದೆ.

ಇದಕ್ಕೆ ಒಂದು ಉದಾಹರಣೆ– ಸಾಚಾರ್ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದ ಆರ್ಥಿಕ ತಜ್ಞ ಅಬು ಸಲೇಹ್ ಷರೀಫ್ ಬಹಿರಂಗ ಸಭೆಯಲ್ಲಿ ಕೆಲವೊಂದು ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಮಾಧ್ಯಮದಲ್ಲಿ ವರದಿಯಾದ ಪ್ರಕಾರ, ಮುಸ್ಲಿಂ ಸಮುದಾಯದ ಶೇಕಡಾ 50 ರಷ್ಟು ಮಂದಿ ಪ್ರಾಥಮಿಕ ಹಂತದಲ್ಲೇ ಶಾಲೆ ತೊರೆಯುತ್ತಾರೆ. ಶೇಕಡಾ 26ರಷ್ಟು ಮಂದಿ ಹೈಸ್ಕೂಲ್ ಹಂತದಲ್ಲಿ ಶಾಲೆ ತೊರೆಯುತ್ತಾರೆ. ಕೇವಲ 12 ಶೇಕಡಾ ಮಾತ್ರ ಎಸ್‌ಎಸ್‌ಎಲ್‌ಸಿ ಪೂರೈಸುತ್ತಾರೆ. ಷರೀಫ್ ಅವರ ಸುಳ್ಳು ಅಂಕಿ ಅಂಶ ಮತ್ತೂ ಮುಂದುವರಿಯುತ್ತದೆ. ರಾಜ್ಯದಲ್ಲಿ ಶೇ. 25 ರಷ್ಟು ಮುಸ್ಲಿಂ ಜನಸಂಖ್ಯೆ ಇದೆ. ಶೇಕಡಾ 2.1ರಷ್ಟು ಮಾತ್ರ ಸರ್ಕಾರಿ ಉದ್ಯೋಗದಲ್ಲಿದ್ದಾರೆ. ಶೇಕಡಾ 2.4ರಷ್ಟು ಮಂದಿ ಹಿಂದುಳಿದ ವರ್ಗದ ಸ್ಥಾನಮಾನ ಪಡೆದುಕೊಂಡಿದ್ದಾರೆ. ಹಾಗೆಯೇ ಭೂ ಸುಧಾರಣೆಯ ಯಾವುದೇ ಪ್ರಯೋಜನವೂ ಮುಸ್ಲಿಂ ಸಮುದಾಯಕ್ಕೆ ಲಭಿಸಿಲ್ಲ ಎಂಬುದು ಷರೀಫ್ ವಾದ.



ಆದರೆ, ವಾಸ್ತವ ಬೇರೆ

ಈ ವಾದಕ್ಕೆ ಅವರು ಬಳಸಿದ್ದು 2001ರ ಜನಗಣತಿಯ ಅಂಕಿ ಸಂಖ್ಯೆಗಳು. ಅದನ್ನು ಈಗಾಗಲೇ ಸಾಚಾರ್ ಸಮಿತಿ ವರದಿಯಲ್ಲೂ ಉಲ್ಲೇಖ ಮಾಡಲಾಗಿದೆ. ಈ ಅಂಕಿ ಸಂಖ್ಯೆಗಳು 20 ವರ್ಷ ಹಳೆಯದು. ಈ ವರದಿಯನ್ನು ಸಿಪಿಐಎಂ ಪಕ್ಷವೂ ಸ್ವೀಕರಿಸಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು. ಈ ವರದಿಯಲ್ಲೂ ಸ್ಪಷ್ಟತೆ ಹಾಗೂ ಸಮಗ್ರತೆ ಇಲ್ಲದಿರುವುದನ್ನು ಪಕ್ಷ ಆಗಲೇ ಹೇಳಿತ್ತು. ಆಗ ಲಭ್ಯವಿದ್ದ ಅಂಕಿ ಅಂಶಗಳನ್ನೇ ಸಾಚಾರ್ ವರದಿಯಲ್ಲಿ ಬಳಸಿಕೊಳ್ಳಲಾಗಿದೆ. ರಾಜ್ಯದಲ್ಲಿ ನಡೆದ ವ್ಯಾಪಕ ಭೂ ಸುಧಾರಣೆಯಲ್ಲಿ ಮುಸ್ಲಿಂ ಕುಟುಂಬಗಳ ಆರ್ಥಿಕ ಪರಿಸ್ಥಿತಿಯಲ್ಲಿ ಆದ ಬದಲಾವಣೆಗಳನ್ನು ಅಧ್ಯಯನ ನಡೆಸಲು ಸಾಚಾರ್ ಸಮಿತಿ ವಿಫಲವಾಗಿದೆ. ಶಿಕ್ಷಣ ಕ್ಷೇತ್ರದಲ್ಲೂ ಮುಸ್ಲಿಂ ಸಮುದಾಯವನ್ನು ಮೇಲಕ್ಕೆತ್ತುವ ಕೆಲಸ ನಡೆದಿದೆ.

ಶಿಕ್ಷಣದಲ್ಲಿ ಮುಸ್ಲಿಮರು

ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ಸಂಸ್ಥೆಯ ವರದಿ ಪ್ರಕಾರ ದೇಶದಲ್ಲಿ ಮುಸ್ಲಿಮರ ಜನಸಂಖ್ಯೆ ಶೇ.13.4. ಅದರಲ್ಲಿ ಶೇ. 9.4 ಪ್ರಾಥಮಿಕ ಶಿಕ್ಷಣ ಹಾಗೂ ಶೇ. 7.5 ಹೈಸ್ಕೂಲ್ ಶಿಕ್ಷಣ ಹಂತಕ್ಕೆ ಬರುತ್ತಾರೆ.

ಇದಕ್ಕೆ ವ್ಯತಿರಿಕ್ತವಾದ ಪರಿಸ್ಥಿತಿ ಪಶ್ಚಿಮ ಬಂಗಾಳದಲ್ಲಿದೆ. ರಾಜ್ಯದಲ್ಲಿ ಮುಸ್ಲಿಮರ ಜನಸಂಖ್ಯೆ 25.2. ಇದರಲ್ಲಿ ಶೇ. 28 ಪ್ರಾಥಮಿಕ ಶಿಕ್ಷಣ ಹಾಗೂ ಶೇ. 20 ಹೈಸ್ಕೂಲ್ ಶಿಕ್ಷಣವನ್ನು ಪಡೆಯುತ್ತಾರೆ.

ಇನ್ನು ಸರ್ವ ಶಿಕ್ಷಣ ಅಭಿಯಾನದ 2009–10ರ ಅಂಕಿ ಅಂಶಗಳನ್ನು ಗಮನಿಸಿದರೆ, ಶೇ. 99 ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣ ಪಡೆಯಲು ಶಾಲೆಗಳಿಗೆ ಸೇರ್ಪಡೆಗೊಂಡಿದ್ದಾರೆ. ಹೈಸ್ಕೂಲ್‌ನಲ್ಲಿ ಈ ಸಂಖ್ಯೆ ಶೇ. 90. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆಯಲ್ಲೂ ಅದೇ ರೀತಿಯ ಪ್ರಗತಿ ಇದೆ. ರಾಜ್ಯದ ಒಟ್ಟು 30 ಲಕ್ಷ ವಿದ್ಯಾರ್ಥಿಗಳಲ್ಲಿ ಸುಮಾರು 15 ಲಕ್ಷ ಮುಸ್ಲಿಂ ವಿದ್ಯಾರ್ಥಿಗಳೇ ಅನ್ನುವುದು ಗಮನಾರ್ಹ.

ಇನ್ನು 2009ರ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸೋಣ. ರಾಜ್ಯದಲ್ಲಿ ಮಾಧ್ಯಮಿಕ ಹಂತದಲ್ಲಿ ಪರೀಕ್ಷೆ ಬರೆಯುವ 8.43 ಲಕ್ಷ ವಿದ್ಯಾರ್ಥಿಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳ ಸಂಖ್ಯೆ 1.59 (ಶೇ. 19). ಇನ್ನು 2010ರಲ್ಲಿ ಈ ಹಂತದಲ್ಲಿ ಪರೀಕ್ಷೆ ಬರೆದ ಒಟ್ಟು ವಿದ್ಯಾರ್ಥಿಗಳು 9.38. ಅದರಲ್ಲಿ ಮುಸ್ಲಿಂ ವಿದ್ಯಾರ್ಥಿಗಳು 1.89 ಅಥವಾ ಶೇ. 20. 2011ರಲ್ಲಿ ರಾಜ್ಯದ 10.04 ವಿದ್ಯಾರ್ಥಿಗಳ ಪೈಕಿ 2.15 ಲಕ್ಷ ವಿದ್ಯಾರ್ಥಿಗಳು ಮುಸ್ಲಿಂ ಸಮುದಾಯಕ್ಕೆ ಸೇರಿದವರು. ಅಂದರೆ ಶೇ 21.39ರಷ್ಟು, ಇದಕ್ಕೆ ಹೊರತಾಗಿ ಸುಮಾರು 50 ಸಾವಿರ ಮಂದಿ ಮದರಸಾದಿಂದ ಪ್ರೌಢ ಶಿಕ್ಷಣ ಪರೀಕ್ಷೆಯನ್ನು ಎದುರಿಸಿದ್ದಾರೆ. ಇವೆರಡೂ ಸಂಖ್ಯೆ ಸೇರಿದರೆ ಸುಮಾರು 25.27 ಶೇಕಡಾ ಮುಸ್ಲಿಂ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ಇದೇ ವೇಳೆ, ನಾವು ಪಿಯುಸಿ ಪರೀಕ್ಷೆಗಳನ್ನು ಗಣನೆಗೆ ತೆಗೆದುಕೊಂಡರೆ ಸುಮಾರು 6.35 ಲಕ್ಷ ವಿದ್ಯಾರ್ಥಿಗಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ. ಇದರಲ್ಲಿ 1.48 ಲಕ್ಷ ವಿದ್ಯಾರ್ಥಿಗಳು ಮುಸ್ಲಿಮರು. ಅಂದರೆ ಈ ಸಂಖ್ಯೆ ಶೇ. 23.31. ಈ ಅಂಕಿ ಸಂಖ್ಯೆಗಳು ಮುಸ್ಲಿಂ ಸಮುದಾಯ ಶೈಕ್ಷಣಿಕವಾಗಿ ಯಾವುದೇ ರೀತಿಯಲ್ಲೂ ಹಿಂದುಳಿದಿಲ್ಲ, ಬದಲಾಗಿ ಉನ್ನತಿಯತ್ತ ದಾಪುಗಾಲು ಹಾಕುತ್ತಿದ್ದಾರೆ ಎಂಬುದನ್ನು ಸಾಬೀತುಪಡಿಸುತ್ತವೆ.

ಇದೇ ವೇಳೆ, ರಾಷ್ಟ್ರೀಯ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ ಪಶ್ಚಿಮ ಬಂಗಾಳ-ಮುಸ್ಲಿಮರ ಅಭಿವೃದ್ಧಿಗೆ ನೀಡಿದ ಮಹತ್ವ ಸ್ಪಷ್ಟವಾಗುತ್ತದೆ. 11ನೇ ಪಂಚವಾರ್ಷಿಕ ಯೋಜನೆಯ ಮಧ್ಯಾವಧಿಯ ಪರಾಮರ್ಶೆಯ ಪ್ರಕಾರ, ಪ್ರಧಾನ ಮಂತ್ರಿಗಳ ನೂತನ 15 ಅಂಶಗಳ ಕಾರ್ಯಕ್ರಮದಲ್ಲಿ ಮಾಡಿದ ಬದ್ಧತೆಯ ಹೊರತಾಗಿಯೂ ಸರ್ವ ಶಿಕ್ಷಣ ಅಭಿಯಾನದಲ್ಲಿ ಪಶ್ಚಿಮ ಬಂಗಾಳ ಗುರುತರ ಸಾಧನೆ ಮಾಡಿದೆ ಎಂಬುದನ್ನು ಒತ್ತಿ ಹೇಳಲಾಗಿದೆ.

ಮದರಸಾ ಶಿಕ್ಷಣ

ಪಶ್ಚಿಮ ಬಂಗಾಳದ ಮದರಸಾ ಶಿಕ್ಷಣವಂತೂ ಇಡೀ ದೇಶಕ್ಕೆ ಮಾದರಿಯಾಗಿದೆ. ಸಾಚಾರ್ ಸಮಿತಿ ಶಿಫಾರಸಿಗೆ ಸಾಕಷ್ಟು ಮುನ್ನವೇ ಪಶ್ಚಿಮ ಬಂಗಾಳದಲ್ಲಿ ಮದರಸಾ ಶಿಕ್ಷಣ ಮಂಡಳಿಯು ಅಸ್ತಿತ್ವಕ್ಕೆ ಬಂದಿದೆ. ಮದರಸಾದ ಶಿಕ್ಷಣದ ಸರ್ಟಿಫಿಕೆಟ್‌ಗೆ ರಾಜ್ಯ ಶಿಕ್ಷಣ ಮಂಡಳಿಯ ಸ್ಥಾನಮಾನದ ದರ್ಜೆ ನೀಡಲಾಗಿದೆ. ಶಿಕ್ಷಕರ ನೇಮಕಕ್ಕೆ ಮದರಸಾ ಸೇವಾ ಆಯೋಗವನ್ನೂ ಸ್ಥಾಪಿಸಲಾಗಿದೆ.

1977ರಲ್ಲಿ ರಾಜ್ಯದಲ್ಲಿ 238 ಮದರಸಾಗಳು ಇದ್ದವು. ಈ ಸಂಖ್ಯೆ ಈಗ 597ಕ್ಕೆ ತಲುಪಿದೆ. 400 ಮದರಸಾಗಳಲ್ಲಿ ಪ್ರೌಢ ಶಿಕ್ಷಣಕ್ಕೆ ಸಮಾನಾಂತರವಾದ ಶಿಕ್ಷಾ ಕೇಂದ್ರಗಳಿವೆ. ಹಾಗಾಗಿ ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರು ಶಿಕ್ಷಣ ಪಡೆಯುತ್ತಿದ್ದಾರೆ. 1977ರಲ್ಲಿ ಕೇವಲ 4338 ವಿದ್ಯಾರ್ಥಿಗಳು ಮದರಸಾದಲ್ಲಿ ಶಿಕ್ಷಣ ಪಡೆಯುತ್ತಿದ್ದರೆ, ಪ್ರಸಕ್ತ ವರ್ಷದಲ್ಲಿ ಈ ಸಂಖ್ಯೆ 5.35 ಲಕ್ಷವನ್ನು ದಾಟಿದೆ. ಇಲ್ಲಿನ ಮದರಸಾ ಶಿಕ್ಷಣ ಪದ್ಧತಿಯನ್ನು ಸಾಚಾರ್ ಸಮಿತಿಯೂ ಮುಕ್ತ ಕಂಠದಿಂದ ಪ್ರಶಂಸಿಸಿದೆ.

ಔದ್ಯೋಗಿಕ ಪ್ರಗತಿ

ಶಿಕ್ಷಣವಾಯಿತು, ಇನ್ನು ಉದ್ಯೋಗದ ಕ್ಷೇತ್ರದಲ್ಲಿ ಮುಸ್ಲಿಮರ ಪರಿಸ್ಥಿತಿಯನ್ನು ಪರಿಶೀಲಿಸೋಣ...

ಸಾಚಾರ್ ಸಮಿತಿಯ ಪ್ರಕಾರ ಪಶ್ಚಿಮ ಬಂಗಾಳದಲ್ಲಿ ಕೇವಲ ಶೇ. 2.1ರಷ್ಟು ಮುಸ್ಲಿಮರು ಸರ್ಕಾರಿ ನೌಕರಿಯಲ್ಲಿದ್ದಾರೆ. ಆದರೆ, ಈ ಸಂಖ್ಯೆ

ಪುಟ 11 ಕ್ಕೆ

ಹದಿನೈದು ವರ್ಷಗಳ ಹಿಂದೆ ಪಶ್ಚಿಮ ಬಂಗಾಲದ ಪುರುಲಿಯದಲ್ಲಿ ಮಾರಕ ಶಸ್ತ್ರಾಸ್ತ್ರಗಳನ್ನು ಲ್ಯಾಟಿವಿಯನ್ ವಿಮಾನವೊಂದು ಉದುರಿಸಿ ಹೋಯಿತು; ಆ ವಿಮಾನ ಸಿಕ್ಕಿ ಬಿದ್ದರೂ, ತಪ್ಪಿಸಿಕೊಂಡಿದ್ದ ಅದರ ಪ್ರಧಾನ ಪಿತೂರಿಗಾರ ಕಿಮ್ ಡೆವಿಯನ್ನು ಆತನ ದೇಶ ಡೆನ್ಮಾರ್ಕ್ ಈಗ ವಿಚಾರಣೆಗೆ ಭಾರತಕ್ಕೆ ಒಪ್ಪಿಸಲು ಸಿದ್ಧವಾಗಿರುವ ಸಂದರ್ಭದಲ್ಲಿ ಆತ 'ಟೈಮ್ಸ್ ನೌ' ಸುದ್ದಿವಾಹಿನಿಗೆ ತಿಳಿಸಿದ ಸಂಗತಿಗಳು ಬಹಳ ಗಂಭೀರ ಸ್ವರೂಪದ್ದಾಗಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಕೇಂದ್ರ ಸರಕಾರಗಳ ಪಾತ್ರಗಳ ಬಗ್ಗೆ ಇದುವರೆಗೆ ಉತ್ತರ ಸಿಗದಿದ್ದ ಹಲವು ಪ್ರಶ್ನೆಗಳನ್ನು ಮತ್ತೆ ನೆನಪಿಸಿವೆ. ಆತನ ವಿಚಾರಣೆಯಾಗಿ ಶಿಕ್ಷೆಯಾಗಬೇಕಷ್ಟೇ ಅಲ್ಲ, ಭಾರತೀಯ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ, ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಪಡೆಯುವಂತಾಗಲು ತಕ್ಷಣವೇ ಒಂದು ನ್ಯಾಯಾಂಗ ತನಿಖೆ ನಡೆಯಬೇಕು.

ಪುರುಲಿಯ

ಉತ್ತರ ಸಿಗಬೇಕಾದ ಹಲವು ಪ್ರಶ್ನೆಗಳು

ಬಂಗಾಲದ ಚುನಾವಣಾ ಪ್ರಚಾರದ ಭಾಷಣಗಳಲ್ಲಿ ಕೇಂದ್ರ ಗೃಹಮಂತ್ರಿಗಳ ಅಬ್ಬರ, ಅದು 'ದೇಶದಲ್ಲೇ ಅತಿ ಕೆಟ್ಟ ಆಡಳಿತದ ರಾಜ್ಯ', ಸಿಪಿಐ(ಎಂ) ಅದನ್ನು 'ಸಾಯಿಸುವ ಕ್ಷೇತ್ರ'ಗಳಾಗಿ ಮಾಡಿ ಬಿಟ್ಟಿದೆ ಎಂಬಿತ್ಯಾದಿ ವರ್ಣನೆಗಳ ಅಬ್ಬರ ಇಳಿಯುವ ಮೊದಲೇ, ಪುರುಲಿಯದಲ್ಲಿ 15 ವರ್ಷಗಳ ಕೆಳಗೆ, ಡಿಸೆಂಬರ್ 1995ರಲ್ಲಿ, ಶಸ್ತ್ರಾಸ್ತ್ರಗಳ ದೊಡ್ಡ-ದೊಡ್ಡ ಗಂಟುಗಳನ್ನು ವಿಮಾನದಿಂದ ಉದುರಿಸಿ ಹೋದ ಘಟನೆಯ ಬಗ್ಗೆ ಹಲವು ವಿಷಯಗಳು ಪ್ರಕಟವಾದವು. ಈ ಘಟನೆಯ ಕಟ್ಟಾಳು ಕಿಮ್ ಡೆವಿ ಎಂಬಾತ ಹೊರಗೆಡಹಿದನೆನ್ನಲಾದ ಸಂಗತಿಗಳು ಮಾಧ್ಯಮಗಳಲ್ಲಿ ಪ್ರಕಟವಾದವು.

1995ರ ಡಿಸೆಂಬರ್ 17-18 ರ ರಾತ್ರಿ ಪಶ್ಚಿಮ ಬಂಗಾಲದ ಪುರುಲಿಯ ಜಿಲ್ಲೆಯ ಆನಂದ ಮಾರ್ಗ ಮುಖ್ಯಾಲಯದ ಬಳಿ ಮಾರಕ ಅಸ್ತ್ರಗಳನ್ನು ತುಂಬಿಕೊಂಡಿದ್ದ ವಿಮಾನವೊಂದು ಬಂದು ಅವನ್ನು ನೆಲಕ್ಕೆ ಸುರಿದು ಹೋಯಿತು. ಸಿಬಿಐ ಫೆಬ್ರುವರಿ 2000ದಲ್ಲಿ ಕೊಲ್ಕತಾದ ವಿಶೇಷ ಸೆಷನ್ಸ್ ಕೋರ್ಟಿಗೆ ಸಲ್ಲಿಸಿದ ಅಂಶಗಳ ಪ್ರಕಾರ, ಅಲ್ಲಿ ಉದುರಿಸಿದ 500 ಎಕೆ-47 ಪಿಸ್ತೂಲುಗಳಲ್ಲಿ 87ನ್ನು ಮಾತ್ರ, 15 ಲಕ್ಷ ಸುತ್ತಿನ ಮದ್ದುಗುಂಡುಗಳು ಮತ್ತು ಇತರ ಮಾರಕಾಸ್ತ್ರಗಳಲ್ಲಿ ಒಂದು ಸಣ್ಣ ಪ್ರಮಾಣವನ್ನು ಮಾತ್ರವೇ ವಶಪಡಿಸಿಕೊಳ್ಳಲಾಗಿದೆ. ಇವೆಲ್ಲ ಈಗ ಎಲ್ಲಿವೆ. ಈ 'ಸಾಯಿಸುವ ಕ್ಷೇತ್ರ'ಗಳನ್ನು ಸೃಷ್ಟಿಸುತ್ತಿರುವವರು ಯಾರು ಎಂದು ಈ ಗೃಹಮಂತ್ರಿಗಳು ದೇಶಕ್ಕೆ ಹೇಳಬಲ್ಲರೇ?

ಅಂತರ್ರಾಷ್ಟ್ರೀಯ ಪಿತೂರಿ

ಈ ಶಸ್ತ್ರಾಸ್ತ್ರಗಳು ಆನಂದಮಾರ್ಗ ಆಗ ಪಶ್ಚಿಮ ಬಂಗಾಲದಲ್ಲಿ ಹರಿಯಬಿಡಬೇಕೆಂದಿದ್ದ ಹಿಂಸಾಚಾರಕ್ಕಾಗಿ ಬಂದವುಗಳು ಎಂಬ ಭಾವನೆ ಆಗ ವ್ಯಾಪಕವಾಗಿತ್ತು. ಇದಕ್ಕೆ ಮೊದಲು ಇದೇ ಆನಂದಮಾರ್ಗ ಕಾಮ್ರೇಡ್ ಜ್ಯೋತಿ ಬಸುರವರನ್ನು ಸಾಯಿಸುವ ಪ್ರಯತ್ನ ನಡೆಸಿ ವಿಫಲವಾಗಿತ್ತು ಎಂಬುದನ್ನು ನೆನಪಿಸಿಕೊಳ್ಳಿ. ಸಿಬಿಐ ಸಲ್ಲಿಸಿದ ವಿವರಗಳ ಪ್ರಕಾರ ಈ ಕಿಮ್ ಡೆವಿ, ಪೀಟರ್ ಬ್ಲೀಚ್ ಎಂಬಾತನೊಂದಿಗೆ ಸೇರಿಕೊಂಡು ಆಗಸ್ಟ್ 18, 1995ರಂದು ಡೆನ್ಮಾರ್ಕಿನ ಕೊಪನ್‌ಹೇಗನ್‌ನಲ್ಲಿ ಇದರ ವಿವರಗಳನ್ನು ಅಂತಿಮಗೊಳಿಸಿದ. ಈ ಕಾರ್ಯಾಚರಣೆಯಲ್ಲಿ ಕನಿಷ್ಟ ಆರು ದೇಶಗಳ ಜನರು ಭಾಗವಹಿಸಿದ್ದರು ಎಂಬ ಸಂಗತಿಯಿಂದಲೇ ಇದೊಂದು ಅಂತರ್ರಾಷ್ಟ್ರೀಯ ಪಿತೂರಿ ಎಂಬುದು ತಿಳಿದು ಬಂದಿತ್ತು.



ಈ ಶಸ್ತ್ರಾಸ್ತ್ರಗಳು ಆನಂದಮಾರ್ಗದ ಪ್ರಚೋದನಾತ್ಮಕ ಪ್ರಚಾರಕ್ಕಾಗಿ ಬಂದದ್ದು ಎಂಬುದು ಎಲ್ಲರಿಗೂ ತಿಳಿದ ವಿಚಾರ. ಆದರೆ, ಈಗ ಕಿಮ್ ಡೆವಿ ಹೇಳಿರುವುದನ್ನು ನಂಬುವುದಾದರೆ, ಈ ಮಾರಕ ಶಸ್ತ್ರಾಸ್ತ್ರಗಳನ್ನು ಉದುರಿಸಿ ಹೋಗುವಲ್ಲಿ ಆಗಿನ ಭಾರತ ಸರಕಾರದ ಗಂಭೀರ ಪಾತ್ರವೂ ಇತ್ತು ಎಂಬ ಸಂಕೇತ ಸಿಗುತ್ತದೆ. ಪಿ.ವಿ.ನರಸಿಂಹರಾವ್ ನೇತೃತ್ವದ ಆಗಿನ ಕಾಂಗ್ರೆಸ್ ಕೇಂದ್ರ ಸರಕಾರ ಇದಕ್ಕೆ ಅವಕಾಶ ನೀಡಿ, ಅದರಿಂದಾಗಿ ಉಂಟಾಗಬಹುದಾದ ಹಿಂಸಾಚಾರ ಮತ್ತು ಅರಾಜಕತೆಯನ್ನು ಬಳಸಿಕೊಂಡು ಚುನಾಯಿತ ರಾಜ್ಯಸರಕಾರವನ್ನು ಅಸ್ಥಿರಗೊಳಿಸಬಹುದು ಎಂದು ಭಾವಿಸಿದ್ದಾಗಿ ಕಿಮ್ ಡೆವಿ ಆಪಾದಿಸಿದ್ದಾನೆ. 1996ರಲ್ಲಿ ಸಂಸತ್ತಿಗೂ, ರಾಜ್ಯ ವಿಧಾನಸಭೆಗೂ ಚುನಾವಣೆ ನಡೆಯುವುದಿತ್ತು. ಈ ಹಿಂದೆ ತ್ರಿಪುರಾದಲ್ಲಿ ವಿವಿಧ ಬಂಡುಕೋರ ಗುಂಪುಗಳಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸಿ, ಅದರಿಂದುಂಟಾದ ಹಿಂಸಾಚಾರವನ್ನು ಅಲ್ಲಿ ಎಡರಂಗ ಸರಕಾರವನ್ನು ಅಸ್ಥಿರಗೊಳಿಸಲು ಬಳಸಿಕೊಂಡಂತೆ, ಬಂಗಾಲದಲ್ಲೂ ಅಂತಹುದೇ ಪರಿಸ್ಥಿತಿಯನ್ನು ಸೃಷ್ಟಿಸುವ ಪ್ರಯತ್ನ ನಡೆದಿತ್ತು ಎಂದು ಕೂಡ ಡೆವಿ ಹೇಳಿದ್ದಾನೆ.

ಗಂಭಿರ ಲೋಪ ಹೇಗಾಯಿತು?

ಆ ಸಮಯದ ಕೆಲವು ರಹಸ್ಯ ಘಟನೆಗಳಿಗೆ ಈಗಲೂ ಉತ್ತರ ದೊರೆಯದಿರುವುದು ಈ ಆಪಾದನೆಗಳು ನಿಜವಿರಬಹುದೇನೋ ಎಂಬ ಭಾವನೆ ಹುಟ್ಟಿಸುತ್ತದೆ. ಬ್ರಿಟಿಶ್ ಗುಪ್ತಚರ ಸಂಸ್ಥೆ ಎಂಐ5 ರವಾನಿಸಿದ ಮಾಹಿತಿಗಳನ್ನು ಉಪೇಕ್ಷಿಸಲಾಯಿತೇಕೆ? ಈ ಎಚ್ಚರಿಕೆಯ ಮಾಹಿತಿಯನ್ನು ಕೇಂದ್ರ ಸರಕಾರ ಪಶ್ಚಿಮ ಬಂಗಾಲ ರಾಜ್ಯ ಸರಕಾರಕ್ಕೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳಿಸಿತು! ಅದು ರಾಜ್ಯ ಸರಕಾರದ ಕೈಸೇರಿದ್ದು ಶಸ್ತ್ರಾಸ್ತ್ರಗಳನ್ನು ಉದುರಿಸಿ ಹೋದ ನಂತರವೇ. ಒಂದು ವಿದೇಶಿ ವಿಮಾನ ಪಾಕಿಸ್ತಾನಿ ಪ್ರದೇಶದಿಂದ ಹೊರಟು ಭಾರತೀಯ ವಾಯುಪ್ರದೇಶವನ್ನು ಪ್ರವೇಶಿಸಲು ಹೇಗೆ

ಪುಟ 15ಕ್ಕೆ

ಕಿಮ್ ಡೆವಿ ಮತ್ತು ಪೀಟರ್ ಬ್ಲೀಚ್ ಹೇಳಿರುವುದೇನು?

ಕಿಮ್ ಡೆವಿ(ಆತನ ನಿಜವಾದ ಹೆಸರು ನೀಲ್ಸ್ ಕ್ರಿಶ್ಚಿಯನ್ ನೀಲ್ಸನ್ ಅಂತೆ) 'ಟೈಮ್ಸ್ ನೌ' ವಾಹಿನಿಗೆ ನೀಡಿದ ಸಂದರ್ಶನದಲ್ಲಿ ತಾನೇನೂ ಕಾನೂನುಬಾಹಿರ ಕೆಲಸ ಮಾಡಿಲ್ಲ, ಏಕೆಂದರೆ ಭಾರತ ಸರಕಾರಕ್ಕೆ ಇದು ಗೊತ್ತಿತ್ತು, ಬ್ರಿಟಿಶ್ ಮತ್ತು ಭಾರತದ ಗುಪ್ತಚರ ಸಂಸ್ಥೆಗಳಿಗೆ(ಎಂಐ5 ಮತ್ತು ಆರ್‌ಎಡಬ್ಲ್ಯು) ಇದು ಗೊತ್ತಿತ್ತು ಎಂದಿದ್ದಾನೆ. ದಿಲ್ಲಿಯಲ್ಲಿರುವ ಒಬ್ಬ ಪ್ರಭಾವೀ ಎಂ.ಪಿ. ಇದರ ಸೂತ್ರಧಾರ ಎಂದಿರುವ ಆತ ತಾನು ತಪ್ಪಿಸಿಕೊಂಡದ್ದಲ್ಲ, ತನ್ನನ್ನು ಆತ ನೇಪಾಳಕ್ಕೆ ಕರೆದೊಯ್ದ ಎಂದಿರುವ ಈತ ಕಮ್ಯುನಿಸ್ಟರ ಬಗ್ಗೆ ಆಗ ಆನಂದಮಾರ್ಗ ಮತ್ತು ಈಗಲೂ ಇತರ ಕಟ್ಟಾ ಕಮುನಿಸ್ಟ್-ವಿರೋಧಿಗಳಂತೆ ವಿಷ ಉಗುಳುವ ಮಾತುಗಳ ಮೂಲಕ ತನ್ನನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾನೆ.



ಪೀಟರ್ ಬ್ಲೀಚ್ ಕೂಡ ಇದರಲ್ಲಿ ಭಾರತ ಸರಕಾರದ ಪಾತ್ರವಿದೆ ಎಂದು ದೃಢಪಡಿಸಿದ್ದಾನೆ, ಆತ ಬ್ರಿಟಿಶ್ ಗುಪ್ತಚರ ಸಂಸ್ಥೆ ಎಂಐ5 ಇದರಲ್ಲಿ ಶಾಮೀಲಾಗಿದೆ ಎಂದಿಲ್ಲ, ಅದಕ್ಕೆ ಈ ಬಗ್ಗೆ ಮಾಹಿತಿಯಿತ್ತು, ಅದನ್ನು ಅದು ಭಾರತ ಸರಕಾರಕ್ಕೆ ತಿಳಿಸಿತ್ತು ಎಂದಿದ್ದಾನೆ. ತಾನೊಬ್ಬ ರಕ್ಷಣಾ ವಲಯದ ವ್ಯಾಪಾರಸ್ಥನಾಗಿದ್ದು, ಇದು ಭಾರತದ ಒಂದು ಭಯೋತ್ಪಾದಕ ಸಂಘಟನೆಗಾಗಿ ನಡೆಸುವ ಒಂದು ಕಾನೂನು ಬಾಹಿರ ಕಾರ್ಯಾಚರಣೆ ಎಂದು ಅನಿಸಿದಾಗ ಬ್ರಿಟನ್ನಿನಲ್ಲಿ ಪೋಲೀಸಿಗೆ ದೂರು ನೀಡಿದೆ ಎಂದಿದ್ದಾನೆ ಆತ. ಗುಪ್ತಚರ ಸಂಘಟನೆಯವರು ಈ ಸಂದೇಶವನ್ನು ಭಾರತ ಸರಕಾರಕ್ಕೆ ರವಾನಿಸಿದರು, ಆಗ ಆ ಭಯೋತ್ಪಾದಕ ಸಂಘಟನೆಯನ್ನು ಹಿಡಿದು ಹಾಕುವ ಕಾರ್ಯಾಚರಣೆ ಇದು ಎನ್ನಲಾಯಿತಂತೆ. 'ಭಾರತ ಸರಕಾರಕ್ಕೆ ಎಲ್ಲ ವಿವರಗಳು ತಿಳಿದಿದ್ದವು. ನಾನು ಭಾರತ ಸರಕಾರದ ಕೆಲಸ ಮಾಡುತ್ತಿದ್ದೆ, ನಾನೇನೂ ಭಯೋತ್ಪಾದಕನಲ್ಲ, ಅಂತಹ ಹಣೆಪಟ್ಟಿ ನನಗೆ ನೋವು ತಂದಿದೆ' ಎಂದಿರುವ ಆತ ಸಿಪಿಐ(ಎಂ) ಸರಕಾರವನ್ನು ಅಸ್ಥಿರಗೊಳಿಸಿ ದಿಲ್ಲಿ ಆಳ್ವಿಕೆಯನ್ನು ತರುವುದು ಇದರ ಉದ್ದೇಶ ಎಂದು ನೇರವಾಗಿಯೇ ಹೇಳಿದ್ದಾನೆ.

ಈಗ ಏಕೆ ನೀವು ಬಾಯಿತೆರೆದಿರಿ ಎಂಬ ಪ್ರಶ್ನೆಗೆ ಅವರಿಬ್ಬರ ಉತ್ತರವೂ ಒಂದೇ- 'ನನ್ನನ್ನು ಭಾರತಕ್ಕೆ ವಿಚಾರಣೆಗೆ ಒಪ್ಪಿಸುವ ಭಯವಿದೆ' ಎಂದು ಡೆವಿ ಹೇಳಿದರೆ, 'ಇದ್ದಕ್ಕಿದಂತೆ, ಭಾರತಕ್ಕೆ ನೀಲ್ಸ್ ಕ್ರಿಶ್ಚಿಯನ್ ನೀಲ್ಸನ್ ಅಥವ ಕಿಮ್ ಡೆವಿ ಅಥವ ನೀಲ್ಸ್ ಹೊಲ್ಕ್ ಅಥವ ಇನ್ನೇನೋ ಅವನ ಹೆಸರು, ಮತ್ತೆ ಬೇಕಾಗಿದ್ದಾನಂತೆ. ಇದು ಮತ್ತೆ ಬಂದಿದೆ. ನನ್ನ ಬದುಕನ್ನು ಮತ್ತೆ ಕದಡಿಸಿದೆ. ಈಗ ಸತ್ಯ ಹೇಳಲೇಬೇಕಾದ ಸಮಯ ಬಂದಿದೆ' ಎಂಬುದು ಬ್ಲೀಚ್‌ನ ಉತ್ತರ.

ಮೇ ದಿನದ ಕಹಳೆ

ಮೇ ದಿನ ಕಾರ್ಮಿಕ ಹಬ್ಬ. ದುಡಿಯುವ ಜನರ ವಾರ್ಷಿಕ ಹಬ್ಬ. ಜಗದುದ್ದಗಲ ಆಚರಿಸುವ ಕೆಂಪು ಹಬ್ಬ. ಈ ಹಬ್ಬ ಬೆಂಗಳೂರಿನಲ್ಲಿಯೂ ಸಂಭ್ರಮದಿಂದಲೇ ಆಚರಿಸಲ್ಪಟ್ಟಿತು. ಹಬ್ಬ ಬೆಂಗಳೂರಿನಲ್ಲಿಯೂ ಸಂಭ್ರಮದಿಂದಲೇ ಆಚರಿಸಲ್ಪಟ್ಟಿತು. ತಮ್ಮ ತಮ್ಮ ಕಾರ್ಖಾನೆಗಳಲ್ಲಿ ಹಾಗೂ ವಿವಿಧ ಬಡಾವಣೆಗಳಲ್ಲಿ ಮೇ ದಿನಾಚರಣೆಯ ಧ್ವಜಾರೋಹಣದಲ್ಲಿ ಪಾಲ್ಗೊಂಡ ಕಾರ್ಮಿಕರು ಮೇ 1 ರಂದು ಬೆಳಿಗ್ಗೆ 11 ರ ಸುಮಾರಿಗೆ ಬೆಂಗಳೂರಿನ ಪುರಭವನದ ಎದುರು ನೆರೆದರು.

ಅಂದು ಭಾನುವಾರ. ಬರೀ ಕಾರ್ಮಿಕರು ಮಾತ್ರವಲ್ಲ ಹಲವರು ತಮ್ಮ ತಮ್ಮ ಕುಟುಂಬ ಸದಸ್ಯರೊಂದಿಗೆ ಬಂದವರೂ ಇದ್ದರು. ಕೆಂಪು ಬಾವುಟಗಳು ಪಟಪಟನೆ ಬೀಸುವ ಕಾರ್ಮಿಕರ ಮೆರವಣಿಗೆ ಕಾರ್ಪೊರೇಷನ್ ಮೈಸೂರು ಬ್ಯಾಂಕ್ ಮಾರ್ಗವೇ ಗಾಂಧಿನಗರದ ಸ್ವಾತಂತ್ರ್ಯ ಉದ್ಯಾನದ ಪಕ್ಕದ ಕಾಳಿದಾಸ ಮಾರ್ಗಕ್ಕೆ ಬಂತು. ಅಲ್ಲಿ ಬಹಿರಂಗ ಸಭೆ.

ಸಭೆಯಲ್ಲಿ ಕಾರ್ಮಿಕ ಮುಖಂಡರಲ್ಲದೇ ಮತ್ತೊಬ್ಬರು ಗಮನ ಸೆಳೆದರು. ಅವರು ಹುಲಿಕಲ್ ನಟರಾಜ್, ಪವಾಡಗಳನ್ನು ಬಯಲಿಗೆಳೆವ ಪವಾಡ ಭಂಜಕರು. ಸಭೆಯ ಆರಂಭದಲ್ಲಿ ಸ್ಪೂರ್ತಿಯುತ ಘೋಷಣೆ

ಚಿಕಾಗೋದ ಬೀದಿಯಲ್ಲಿ

ಚಿಕಾಗೋದ ಬೀದಿಯಲ್ಲಿ
ಅಂದು ಹರಿದ ನಿಮ್ಮಯ ರಕ್ತ....
ಅದು ನಮ್ಮಯ ರಕ್ತ...
ವ್ಯರ್ಥವಲ್ಲ... ವ್ಯರ್ಥವಲ್ಲ... ನಿಮ್ಮಯ ತ್ಯಾಗ ವ್ಯರ್ಥವಲ್ಲ.

ಮೇ ದಿನದ ಹುತಾತ್ಮರನ್ನು ಸ್ಮರಿಸಲಾಯಿತು.

ಮೊದಲಿಗೆ ಮಾತನಾಡಿದವರು ಸಿಐಟಿಯು ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಹೆಚ್.ಎನ್.ಗೋಪಾಲಗೌಡ. ಅವರೇ ಸಭೆಯ ಅಧ್ಯಕ್ಷರು. ಗುತ್ತಿಗೆ ಕಾರ್ಮಿಕರ ಅವಿರತ ಶೋಷಣೆಯನ್ನು ಖಂಡಿಸಿದ ಅವರು ದೇಶದಲ್ಲಿ, ರಾಜ್ಯದಲ್ಲಿ ದುಡಿಯುವ ಜನರ ಪರವಾಗಿ ಕಾರ್ಮಿಕರ ಪರವಾಗಿ ದನಿ ಎತ್ತುವ ಸಂಸದರು, ಶಾಸಕರು ಕೇವಲ ಎಡಪಕ್ಷಗಳವರು ಎಂಬುದನ್ನು ಕಾರ್ಮಿಕರು ಗಮನಿಸಬೇಕೆಂದು ಕಾರ್ಮಿಕರಿಗೆ ಕರೆ ನೀಡಿದರು.

ರಾಜಕುಮಾರನ ಮದುವೆಯೇ ಸಂಭ್ರಮ !!

ಬ್ರಿಟನ್ನಿನ ರಾಜಕುಮಾರನ ಮದುವೆಯ ಸುದ್ದಿಯನ್ನು ಜಗತ್ತಿನಲ್ಲೆಲ್ಲ ಬಾರಿ ಸುದ್ದಿಯೆಂಬಂತೆ ಪ್ರಸಾರ ಮಾಡಲಾಗುತ್ತಿದೆ. ಕಾರ್ಮಿಕರ ಬೃಹತ್ ಆಂದೋಲನಗಳನ್ನು ತೋರಿಸದೇ ಮರೆಮಾಚಲಾಗುತ್ತದೆ.

ರಾಜ್ಯದಲ್ಲಿ ಯಡಿಯೂರಪ್ಪ ಕಾರ್ಮಿಕರು 10


ವಿ.ಜೆ.ಕೆ.ನಾಯರ್

ಗಂಟೆ ಕೆಲಸ ಮಾಡಬೇಕೆಂದು ಮಾಲೀಕರ ಪರವಾಗಿ ಕಾನೂನು ತಿದ್ದುಪಡಿ ಮಾಡಿದ್ದಾರೆ. ಆ ಬಗ್ಗೆ ಕೇಳಿದರೆ ಕಾರ್ಮಿಕರಿಗೆ ಓ.ಟಿ. ಸಿಗಲಿ ಅಂತ ಹಾಗೆ ಮಾಡಿದ್ದೇವೆ. ಒಳ್ಳೆಯದು ಮಾಡಿದರೆ ಸಿಐಟಿಯು ಯಾಕೆ ಗಲಾಟೆ ಮಾಡುವುದು ಎಂದು ಒಮ್ಮೆ ಹೇಳಿದರೆ 10 ಸಾವಿರ ಕೂಲಿ ಕೇಳುವುದಾದರೆ 10 ಗಂಟೆ ದುಡಿಬೇಕ್ರಿ ಎಂದು ಹೇಳಿದ್ದಾರೆ. ಇದು ಅವರ ಮಾಲಿಕರ ಪರ ಧೋರಣೆ ತೋರುತ್ತಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಮೀನಾಕ್ಷಿ ಸುಂದರಂ ಹೇಳಿದರು. ಸರ್ಕಾರ ಕನಿಷ್ಟ ಕೂಲಿಯನ್ನು 10 ಸಾವಿರಕ್ಕೆ ನಿಗದಿ ಮಾಡಿಲ್ಲವಲ್ಲ ಎಂದೂ ಅವರು ಪ್ರಶ್ನಿಸಿದರು.

ದಿನಕ್ಕೆ 10 ಲೀಟರ್ ಪೆಟ್ರೋಲ್ ಕೊಡಿ

ವಿ.ಜೆ.ಕೆ. ನಾಯರ್

ನಮ್ಮ ಸಮಾಜದಲ್ಲಿ ಜನಸಂಖ್ಯೆಯ ಶೇ.40 ರಷ್ಟು ಜನ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಕಾರ್ಮಿಕರ ದುಡಿಮೆಯ ಫಲ ಯಾರದೋ ಕೈಗೆ ಹೋಗುತ್ತಿರುವುದರಿಂದ ಇಂತಹ ಪರಿಸ್ಥಿತಿ ಬಂದಿದೆ.



2008 ರ ಬೆಲೆಗಳ ಪರಿಸ್ಥಿತಿಗೆ ತಕ್ಕಂತೆ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 10 ಸಾವಿರ ಕನಿಷ್ಟ ಕೂಲಿ ಕೊಡಬೇಕಿತ್ತು. ಆದರೆ ಈಗ ಬೆಲೆಗಳು ಮತ್ತಷ್ಟು ಏರಿಕೆಯಾಗಿವೆ. ಆದ್ದರಿಂದ ಇಂದಿನ ಬೆಲೆಗೆ ತಕ್ಕಂತೆ ಕನಿಷ್ಠ ಕೂಲಿ ಇನ್ನಷ್ಟು ಹೆಚ್ಚಾಗಬೇಕು. ಅಕ್ಕಿ ಬೆಲೆ ಹೆಚ್ಚಾಗಿದೆ. ಪೆಟ್ರೋಲ್


ಹೆಚ್.ಎನ್.ಗೋಪಾಲಗೌಡ



ಬೆಲೆ ಹೆಚ್ಚಾಗಿದೆ. ಸೀಮೆ ಎಣ್ಣೆ ಸಿಗುವುದೇ ಇಲ್ಲ.

ಇನ್ನು ಮುಂದೆ ಕಾರ್ಮಿಕರು ದುಡ್ಡಿನ ಲೆಕ್ಕದಲ್ಲಿ ವೇತನ ಕೇಳುವುದು ಬಿಟ್ಟು ದಿನಕ್ಕೆ 10 ಲೀ ಪೆಟ್ರೋಲನ್ನು ಕೂಲಿಯಾಗಿ ಕೊಡಿ ಎಂದು ಬೇಡಿಕೆ ಇಡಬೇಕಾಗುತ್ತಿದೆ.

1990ರ ಮೊದಲ ಮೇ ದಿನದ ಆಚರಣೆ ನಡೆದ 120 ವರ್ಷಗಳು ಉರುಳಿ 121ನೇ ಮೇ ದಿನ ಬಂದಿದೆ. ಸಿಐಟಿಯು ಸ್ಥಾಪನೆಯಾಗಿ 40 ವರ್ಷಗಳು ಉರುಳಿವೆ. ದಿನೇ ದಿನೇ ದುರ್ಬರಗೊಳ್ಳುತ್ತಿರುವ ಕಾರ್ಮಿಕರ ಪರಿಸ್ಥಿತಿಯ ವಿರುದ್ಧ 2012 ರ ಮೇ ದಿನಾಚರಣೆ ಒಂದು ಬೃಹತ್ ಹೋರಾಟದ ಮೂಲಕ ನಡೆಯಲಿ ಎಂದು ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ವಿ.ಜೆ.ಕೆ. ನಾಯರ್ ಕರೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಮುಖಂಡರಾದ ಎಸ್.ಎಸ್.ಹದ್ಲಿಯವರು, ಕೆನರಾ ಬ್ಯಾಂಕ್ ನೌಕರರ ಸಂಘದ ರಾಷ್ಟ್ರೀಯ ಅಧ್ಯಕ್ಷರು, ಬಿಇಎಫ್ಐ ಮುಖಂಡರು ಆದ ರತ್ನಾಕರ ಶೆಣೈ, ವಿಮಾ ನೌಕರರ ಸಂಘಟನೆಯ ಮುಖಂಡರಾದ ವಿ.ಗೋಪಾಲ್. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಕೆ.ಎನ್. ಉಮೇಶ್ ಮುಂತಾದವರು ವೇದಿಕೆಯಲ್ಲಿ ಮಾತನಾಡಿದರು.

ಶತಮಾನದ ಹಿಂದೆ ಅಮೇರಿಕದಲ್ಲಿ ಮೇ ದಿನಾಚರಣೆಯ ಸಂದರ್ಭದಲ್ಲಿ ಕಾರ್ಮಿಕರನ್ನು 'ಚಚ್ಚಬೇಕು' ಎಂದು ಬರೆದ ಚಿಕಾಗೋ ಟೈಮ್ಸ್ ಮತ್ತು ಟ್ರಿಬ್ಯೂನ್ ಪತ್ರಿಕೆಗಳು ಇಂದು ಮುಚ್ಚಿಹೋಗಿವೆ. ಆದರೆ ಕಾರ್ಮಿಕ ಆಂದೋಲನ ಮುಂದುವರೆದಿದೆ ಎಂದು ರತ್ನಾಕರ ಶೆಣೈ ಹೇಳಿದರು.

ಕೆ.ಎನ್.ಉಮೇಶ್‌ರವರು ಉದ್ಯೋಗಗಳ ಗುತ್ತಿಗೀಕರಣ ಹೆಚ್ಚುತ್ತಿರುವುದನ್ನು ಖಂಡಿಸಿದರು. ಅಲ್ಲದೆ ಗುತ್ತಿಗೆ ಕಾರ್ಮಿಕರು 5 ದಿನ ಗೈರು ಹಾಜರಾದರೆ ಸಾಕು ಕಿತ್ತುಹಾಕುತ್ತೇವೆ ಎನ್ನುವ ನೀತಿ ತರುತ್ತಿರುವುದನ್ನು ಹಾಗೂ ಹೈರ್ ಅಂಡ್ ಫೈರ್ ಅಂದರೆ (ಬಳಸು ಬಿಸಾಡು) ನೀತಿ ಹೆಚ್ಚುತ್ತಿರುವುದನ್ನು ಖಂಡಿಸಿದರು.

ವಿವಿಧ ಸಂಗಾತಿಗಳ ಭಾಷಣಗಳ ನಡುನಡುವೆ ಹುಲಿಕಲ್ ನಟರಾಜ್‌ರವರು ವಿವಿಧ ಬಗೆಯ ಪವಾಡಗಳ ರಹಸ್ಯವನ್ನು ಬಯಲು ಮಾಡುತ್ತಾ ಹೋದರು. ನೋಟನ್ನು ಹೂವಾಗಿಸುವುದು, ಗಾಜು ತಿನ್ನುವುದು, ಗಾಜಿನ ಮೇಲೆ ಕುಣಿದಾಡುವುದು... ತಲೆಗೆ ಚಾಕು ಚುಚ್ಚುವುದು. ಇತ್ಯಾದಿ ಇತ್ಯಾದಿ ಪವಾಡಗಳ ರಹಸ್ಯಗಳು ಇಲ್ಲಿ ಬಯಲಾದವು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷರು ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಕಾರ್ಯದರ್ಶಿ ಪ್ರತಾಪ್ ವಂದಿಸಿದರು.

ಮಂಗಳೂರಿನಲ್ಲಿ ಮೇ ದಿನಾಚರಣೆ :

'ಬಂಡವಾಳಶಾಹಿಗಳು ಒಗ್ಗಟ್ಟಾಗುತ್ತಿರುವ ಸಂದರ್ಭದಲ್ಲಿ ಕಾರ್ಮಿಕ ಪರ ಹೋರಾಟ ತೀವ್ರಗೊಳ್ಳಬೇಕಾಗಿದೆ' ಎಂದು ಸಿಐಟಿಯು ರಾಜ್ಯಸಮಿತಿ ಉಪಾಧ್ಯಕ್ಷ ಬಿ.ಮಾಧವ ಕರೆ ನೀಡಿದರು. ಅವರು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಎದುರು ಸಿಐಟಿಯು ವತಿಯಿಂದ ಮೇ ಒಂದರಂದು ಕಾರ್ಮಿಕ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸಾರ್ವಜನಿಕ ಸಭೆಯಲ್ಲಿ

ಪುಟ 13 ರಲ್ಲಿ


ಗಾಜಿನ ಚೂರುಗಳ ಮೇಲೆ ಕುಣಿದಾಟ.... ಪವಾಡ ರಹಸ್ಯ ಬಯಲು

ರಾಮದುರ್ಗ: ಹೋರಾಟಕ್ಕೆ ಮಣಿದ ತಾಲ್ಲೂಕು ಆಡಳಿತ

ಕಳೆದ 2009 ರಲ್ಲಿ ಸುರಿದ ಭಾರೀ ಮಳೆಗೆ ತುರುನೂರು ಗ್ರಾಮ ಪಂಚಾಯತ ವ್ಯಾಪ್ತಿಯ ಭಾಗ್ಯನಗರ ಮತ್ತು ಶ್ರೀಪತಿನಗರಗಳ ಮನೆ ಕಳೆದುಕೊಂಡ ಸಂತ್ರಸ್ತರಿಗೆ ಇದುವರೆಗೂ ಪರಿಹಾರ ನೀಡದಿರುವುದನ್ನು ಪ್ರತಿಭಟಿಸಿ ನಡೆದ ತೀವ್ರ ಹೋರಾಟಕ್ಕೆ ತಾಲ್ಲೂಕು ಆಡಳಿತ ಮಣಿದು ಎಲ್ಲಾ ಸಂತ್ರಸ್ತರಿಗೆ ಚೆಕ್‌ಗಳನ್ನು ವಿತರಿಸಿದೆ. ಹೋರಾಟಕ್ಕೆ ಭಾರೀ ಯಶಸ್ಸು ದೊರೆತಿದೆ.

ಸುಮಾರು ಒಂದೂವರೆ ವರ್ಷಗಳಿಂದ ಅನ್ಯಾಯ ನಡೆದಿರುವ ಬಗ್ಗೆ ತಹಶೀಲ್ದಾರರಿಗೆ ತಿಳಿಸುತ್ತಾ ಬರಲಾಗಿತ್ತು. ಎರಡು ಸಲ ಸರದಿ ಉಪವಾಸ ಸತ್ಯಾಗ್ರಹ ನಡೆದಿತ್ತು. ಯಾವುದಕ್ಕೂ ಸ್ಪಂದಿಸದಿದ್ದ ಕಾರಣ ದಿನಾಂಕ 14.03.2011ರಂದು ಸಿಪಿಐ(ಎಂ) ಪಕ್ಷದ ಮುಖಂಡ ವ್ಹಿ.ಪಿ.ಕುಲಕರ್ಣಿ ಮತ್ತು ಅವರೊಟ್ಟಿಗೆ ಐವತ್ತು ಜನ ಆಮರಣ ಉಪವಾಸ ಸತ್ಯಾಗ್ರಹ ಕೈಗೊಂಡರು.

ಜನರ ಮನವಿಗೆ ಕಿವಿಗೊಡುವ ಬದಲು ತಹಶೀಲ್ದಾರ ಗೀತಾ ಕೌಲಗಿಯವರು ಸತ್ಯಾಗ್ರಹ ನಿರತರಿಗೆ ಟೆಂಟ್ ಹಾಕಲೂ ಅನುಮತಿ ನೀಡದ ಕಾರಣ ಸಿಡಿದೆದ್ದ ಸತ್ಯಾಗ್ರಹ ನಿರತರು ಉರಿವ ಬಿಸಿಲಲ್ಲೇ ಸತ್ಯಾಗ್ರಹ ಆರಂಭಿಸಿದರು.

ಪೊಲೀಸ್ ಅಧಿಕಾರಿಗಳು ಹಾಗೂ ಇತರ ಅಧಿಕಾರಿಗಳು ತಹಶೀಲ್ದಾರರಿಗೆ ಛೀಮಾರಿ ಹಾಕಿದಾಗ ಒತ್ತಡಕ್ಕೆ ಮಣಿದು ಬೈಲಹೊಂಗಲದ ಉಪವಿಭಾಗಾಧಿಕಾರಿಗಳಿಗೆ ಸಂತ್ರಸ್ತರ ಪಟ್ಟಿಯನ್ನು ಫ್ಯಾಕ್ಸ್ ಮೂಲಕ ಕಳಿಸಿ ಮರಳಿ ಫ್ಯಾಕ್ಸ್ ಮೂಲಕವೇ ಅನುಮತಿ ಪಡೆದು ಎಲ್ಲಾ ಸಂತ್ರಸ್ತರಿಗೆ ಚೆಕ್‌ಗಳನ್ನು ವಿತರಿಸಿದರು.

ಸತ್ಯಾಗ್ರಹ ಸಂದರ್ಭದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಗೈಬು ಜೈನೆಖಾನ, ವ್ಹಿ.ಪಿ.ಕುಲಕರ್ಣಿ, ದ.ಸಂ.ಸ. ನಾಯಕ ಬಿ.ಆರ್.ದೊಡ್ಡಮನಿ, ಎಸ್.ಬಿ.ಹಳ್ಳಿ ಮತ್ತು ನಾಗಪ್ಪ ಸಂಗೊಳ್ಳಿ ಮಾತನಾಡಿದರು.

ಭಾಗ್ಯನಗರ, ಶ್ರೀಪತಿನಗರ ಪ್ರದೇಶಗಳ ಜನರು ಸುಮಾರು 25 ವರ್ಷಗಳಿಂದಲೂ ಪಕ್ಷದ ಬೆಂಬಲಿಗರಾಗಿದ್ದು ಗ್ರಾಮ ಪಂಚಾಯತಿಗೆ ಎಂಟು ಜನರನ್ನು ಆಯ್ಕೆ ಮಾಡುತ್ತಾ ಬಂದಿರುವುದನ್ನು ಸ್ಮರಿಸಬಹುದು.

– ಗೈಬು ಜೈನೆಖಾನ್

ಸಿಂಧನೂರು : ಅಂಬೇಡ್ಕರ್ ಜಯಂತಿ

ದಿನಾಂಕ 28.04.2011 ರಂದು ದಲಿತರ ಹಕ್ಕು ಸಮಿತಿ ಮತ್ತು ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘ ಸಿಂಧನೂರು ಜಂಟಿಯಾಗಿ ಡಾ: ಬಿ.ಆರ್.ಅಂಬೇಡ್ಕರ್ ರವರ 120ನೇ ಜನ್ಮ ದಿನಾಚರಣೆಯನ್ನು ತಾಲ್ಲೂಕು ಪಂಚಾಯತಿ ಕಾರ್ಯಾಲಯದ ಆವರಣದಲ್ಲಿ ಆಚರಿಸಲಾಯಿತು. ಮಧ್ಯಾಹ್ನ 12.30 ಕ್ಕೆ ಪ್ರವಾಸಿ ಮಂದಿರದಿಂದ ಮೆರವಣಿಗೆಯ ಮೂಲಕ ತಹಶೀಲ್ ಆಫೀಸಿಗೆ ತೆರಳಿ ದಲಿತರ ಮತ್ತು ದೇವದಾಸಿಯರ 11 ಬೇಡಿಕೆಗಳ ಪಟ್ಟಿಯನ್ನು ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಯವರಿಗೆ ಕಳುಹಿಸುವ ಮೂಲಕ ಡಾ: ಬಿ.ಆರ್.ಅಂಬೇಡ್ಕರ್‌ರವರ ಜಯಂತಿಗೆ ಚಾಲನೆ ಕೊಡಲಾಯಿತು.

20.04.2011 ರಂದು ಪದವಿ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಭಾಷಣ ಸ್ಪರ್ಧೆ ಮತ್ತು ಅಂಬೇಡ್ಕರ್‌ರವರ ಭಾವಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆ ಕೊಡಲಾಯಿತು. ಇದೇ ಸಂದರ್ಭದಲ್ಲಿ ಸಾವಿತ್ರಿಬಾಯಿ ಫುಲೆ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಕಾಂ.ಹೆಚ್.ಪದ್ಮಾ ಅವರನ್ನು



ಸನ್ಮಾನಿಸಲಾಯಿತು.

ಪದ್ಮಾ ಕರಿಯಪ್ಪ ನಗರಸಭೆ ಅಧ್ಯಕ್ಷರು ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಮಾಲೆ ಹಾಕುವ ಮೂಲಕ ಉದ್ಘಾಟಿಸಿದರು. ನರಸಿಂಹಪ್ಪ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಡಾ: ಬಿ.ಆರ್.ಅಂಬೇಡ್ಕರ್‌ರವರ ಹೋರಾಟದ ಸ್ಫೂರ್ತಿಯನ್ನು ನಮ್ಮ ಚಳುವಳಿಯಲ್ಲಿ ಅಳವಡಿಸಿ ಕೊಳ್ಳಬೇಕೆಂದರು. ರಾಮಣ್ಣ ಎಚ್.ಜಿ.ರಾಜ್ಯಾಧ್ಯಕ್ಷರು ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ಬೆಂಗಳೂರು ಇವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ದೇವದಾಸಿ ಪದ್ಧತಿ ಬಂದುದರ ಮತ್ತು ಅದರ ದುರುದ್ದೇಶದ ಬಗ್ಗೆ ವಿವರಿಸಿದರು. ಹುಸೇನಪ್ಪ ಅಮರಾಪೂರ ಅಧ್ಯಕ್ಷರು ದಲಿತ ಸಾಹಿತ್ಯ ಪರಿಷತ್ ಸಿಂಧನೂರು ಇವರು ಮಾತನಾಡುತ್ತಾ, ಅಂಬೇಡ್ಕರ್‌ರವರ ಹೋರಾಟದ ಬಗ್ಗೆ ವಿವರಿಸಿದರು. ಗೋಪಾಲ ನಾಯ್ಕ ದೇವದಾಸಿ ಪುನರ್ ವಸತಿ ಜಿಲ್ಲಾ ಯೋಜನಾಧಿಕಾರಿಗಳು ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆ ವಿತರಿಸಿದರು.

ಎಚ್.ವಿ.ಗುಡಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಹೆಚ್.ಎಫ್, ಮಸ್ಕಿ ಅಧ್ಯಕ್ಷರು, ದಲಿತ ಸಾಹಿತ್ಯ ಅಕಾಡೆಮಿ ಸಿಂಧನೂರು ಹನುಮಂತಪ್ಪ ಸಾಲಗುಂದಾ ಅಧ್ಯಕ್ಷರು ದಲಿತರ ಹಕ್ಕು ಸಮಿತಿ ಸಿಂಧನೂರು ಭಾರತಿ ಅನುಷ್ಠಾನಾಧಿಕಾರಿಗಳು ದೇವದಾಸಿ ಪುನರ್ ವಸತಿ ಯೋಜನೆ ಸಿಂಧನೂರು ಇವರುಗಳು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಹುಲ್ಲೇಶ ಸ್ವಾಗತಿಸಿದರು. ಬಸವರಾಜ ಕೋಟೆ ನಿರೂಪಿಸಿದರು. ಅಪ್ಪಣ್ಣ ಕಾಂಬಳೆ ವಂದಿಸಿದರು.

ಬಡತನ ನಿರ್ಮೂಲನೆಯಲ್ಲಿ ಸಮಾಜವಾದಿ ಚೀನಾ...

ಪುಟ 2 ರಿಂದ

ಮೀಟರುಗಳ ಪ್ರದೇಶದಲ್ಲಿ 1978 ರಲ್ಲಿ 53.2 ಲಕ್ಷ ಜನ ಸಾಕಷ್ಟು ಆಹಾರ, ಬಟ್ಟೆಬರೆಗಳಿಲ್ಲದೆ ಬಡತನದ ಬಾಳು ಸವೆಸುತ್ತಿದ್ದರು. ಇಸವಿ 2000 ದ ವೇಳೆಗೆ ಈ ಸಮಸ್ಯೆಯನ್ನು ಪೂರ್ಣವಾಗಿ ಪರಿಹರಿಸಲಾಗಿದೆ.

1994 ರಿಂದೀಚೆಗೆ ಚೀನಾ ಸರ್ಕಾರ ಬಡತನ ನಿರ್ಮೂಲನೆಗೆ ಹಿಂದಿನ ದಿನಗಳಿಗಿಂತ ಮೂರು ಪಟ್ಟು ಹೆಚ್ಚು ಸಂಪನ್ಮೂಲವನ್ನು ವ್ಯಯ ಮಾಡುತ್ತಿದೆ. ಇದರಿಂದಾಗಿ ಪ್ರತಿ ವರ್ಷ 60 ಲಕ್ಷ ಜನ ಬಡತನದ ಪರಿಧಿಯಿಂದ ಹೊರಬರುತ್ತಿದ್ದಾರೆ. 2002–3 ರಲ್ಲಿ 30 ಲಕ್ಷ ಜನ ಬಡತನದ ಪರಿಧಿಯಿಂದ ಹೊರಬಂದಿದ್ದಾರೆ.



ಜಾಗತಿಕ ಆರ್ಥಿಕ ಬಿಕ್ಕಟ್ಟು ಈ ಬಡತನ ನಿರ್ಮೂಲನಾ ಕಾರ್ಯಗಳಿಗೆ ಪೆಟ್ಟು ನೀಡಿದೆ. ಆದರೂ ಗ್ರಾಮೀಣ ಪ್ರದೇಶಗಳಲ್ಲಿನ ಬಡತನವನ್ನು ನಾಲ್ಕು ಕೋಟಿ ಜನರಿಗೆ ಇಳಿಸಲಾಗಿದೆ ಎಂದರೆ ಅದು ಕಡಿಮೆ ಸಾಧನೆಯಲ್ಲ!!

ಚೀನಾದ 12 ನೇ ಪಂಚವಾರ್ಷಿಕ ಯೋಜನೆ ರೂಪುಗೊಂಡು ಅನುಷ್ಠಾನಕ್ಕೆ ಬರುತ್ತಿದೆ. 2015 ರ ಹೊತ್ತಿಗೆ ಬಡತನದ ಪೂರ್ತಿ ನಿರ್ಮೂಲನೆಯ ಆಶಯವನ್ನು ಚೀನಾ ಹೊತ್ತಿದೆ. ಈ ಆಶಯ ಕೈಗೂಡುತ್ತದೆಂಬುದರಲ್ಲಿ ಸಂದೇಹವಿಲ್ಲ.



ಜನಶಕ್ತಿ ನೂತನ ಕಾರ್ಯಾಲಯ ನಿಧಿ : ಸ್ಪಂದನೆಗೆ ವಂದನೆ

'ಜನಶಕ್ತಿ' ಕನ್ನಡ ವಾರಪತ್ರಿಕೆ'ಯ ನೂತನ ಕಾರ್ಯಾಲಯವನ್ನು ಸರ್ವ ಸಜ್ಜುಗೊಳಿಸುವ ಸಂದರ್ಭದಲ್ಲಿ ಉದಾರ ಕೊಡುಗೆಗೆ ಈ ಮೂಲಕ ಮಾಡಲಾದ ಮನವಿಗೆ 'ಜನಶಕ್ತಿ'ಯ ಓದುಗ ಬಳಗದಿಂದ ಸ್ಪಂದನೆ ಆರಂಭವಾಗಿದೆ.

ನಿಧಿಗೆ ಕಾಣಿಕೆ ನೀಡಿರುವ ಸಂಗಾತಿಗಳ ಹೆಸರು ಮತ್ತು ವಿವರವನ್ನು ಕೃತಜ್ಞತೆಗಳೊಂದಿಗೆ ಇಲ್ಲಿ ಪ್ರಕಟಿಸಲಾಗಿದೆ. ದುಡಿಯುವ ಜನರ ಪ್ರಾಣಮಿತ್ರ 'ಜನಶಕ್ತಿ' ಕಾರ್ಯಾಲಯವನ್ನು ವ್ಯವಸ್ಥಿತವಾಗಿ ಏರ್ಪಡಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನಷ್ಟು ಸ್ಪಂದನೆ ದೊರೆಯುತ್ತದೆಂದು ನಿರೀಕ್ಷಿಸುತ್ತೇವೆ.

ಇತಿ ತಮ್ಮ ವಿಶ್ವಾಸಿ

ಎಸ್.ವೈ.ಗುರುಶಾಂತ್, ಸಂಪಾದಕರು

ಜನಶಕ್ತಿ ನೂತನ ಕಾರ್ಯಾಲಯ ನಿಧಿ

ಹಿಂದಿನ ಮೊತ್ತ	:	17,250.00
1) ರತ್ನಾಕರ ಶೆಣೈ	:	5,000.00
ಒಟ್ಟು	ರೂ.	22,250.00

ಎಡರಂಗದ ಹಾದಿ.....

ಪುಟ 7 ರಿಂದ

ಅಪೂರ್ಣ. ಏಕೆಂದರೆ ಈ ವರದಿಯಲ್ಲಿ ಟ್ರಾನ್ಸ್‌ಪೋರ್ಟ್ ಕ್ಷೇತ್ರ ಹಾಗೂ ಎ ದರ್ಜೆಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಇಷ್ಟೇ ಅಲ್ಲದೆ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮುಸ್ಲಿಂ ಉಪನ್ಯಾಸಕರನ್ನು ಪರಿಗಣಿಸಿಲ್ಲ. ಇಲ್ಲಿ ಒಟ್ಟು ಟೀಚರ್‌ಗಳ ಪೈಕಿ ಶೇ. 11ರಷ್ಟು ಮುಸ್ಲಿಮರು ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರೆಲ್ಲರಿಗೂ ರಾಜ್ಯ ಸರ್ಕಾರವೇ ವೇತನ ಪಾವತಿಸುತ್ತಿದೆ. ಇನ್ನು ಮದರಸಾಗಳಲ್ಲಿ 20 ಸಾವಿರಕ್ಕೂ ಅಧಿಕ ಮಂದಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದಾರೆ.

ಆದರೂ, ಸರ್ಕಾರಿ ಸೇವೆಗಳಲ್ಲಿ ಮುಸ್ಲಿಮರ ಸಂಖ್ಯೆ ನಿರೀಕ್ಷಿತ ಪ್ರಮಾಣಕ್ಕಿಂತ ಕಡಿಮೆಯಾಗಿದೆ ಎಂಬುದನ್ನು ಸರಕಾರವೇ ಒಪ್ಪಿಕೊಂಡಿದೆ. ಈ ಹಿನ್ನೆಲೆಯಲ್ಲೇ ರಾಜ್ಯ ಸರ್ಕಾರ ರಂಗನಾಥ ಮಿಶ್ರಾ ವರದಿಯನ್ನು ಜಾರಿಗೊಳಿಸುವ ನಿರ್ಧಾರ ಕೈಗೊಂಡಿದೆ. ಈ ವರದಿಯ ಪ್ರಕಾರ, ಎಲ್ಲ ಸರ್ಕಾರಿ ಉದ್ಯೋಗದಲ್ಲಿ ಮುಸ್ಲಿಮರಿಗೆ ಶೇಕಡಾ 10ರಷ್ಟು ಮೀಸಲಾತಿ ಜಾರಿಗೆ ಬರಲಿದೆ.

ಇದಕ್ಕೆ ವ್ಯತಿರಿಕ್ತವಾಗಿ ಕೇಂದ್ರ ಸರ್ಕಾರ ಕನಿಷ್ಠ ರಂಗನಾಥ ಮಿಶ್ರಾ ವರದಿಯ ಶಿಫಾರಸಿಗೆ ಕ್ರಮ ಕೈಗೊಂಡ ವರದಿಯನ್ನು ಮಂಡಿಸಿಲ್ಲ. ಇದರ ಅಗತ್ಯ ಇಲ್ಲ ಎಂಬಂತೆ ಅದು ವರ್ತಿಸಿದೆ.

ಉದ್ಯೋಗ ಮಾತ್ರವಲ್ಲದೆ ಸ್ವಯಂ ಉದ್ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲು ಮುಸ್ಲಿಂ ಯುವಜನರಿಗೆ ಸಾಲ ಸೌಲಭ್ಯದ ಆಕರ್ಷಕ ಯೋಜನೆಗಳನ್ನು ರಾಜ್ಯ ಸರ್ಕಾರ ಪ್ರಕಟಿಸಿದೆ. ಇದರಿಂದ ಉತ್ಸಾಹಿ ಯುವಜನರು ಸ್ವ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿದೆ. ಇದುವರೆಗೆ ರಾಜ್ಯದಲ್ಲಿ 8864 ಕೋಟಿ ರೂಪಾಯಿಗಳ ಸಾಲ ಸೌಲಭ್ಯವನ್ನು ಈ ಯೋಜನೆಯಲ್ಲಿ ನೀಡಲಾಗಿದೆ. ಇದಲ್ಲದೆ, ಅಲ್ಪಸಂಖ್ಯಾತ ಅಭಿವೃದ್ಧಿ ಮತ್ತು ಹಣಕಾಸು ನಿಗಮದಿಂದ ಸುಮಾರು 400 ಕೋಟಿ ರೂಪಾಯಿ ಸಾಲ ನೀಡಲಾಗಿದೆ. ಇದರಿಂದ 1.77 ಲಕ್ಷ ಮುಸ್ಲಿಂ ಯುವಕರು ಪ್ರಯೋಜನ ಪಡೆದುಕೊಂಡಿದ್ದಾರೆ.

ಮುಸ್ಲಿಮರ ಸಬಲೀಕರಣದಲ್ಲಿ

ಕೇವಲ ಶಿಕ್ಷಣ ಮತ್ತು ಉದ್ಯೋಗ ಮಾತ್ರವಲ್ಲದೆ, ಆರ್ಥಿಕವಾಗಿಯೂ ಮುಸ್ಲಿಮರ ಸಬಲೀಕರಣಕ್ಕೆ ರಾಜ್ಯ ಸರ್ಕಾರ ದೃಢ ಕ್ರಮಗಳನ್ನು ಕೈಗೊಂಡಿದೆ. ಭೂ ಸುಧಾರಣೆಯ ಫಲಾನುಭವಿಗಳಲ್ಲಿ ಮುಸ್ಲಿಂ ಕುಟುಂಬದ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲೂ ಮುಸ್ಲಿಮರ ಪಾತ್ರ ಹೆಚ್ಚಾಗುತ್ತಿದೆ. ರಾಜ್ಯದ ಪಟ್ಟಾದಾರರ ಸಂಖ್ಯೆಯಲ್ಲಿ ಶೇ. 18ರಷ್ಟು ಪ್ರಮಾಣ ಮುಸ್ಲಿಮರದ್ದು. ಮೂರು ಸ್ತರದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಶೇಕಡಾ 20ಕ್ಕಿಂತಲೂ ಹೆಚ್ಚು ಸ್ಥಾನಗಳನ್ನು ಮುಸ್ಲಿಮರು ಪ್ರತಿನಿಧಿಸುತ್ತಿದ್ದಾರೆ.

ಇತ್ತೀಚಿನ ಒಂದು ಸರ್ವೆ ಪ್ರಕಾರ, ಭೂರಹಿತ ಮುಸ್ಲಿಂ ಕುಟುಂಬಗಳ ಸಂಖ್ಯೆ ಗಣನೀಯವಾಗಿ ತಗ್ಗಿದೆ. 20 ವರ್ಷಗಳ ಹಿಂದೆ ಶೇ. 39.7ರಷ್ಟಿದ್ದ ಪ್ರಮಾಣ ಈಗ ಶೇಕಡಾ 20ರಷ್ಟಕ್ಕೆ ಬಂದಿಳಿದಿದೆ.


ಇಷ್ಟಲ್ಲದೆ, ಮುಸ್ಲಿಮರಿಗೆ ವಸತಿ ನೀಡುವ ವಿಶೇಷ ಯೋಜನೆಯನ್ನು ರಾಜ್ಯ ಸರ್ಕಾರ ಆರಂಭಿಸಿದೆ. ಇಂದಿರಾ ಆವಾಸ್ ಯೋಜನೆಯಲ್ಲಿ ಶೇಕಡಾ 22ರಷ್ಟು ವಸತಿಗಳನ್ನು ಮುಸ್ಲಿಮರಿಗೆ ನೀಡಲಾಗಿದೆ. ಇದರ ಜೊತೆಗೆ ವಿವಿಧ ಹಂತದ ಅಭಿವೃದ್ಧಿ ಯೋಜನೆಯಲ್ಲಿ 28 ಸಾವಿರ ಮನೆಗಳನ್ನು ಕಟ್ಟಿಕೊಡಲಾಗಿದೆ. 'ನನ್ನ ಮನೆ' ಎಂಬ ಯೋಜನೆಯಲ್ಲಿ 11 ಸಾವಿರ ಮನೆಗಳಿಗೆ ಸುಮಾರು 138 ಕೋಟಿ ರೂಪಾಯಿ ಅನುದಾನ ನೀಡಲಾಗಿದೆ.

ಸ್ವಸಹಾಯ ಸಂಘಗಳಲ್ಲಿ ಮುಸ್ಲಿಂ ಮಹಿಳೆಯರು

ಮುಸ್ಲಿಂ ಮಹಿಳೆಯರ ಸಬಲೀಕರಣಕ್ಕೂ ರಾಜ್ಯ ಸರ್ಕಾರ ವಿವಿಧ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡಿದೆ. ಇದರಲ್ಲಿ ಪ್ರಮುಖವಾದದ್ದು ಸ್ವ ಸಹಾಯ ಸಂಘಗಳು. ಇಲ್ಲಿಯವರೆಗೆ ಸುಮಾರು 12 ಲಕ್ಷ ಗುಂಪುಗಳನ್ನು ಮಹಿಳೆಯರು ರಚಿಸಿಕೊಂಡಿದ್ದಾರೆ. ಈ ಸಂಘಗಳಲ್ಲಿ 1.20 ಕೋಟಿ ಮಹಿಳೆಯರು ತೊಡಗಿಸಿಕೊಂಡಿದ್ದಾರೆ. ಇದರಲ್ಲಿ ಶೇಕಡಾ 20ರಷ್ಟು ಪ್ರಮಾಣ ಮುಸ್ಲಿಂ ಮಹಿಳೆಯರದು. ಅಲ್ಪಸಂಖ್ಯಾತ ಗುಂಪುಗಳಿಗೆ ರಾಜ್ಯ ಸರ್ಕಾರ ಶೇ. 50ರ ಸಬ್ಸಿಡಿಯಲ್ಲಿ ಸಾಲ ಯೋಜನೆಯನ್ನು ಜಾರಿಗೊಳಿಸಿದೆ.

ನೈಜ ಸಮಸ್ಯೆ

ಈ ಎಲ್ಲದರ ಮಧ್ಯೆ, ದೇಶ ಮುಸ್ಲಿಮರು ಎದುರಿಸುತ್ತಿರುವ ಸಮಸ್ಯೆ ಹಾಗೂ ಅವರ ಪರಿಸ್ಥಿತಿಯ ಬಗ್ಗೆ ಐತಿಹಾಸಿಕ ನೆಲೆಯಲ್ಲಿ ಅಧ್ಯಯನ ನಡೆಸಬೇಕಾಗಿದೆ. ಈ ಅಧ್ಯಯನವನ್ನು ಸಂಕ್ಷಿಪ್ತವಾಗಿ ಹೇಳುವುದಿದ್ದರೆ, ಮುಸ್ಲಿಮರು ಗುರುತಿನ ಪ್ರಶ್ನೆ, ದೇಶ ನಿಷ್ಠೆ ಕುರಿತ ಶಂಕೆ ಮತ್ತು ಭದ್ರತೆಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ವಿವಿಧ ರಾಜ್ಯಗಳು ಹಾಗೂ ಇಡೀ ದೇಶದಲ್ಲಿ ಮುಸ್ಲಿಮರನ್ನು ಭಯೋತ್ಪಾದರಕು ಮತ್ತು ದೇಶದ್ರೋಹಿಗಳು ಎಂಬಂತೆ ನೋಡಲಾಗುತ್ತಿದೆ. ದೇಶದ ಪ್ರಗತಿ, ಶಾಂತಿಗೆ ಮುಸ್ಲಿಮರಿಂದ ಧಕ್ಕೆ ಇದೆ ಎಂಬಂಥ ಭಾವನೆಯನ್ನು ಬಿತ್ತಲಾಗಿದೆ. ಇದಕ್ಕೆ ಪೂರಕವಾದ ಪರಿಸ್ಥಿತಿಯನ್ನು ನಿರ್ಮಿಸಲಾಗಿದೆ. ಹಾಗಾಗಿ ಮುಸ್ಲಿಮರು ಗುರುತಿನ ಬಿಕ್ಕಟ್ಟು (ಐಡೆಂಟಿಟಿ ಕ್ರೈಸಿಸ್)ನ ಸಮಸ್ಯೆಯಿಂದ ತೀವ್ರವಾಗಿ ಕಂಗೆಟ್ಟಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರವೇ ನೇರ ಕಾರಣ. ಕೋಮು ಗಲಭೆಗಳಾದಾಗ, ಭಯೋತ್ಪಾದಕ [illegible] ಉದಾಹರಣೆಗೆ 1993 [illegible] ಸ್ಫೋಟದ [illegible] ಪಡಿಸಿದ್ದು. ಆದರೆ, [illegible] ನಿರ್ದಾಕ್ಷಿಣ್ಯವಾಗಿ ಜಾರಿಗೆ ತರಲು [illegible] ಹಾಕಲಾಯಿತು.



ಬಂಗಾಳದಲ್ಲಿ ಮುಸ್ಲಿಮರು

ದೇಶದ ಮುಸ್ಲಿಮರು ಎದುರಿಸುತ್ತಿರುವ ಪರಿಸ್ಥಿತಿಗೆ ವ್ಯತಿರಿಕ್ತವಾದ ಸ್ಥಿತಿ ಪಶ್ಚಿಮ ಬಂಗಾಳದಲ್ಲಿದೆ. ಇದನ್ನು ನಿರಾಕರಿಸುವ ಧೈರ್ಯ ಪ್ರತಿಪಕ್ಷಗಳಿಗೂ ಇಲ್ಲ. ರಾಜ್ಯದಲ್ಲಿ ಕೋಮು ದಂಗೆ ಆಗದಂತೆ ನೋಡಿಕೊಂಡಿದ್ದಲ್ಲದೆ, ದೇಶದ ಯಾವುದೇ ಭಾಗದಲ್ಲಿ ಕೋಮು ಗಲಭೆ ಆದಾಗ, ಅದರ ಪರಿಣಾಮ ರಾಜ್ಯದ ಜನತೆಗೆ ತಟ್ಟದಂತೆ ಸರ್ಕಾರ ನೋಡಿಕೊಂಡಿದೆ. ಜಾತಿ-ಕೋಮುಗಳ ಆಧಾರದಲ್ಲಿ ಮನಸುಗಳನ್ನು ಒಡೆಯದಂತೆ ಕ್ರಮ ಕೈಗೊಂಡಿದೆ. ಎಡ ಸರ್ಕಾರದ ದಿಟ್ಟ ಹಾಗೂ ದೃಢ ಕ್ರಮಗಳಿಂದಾಗಿ ರಾಜ್ಯದಲ್ಲಿ ಕೋಮು ಸೌಹಾರ್ದ ಎಂದೆಂದೂ ಆರದಂತೆ ದೇದೀಪ್ಯಮಾನವಾಗಿ ಪ್ರಜ್ವಲಿಸುತ್ತಿದೆ.

ಇದು ನಿಜಕ್ಕೂ ದೊಡ್ಡ ಸಾಧನೆಯೇ ಸರಿ. ಈ ಪ್ರಕ್ರಿಯೆಯನ್ನು ದೇಶಾದ್ಯಂತೆ ವಿಸ್ತರಿಸಬೇಕಿದ್ದರೆ ಎಡ ಐಕ್ಯತೆ ಗಟ್ಟಿಯಾಗಬೇಕು. ಎಡ ಚಳವಳಿ ವಿಶಾಲವಾಗಿ ಬೆಳೆಯಬೇಕು. ಈ ಹಿನ್ನೆಲೆಯಲ್ಲಿ ಮತೀಯ ಸಾಮರಸ್ಯಕ್ಕೆ ಮುಸ್ಲಿಮರ ಅಭಿವೃದ್ಧಿಗೆ ಎಡಪಕ್ಷಗಳು ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೇರುವ ಅಗತ್ಯವಿದೆ.

ಬಹಿಷ್ಕಾರದ ವಿರುದ್ಧ ದಲಿತರ ದನಿ

ಪುಟ 5 ರಿಂದ

ಹೇಳಿದ್ದಾರೆ. ಆದರೆ ಜಾತಿ ಅಸ್ಪೃಶ್ಯತೆಯಿಂದ ನಲುಗಿಹೋಗಿದ್ದ ದಲಿತ ಕುಟುಂಬಗಳಿಗೆ ಸಿಕ್ಕಿದ್ದು ಮತ್ತದೇ ಅವಮಾನ! ಹೇಗಿದೆ ಬಿಜೆಪಿ ಸರ್ಕಾರದ ಜಾತಿವಾದಿ ಮಂತ್ರಿಯ ತಕ್ಕುತನ.

ಸದಸ್ಯತ್ವ ಮಾಡಿಸಿಕೊಳ್ಳಿ

ಪ್ರಕರಣ ಒಂದು ಹಂತಕ್ಕೆ ಬಂದ ಮೇಲೆ ಓಡೋಡಿ ಬಂದ ಬಿಎಸ್‌ಪಿ ಪಕ್ಷದ ರಾಜ್ಯಾಧ್ಯಕ್ಷರು 'ಪ್ರಕರಣ ಏನೇ ಆಗಿರಲಿ ಸರ್ಕಾರದಿಂದ ಎಲ್ಲಾ ಸೌಲಭ್ಯಗಳನ್ನು ಕೊಡಿಸುತ್ತೇವೆ. ಸದಸ್ಯತ್ವ ಮಾಡಿಸಿಕೊಳ್ಳಿ. ಇಲ್ಲಿ 40 ರೂ. ತಳ್ಳಿ' ಎಂದು ಕುಳಿತಿದ್ದಾರೆ. ದೌರ್ಜನ್ಯದಿಂದ ಆಗ ತಾನೇ ಸುಧಾರಿಸಿಕೊಳ್ಳುತ್ತಿದ್ದ ದಲಿತ ಕುಟುಂಬಗಳಿಗೆ ಇದರಿಂದ ಉರಿದುಹೋಗಿದೆ. "ಕಷ್ಟದಲ್ಲಿದ್ದಾಗ ಬಾರದಿರುವವರು ಎಲ್ಲಾ ಮುಗಿದ ಮೇಲೆ 40 ರೂ. ದುಡ್ಡು ಕೊಡಿ ಎಂದಿದ್ದೀರಿ, ಜ್ಯೂಸ್ ಕೊಟ್ಟಿದ್ದೀವಿ ಕುಡಿದು ಮೇಲೇಳಿ" ಎಂದು ಮುಖಕ್ಕೆ ಹೊಡೆದಂತೆ ಹೇಳಿದ್ದಾರೆ.

'ಅಕ್ಕ ಮಾಯಾವತಿಯವರು ಪ್ರಧಾನಿ ಆದರೆ ಇವೆಲ್ಲಾ ಆಗೋದಿಲ್ಲ' ಎಂದು ಹೇಳಲು ಹೋದಾಗ 'ಯಾರು ಏನೇ ಆದ್ರೂ ನೀವು ನಮಗೇನೂ ಆಗಲ್ಲ' ಎದ್ದು ನಡೀರಿ ಈಗ ಎಂದು ಮುಖದ ನೀರಿಳಿಸಿದ್ದಾರೆ. ಹೋದ ದಾರಿಗೆ ಸುಂಕ ಇಲ್ಲ ಎಂದು ಅವರು ವಾಪಸ್ ಬಂದಿದ್ದಾರೆ.

ಭೇಟಿ ನೀಡದ ದ.ಸಂ.ಸ

ಇದನ್ನು ದುರಂತ ಎನ್ನದೇ ಅನ್ಯ ಮಾರ್ಗವಿಲ್ಲ. ಕೆರಗೋಡಿನಲ್ಲಿ ಜಾತಿ ದೌರ್ಜನ್ಯದಿಂದ ನಲುಗಿದ ದಲಿತರನ್ನು ದಲಿತ ಸಂಘಟನೆಯ ಯಾವೊಂದು ಬಣವೂ ಭೇಟಿ ಮಾಡಲಿಲ್ಲ. ಆದರೆ ಪತ್ರಕರ್ತರ ಮುಂದೆ ನಾವೇ ಮಾಡಿದ್ದು ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಪ್ರಕರಣ ಒಂದು ಹಂತಕ್ಕೆ ಬಂದ ನಂತರ ಸಮಾಜ ಕಲ್ಯಾಣ ಸಚಿವರು ಸಭೆ ನಡೆಸಿ ಕಾನೂನಿನಿಂದ ಎಲ್ಲವೂ ಪರಿಹಾರ ಆಗಲ್ಲ. ಅನುಸರಿಸಿಕೊಂಡು ಹೋಗಿ ಎಂದು ಹೇಳಿಹೋದರು. ಒಬ್ಬ ದಲಿತ ಮಂತ್ರಿಯ ಬಾಯಿಂದ ದಲಿತರ ಮೇಲಾದ ದೌರ್ಜನ್ಯಕ್ಕೆ ಕಾನೂನು ಕ್ರಮ ಬೇಡ ಎಂಬ ಉಪದೇಶ! ಹೇಗಿದೆ ನೋಡಿ ಬಿಜೆಪಿಯ ಲೆಕ್ಕಾಚಾರ.

ಸಿಪಿಐ(ಎಂ)ನ ಜಾತಿ ದೌರ್ಜನ್ಯ ವಿರೋಧಿ ಸಮಿತಿಯ ಮಧ್ಯಪ್ರವೇಶದಿಂದ ಕೆರಗೋಡಿನ ದಲಿತರು ತಲೆಯೆತ್ತಿ ತಿರುಗಾಡಲು ಆರಂಭಿಸಿದ್ದಾರೆ. ಬಹಿಷ್ಕಾರದ ವಿರುದ್ಧ ಹೋರಾಟ ಮುಂದುವರೆದಿದೆ. ಬಹಿಷ್ಕಾರಕ್ಕೊಳಗಾದ ಕುಟುಂಬಗಳಿಗೆ ಸಿಗುವ ಸರ್ಕಾರಿ ಸೌಲಭ್ಯಗಳನ್ನು ಕೊಡಿಸಲು ಸಿಪಿಐ(ಎಂ) ಪ್ರಯತ್ನ ಮಾಡುತ್ತಿದೆ.

ಒಬಾಮ ಒತ್ತಡವಿದ್ದರೂ ಜೆಟ್ ಖರೀದಿ ಆರ್ಡರ್ ಸಿಗಲಿಲ್ಲ : ಅಮೆರಿಕಾ ಮುನಿಸು

ಭಾರತ ಖರೀದಿಸಬೇಕೆಂದಿರುವ 126 ಜೆಟ್ ಯುದ್ಧವಿಮಾನಗಳ ಪೂರೈಕೆಯ ಸ್ಪರ್ಧೆಯಲ್ಲಿ ಅಮೆರಿಕನ್ ಕಂಪನಿಗಳಾದ ಬೊಯಿಂಗ್ ಮತ್ತು ಲಾಕ್‌ಹಿಡ್ ಮಾರ್ಟಿನ್, ಯುರೋಪಿನ ಕಂಪನಿಗಳಾದ ಯುರೋಫೈಟರ್ ಹಾಗೂ ರಫಾಲೆ (ಫ್ರಾನ್ಸ್) ಇದ್ದವು. ಭಾರತೀಯ ವಾಯುಪಡೆ ಬೊಯಿಂಗ್ ಮತ್ತು ಲಾಕ್‌ಹಿಡ್‌ನ ಜೆಟ್ ಫೈಟರುಗಳು ಭಾರತಕ್ಕೆ ತಕ್ಕುದಲ್ಲ ಎಂದು ಅವೆಡರನ್ನೂ ಸ್ಪರ್ಧೆಯಿಂದ ಹೊರಗಿಡಲು ನಿರ್ಧರಿಸಿದೆ. ಇದು 1100 ಕೋಟಿ ಡಾಲರುಗಳ(ಸುಮಾರು 60000 ಕೋಟಿ ರೂ.ಗ:ಳ) ವ್ಯವಹಾರವಾಗಿದ್ದು ಇದು ಕೈತಪ್ಪಿಹೋಗಿರುವುದು ಅಮೆರಿಕನ್ ಆಳರಸರಿಗೆ ಬಹಳ ನಿರಾಸೆ ಉಂಟು ಮಾಡಿದೆ.


ಸ್ವತಃ ಅಮೆರಿಕನ್ ಅಧ್ಯಕ್ಷರೂ ಐದು ತಿಂಗಳ ಹಿಂದೆ ಭಾರತಕ್ಕೆ ಭೇಟಿ ನೀಡಿದ್ದಾಗ ಅಮೆರಿಕನ್ ಕಂಪನಿಗಳಿಗೆ ಈ ಬೃಹತ್ ಆರ್ಡರ್ ಕೊಡಿಸಬೇಕೆಂದು ವಶೀಲಿ ಮಾಡಿದ್ದರಂತೆ. ಆದರೂ ಅದು ಕೈತಪ್ಪಿ ಹೋಗಿರುವುದರಿಂದ ತಮಗೆ ಅಪಾರ ನಿರಾಸೆಯಾಗಿದೆ ಎಂದು ಸ್ವತಃ ಭಾರತದಲ್ಲಿ ಅಮೆರಿಕನ್ ರಾಯಭಾರಿ ತಿಮೋತಿ ರೋಮರ್ ಹೇಳಿದ್ದಾರೆ. ಇದೆ ಸಂದರ್ಭದಲ್ಲಿ ಅವರು ತಮ್ಮ ಹುದ್ದೆಗೆ ರಾಜಿನಾಮೆ ನೀಡಿರುವುದು ಹಲವರಲ್ಲಿ ಸಂದೇಹ ಮೂಡಿಸಿದೆ. ಈ ರಾಜಿನಾಮೆಗೆ 'ವೈಯಕ್ತಿಕ, ವೃತ್ತಿಸಂಬಂಧಿ ಮತ್ತು ಕುಟುಂಬ ಪ್ರಶ್ನೆಗಳು' ಕಾರಣ ಎಂದು ಅವರು ಹೇಳಿದರೂ ಕೆಲವರಂತೂ ಅದನ್ನು ನಂಬುತ್ತಿಲ್ಲ.

ಈ ಬೃಹತ್ ವ್ಯವಹಾರ ಅಮೆರಿಕನ್ ಕಂಪನಿಗಳ ಕೈತಪ್ಪಿಹೋಗಿರುವುದು ಭಾರತ-ಅಮೆರಿಕ ಸಂಬಂಧಗಳಲ್ಲಿ ಒಂದು ರಾಜಕೀಯ ಹಿನ್ನಡೆ ಎಂದೆಲ್ಲ ಭಾರತದಲ್ಲೂ ಅಮೆರಿಕಾ-ಪರ ವಕ್ತಾರರು ಕೂಗಾಡುತ್ತಿದ್ದಾರೆ. ಏಕೆಂದರೆ 2005ರಲ್ಲಿ ಭಾರತದೊಡನೆ ಅಮೆರಿಕಾ ರಕ್ಷಣಾ ಚೌಕಟ್ಟು ಒಪ್ಪಂದ ಮಾಡಿಕೊಂಡದ್ದು ಶಸ್ತ್ರಾಸ್ತ್ರ ಪೂರೈಕೆಗೆ ಭಾರತದ್ಧ ಅಗಾಧ ಪ್ರಮಾಣದ ಮಾರುಕಟ್ಟೆಯ ಮೇಲೆ ಕಣ್ಣಿಟ್ಟು ಎಂಬುದು ಇತ್ತೀಚೆಗೆ ಬಯಲಾದ ವಿಕಿಲೀಕ್ಸ್‌ನಿಂದ ಸ್ಪಷ್ಟವಾಗಿದೆ. ಭಾರತದ ಎಡಪಂಥೀಯರು 2005ರಲ್ಲಿಯೇ ಈ ವ್ಯವಹಾರವನ್ನು ವಿರೋಧಿಸಿ ಇದೇ ಮಾತುಗಳನ್ನು ಹೇಳಿದ್ದಾಗ ಬಹಳ ಮಂದಿ ಅದಕ್ಕೆ ಲಕ್ಷ್ಯ ಕೊಟ್ಟಿರಲಿಲ್ಲ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

2005ರ ಒಪ್ಪಂದ ಏನೇ ಹೇಳಿದ್ದರೂ, ಇದುವರೆಗೆ ಅದರದ್ದು ಮಿಶ್ರಫಲ; ಅಮೆರಿಕಾದ ಒತ್ತಡಕ್ಕೆ ಭಾರತ ಎಂದೂ 'ಸಾಧ್ಯವಿಲ್ಲ' ಎಂದು ಖಡಾಖಂಡಿತವಾಗಿ ಹೇಳಿಲ್ಲವಾದರೂ ಅಮೆರಿಕಾಕ್ಕೆ ಅದರ ನಿರೀಕ್ಷಿತ ಫಲ ಸಿಕ್ಕಿಲ್ಲ. ಇದಕ್ಕೆ ಯುಪಿಎ-2 ಸರಕಾರದ ಅಥವ ನಮ್ಮ ದೇಶದ ಅಧಿಕಾರಶಾಹಿಯ ದೃಢ ನಿಲುವು ಕಾರಣ ಎಂದು ಭಾವಿಸಬೇಡಿ, ವಾಸ್ತವವಾಗಿ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ, ಸಾರ್ವಜನಿಕ ಜೀವನದಲ್ಲಿ ಈ ಒಪ್ಪಂದಕ್ಕೆ ಬಂದಿರುವ ಪ್ರತಿರೋಧ ಕಾರಣ(ಮುಖ್ಯವಾಗಿ ಎಡಪಂಥೀಯರಿಂದ) ಎಂದು ಒಬ್ಬ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಈ ನಡುವೆ ಅಮೆರಿಕನ್ ಆಳರಸರು ತಮ್ಮ ದೇಶದ ಕಂಪನಿಗಳಿಗೆ ಆರ್ಡರ್ ನಿರಾಕರಿಸಲು ಕಾರಣಗಳನ್ನು ಕೇಳಿದೆಯಂತೆ, ಯುಪಿಎ-2 ಸರಕಾರ ಕೊಡಲು ಒಪ್ಪಿದೆಯಂತೆ! ಇದೀಗ ಬಂಡವಾಳಶಾಹಿಯ ಮುಕ್ತ ಸ್ಪರ್ಧೆಯ ನಿಜಸ್ವರೂಪವೋ ಅಥವ ಯುಪಿಎ ರೂಪಿಸಿದ ಅಮೆರಿಕಾ-ಭಾರತ ಸಂಬಂಧಗಳ ನಿಜಸ್ವರೂಪವೋ?

★★★



ವೇದರಾಜ ಎನ್.ಕೆ.

ಇಷ್ಟೊಂದು ಲಂಚ-ದಿನೇದಿನೇ ದುಪ್ಪಟ್ಟಾಗುತ್ತಿದೆ ಮೊತ್ತ!- ಸುಪ್ರಿಂ ಕೋರ್ಟ್ ಟಿಪ್ಪಣಿ

ಸುಪ್ರಿಂ ಕೋರ್ಟಿನಲ್ಲಿ 2ಜಿ ಹಗರಣದ ವಿಚಾರಣೆಯ ವೇಳೆಗೆ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ(ಇಡಿ) ಪರವಾಗಿ ಇದುವರೆಗಿನ ತನಿಖೆಯ ವಿವರ ನೀಡಿದ ಹಿರಿಯ ವಕೀಲ ಕೆ.ಕೆ. ವೇಣುಗೋಪಾಲ್ ಈ ಹಗರಣದಲ್ಲಿ ಲಂಚದ ಮೊತ್ತ 3000 ಕೋಟಿ ರೂ., ಅಲ್ಲದೆ ವಿದೇಶಿ ವಿನಿಮಯ ನಿಯಮಾವಳಿಗಳ ಉಲ್ಲಂಘನೆಯ ಪ್ರಮಾಣ 4000 ಕೋಟಿ ರೂ. ಎಂದರು. ಇದನ್ನು ಕೇಳಿದ ನ್ಯಾಯಪೀಠ 'ಇಷೊಂದು ದೊಡ್ಡ ಸಂಖ್ಯೆ ನಮಗೆ ಹೊಸದು, ಸಂಖ್ಯೆ ದಿನೇ-ದಿನೇ ದ್ವಿಗುಣಗೊಳ್ಳುತ್ತಿದೆ' ಎಂದು ಟಿಪ್ಪಣಿ ಮಾಡಿತು.

ಈ ತರಂಗಾಂತರ ಹಂಚಿಕೆಯಲ್ಲಿ ಸರಕಾರದ ಬೊಕ್ಕಸಕ್ಕಾದ ನಷ್ಟವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳುವುದಾಗಿ ಜಾರಿ ನಿರ್ದೇಶನಾಲಯ ಸುಪ್ರಿಂ ಕೋರ್ಟಿಗೆ ಹೇಳಿತ್ತು. ಇದರ ಪ್ರಕಾರ ಯುನಿಟೆಕ್ ವೈರ್‌ಲೆಸ್ ಕಂಪನಿಯ 2340 ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ಜಪ್ತಿ ಮಾಡಲಾಗಿದೆ ಎಂದು ಹೇಳಲಾಗಿದೆ. ಅದು ಈ 2ಜಿ ಪಡೆಯಲು ತೆತ್ತ ಹಣ ಕೇವಲ 138 ಕೋಟಿರೂ. ಆದರೆ ಟೆಲಿನೋರ್ ಎಂಬ ವಿದೇಶಿ ಕಂಪನಿಗೆ ಅದನ್ನು ವರ್ಗಾಯಿಸುವಾಗ ಮಾಡಿದ ಅದರ ಮೌಲ್ಯ ಮಾಪನ ರೂ. 2480 ಕೋಟಿ ರೂ. ಈ ಹೆಚ್ಚಿನ ಹಣವನ್ನು 'ಹಣವನ್ನು ಬಿಳಿಗೊಳಿಸುವುದನ್ನು ತಡೆಯುವ ಕಾನೂನಿ'ನ(ಪಿಎಂಎಲ್‌ಎ) ಅಡಿಯಲ್ಲಿ ವಸೂಲಿ ಮಾಡಲಾಗುವುದು ಎಂದು ಹೇಳಲಾಗಿದೆ. ಇದರಲ್ಲಿ ಮುಂದಿನ ಸರದಿ ಸ್ವಾನ್ ಟೆಲಿಕಾಂನದ್ದು. ಅದರಿಂದ 2800 ಕೋಟಿ ರೂ. ವಸೂಲಿ ಮಾಡಲಾಗುವುದಂತೆ. ಬ್ರಿಟಿಶ್ ವರ್ಜಿನ್ ಐಲೇಂಡ್ ಎಂಬ ತೆರಿಗೆಮುಕ್ತಧಾಮದಲ್ಲಿ ಕಾರ್ಪೊರೇಟ್ ವಶೀಲಿ ಕಂಪನಿಯ ನಿರಾ ರಾಡಿಯಳ ಸೋದರಿ ಆರಂಭಿಸಿರುವ 5 ಕಂಪನಿಗಳು ಈ ಕಪ್ಪು ಹಣದ ವಾಹಕಗಳು ಎಂಬುದರ ಬಗ್ಗೆ ತನಿಖೆ ನಡೆಸಿರುವುದಾಗಿಯೂ ಜಾರಿ ನಿರ್ದೇಶನಾಲಯ ಸುಪ್ರಿಂ ಕೋರ್ಟಿಗೆ ಹೇಳಿದೆ.

ಜಾರಿ ನಿರ್ದೇಶನಾಲಯ ಈಗ ಡಿಎಂಕೆ ರಾಜ್ಯಸಭಾ ಸದಸ್ಯೆ ಕನ್ನಿಮೋಳಿಯವರ ಮೇಲಿನ ಆಪಾದನಾ ಪಟ್ಟಿಯಲ್ಲಿ ಕಪ್ಪು ಹಣವನ್ನು ಬಿಳಿ ಮಾಡುವ ಅಪರಾಧವನ್ನೂ ಸೇರಿಸಿದೆ. ಮೇ 12 ರಂದು ಈ ಬಗ್ಗೆ ವಿಚಾರಣೆಗೆ ಆಕೆಗೆ ಸಮನ್ಸ್ ಕಳಿಸಲಾಗಿದೆ.

ಈ ನಡುವೆ 2ಜಿ ಹಗರಣವನ್ನು ನ್ಯಾಯಾಲಯದ ಎದುರು ತಂದ ಅರ್ಜಿದಾರರು ರಿಲಯನ್ಸ್, ಟಾಟಾ ಟೆಲಿಕಾಂ ಕಂಪನಿಗಳ ಮಾಲಕರನ್ನು ಬಿಟ್ಟು ಕೇವಲ ಆ ಕಂಪನಿಗಳ ಸಂಬಳದಾರ ನೌಕರರ ಮೇಲೆ ಆಪಾದನೆ ಪಟ್ಟಿ ಹಾಕಿರುವುದರ ಹಿಂದಿರುವ ಸಿಬಿಐ ಬುದ್ಧಿವಂತಿಕೆ ಏನು, ಕೋಟ್ಯಂತರ ರೂಪಾಯಿಗಳ ವ್ಯವಹಾರ ಈ ಬಾಸ್‌ಗಳನ್ನು ಒಳಗೊಳ್ಳದೆ ಈ ನೌಕರರು ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ.

ಅತ್ತ ಈ ಹಗರಣದ ಪರಾಮರ್ಶೆ ನಡೆಸುತ್ತಿರುವ ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ)ಯ ವರದಿಯ ಕರಡಿನ ಬಗ್ಗೆ ಯುಪಿಎ ಮತ್ತು ಅದನ್ನು ಬೆಂಬಲಿಸುವ ಪಕ್ಷಗಳು ವಿವಾದ ಎಬ್ಬಿಸಿ ತಮ್ಮದೇ ಪ್ರತ್ಯೇಕ ಸಭೆ ನಡೆಸಿ ಕರಡನ್ನು ತಿರಸ್ಕರಿಸುವ 'ನಿರ್ಣಯ' ಕೈಗೊಂಡಿವೆ. ಆದರೆ ಪಿಎಸಿ ಅಧ್ಯಕ್ಷರು ಕರಡು ವರದಿಯನ್ನೇ ಲೋಕಸಭಾಧ್ಯಕ್ಷರಿಗೆ ಸಲ್ಲಿಸಿದ್ದಾರೆ.

★★★


ಪುಟ 13 ಕ್ಕೆ

ತೃಣಮೂಲ ಮುಖ್ಯಸ್ಥೆ: ಪಾದಯಾತ್ರೆ ಸಾಕಾಯ್ತು, ಈಗ ಹೆಲಿಕಾಪ್ಟರ್ ಯಾತ್ರೆ

ಪಶ್ಚಿಮ ಬಂಗಾಲದಲ್ಲಿ ಚುನಾವಣಾ ಪ್ರಚಾರ ಆರಂಭವಾದಾಗ ತೃಣಮೂಲ ಕಾಂಗ್ರೆಸಿನ ಮುಖ್ಯಸ್ಥೆ ನಡೆದೇ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ , ಆದರೆ ಎಡರಂಗದ ಮುಖ್ಯಮಂತ್ರಿಗಳು ಜೀಪ್ ನಲ್ಲಿ ಪ್ರಚಾರ ನಡೆಸುತ್ತಿದ್ದಾರೆ ಎಂದು ಮಾಧ್ಯಮಗಳು ಪ್ರಚಾರ ನಡೆಸಿದವು. ಈಗ ಆಕೆ ಹೆಲಿಕಾಪ್ಟರಿನಲ್ಲೇ ಓಡಾಡುತ್ತಾರೆ, ಆದರೆ ಎಡರಂಗದ ಮುಖ್ಯಮಂತ್ರಿಗಳು ಈಗಲೂ ಅದೇ ಜೀಪಿನಲ್ಲಿ ಓಡಾಡುತ್ತಿದ್ದಾರೆ. ಮಾಧ್ಯಮಗಳು ಬಾಯಿ ಮುಚ್ಚಿ ಕೂತಿವೆ. ಇದು ಅನ್ಯಾಯ- ಹೀಗೆಂದವರು ಮಾಜಿ ಲೋಕಸಭಾಧ್ಯಕ್ಷರಾದ ಸೋಮನಾಥ ಚಟರ್ಜಿಯವರು.

ಈ ಹೆಲಿಕಾಪ್ಟರ್ ಟಿಎಂಸಿಗೆ ದೊರೆತದ್ದು ಎಲ್ಲಿಂದ? ಇದನ್ನು ಒಂದು ಭಾರತೀಯ ಕಂಪನಿ ಅಮೆರಿಕನ್ ಕಂಪನಿಯಿಂದ ಬಾಡಿಗೆಗೆ ಪಡೆದಿದೆ ಎಂಬ ಸುದ್ದಿಯಿದೆ. ಕಾಂಗ್ರೆಸ್ ಇದನ್ನು ಕೊಟ್ಟಿದೆ ಎಂಬುದು ಇನ್ನೊಂದು ಸುದ್ದಿ. ಅದು ನಿಜವಲ್ಲ ಎಂಬುದು ಮತ್ತೊಂದು ಸುದ್ದಿ.

ಈ ನಡುವೆ, ಚುನಾವಣಾ ಆಯೋಗ ಹಣಕಾಸು ಇಲಾಖೆಯ ಹಣಕಾಸು ಗುಪ್ತ ಮಾಹಿತಿ ಘಟಕಕ್ಕೆ ಹಾಗೂ ಆದಾಯ ತೆರಿಗೆ ಇಲಾಖೆಯ ವಿಚಾರಣಾ ನಿರ್ದೇಶನಾಲಯಕ್ಕೆ ತೃಣಮೂಲ ಕಾಂಗ್ರೆಸ್ ಚುನಾವಣೆಗಳಲ್ಲಿ ಡ್ರಾಫ್ಟ್‌ಗಳ ಮೂಲಕ ಹಣ ವರ್ಗಾವಣೆ ಮಾಡಿದೆ ಎಂಬ ದೂರಿನ ಕುರಿತು ತನಿಖೆ ನಡೆಸುವಂತೆ ಹೇಳಿದೆ. ರಿಸರ್ವ್ ಬ್ಯಾಂಕ್ ಮಾರ್ಗದರ್ಶನಗಳಿಗೆ ವ್ಯತಿರಿಕ್ತವಾಗಿ ನಗದು ಪಾವತಿಗೆ ಪ್ರತಿಯಾಗಿ 1.33 ಕೋಟಿ ರೂ.ಗಳ ಪೇ ಆರ್ಡರ್ ನೀಡಿರುವ ಬಗ್ಗೆ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥರಿಗೆ ಮತ್ತು ಯುನೈಟೆಡ್ ಬ್ಯಾಂಕ್ ಮತ್ತು ಅಸಲಹಾಬಾದ್ ಬ್ಯಾಂಕಿನ ಅಧ್ಯಕ್ಷರುಗಳಿಗೂ ಚುನಾವಣಾ ಆಯೋಗದಿಂದ ವಿವರಣೆ ಕೇಳಿರುವ ನೋಟೀಸು ಜಾರಿಯಾಗಿದೆ.





bExP | *§Jv]B

■ ಆರ್.ರಾಮಕೃಷ್ಣ

ಮೂರು ತುಂಬಿ " ಉರುಳಾಡುತ್ತಿರುವ ಬಿಜೆಪಿ ಸರ್ಕಾರ

ಕರ್ನಾಟಕ ರಾಜ್ಯ ಕಂಡ ಅತ್ಯಂತ ಭ್ರಷ್ಟ, ಅತ್ಯಂತ ಭಂಡ ಸರ್ಕಾರವೆಂಬ 'ಹಿರಿಮೆ'ಗೆ ಪಾತ್ರವಾಗಿರುವ ಬಿಜೆಪಿ ಸರ್ಕಾರಕ್ಕೆ ಇನ್ನೇನು 3 ವರ್ಷ ತುಂಬುತ್ತಿರುವ 'ಸಂಭ್ರಮ'. ಅಯ್ಯೋ ಮೂರು ವರ್ಷಗಳು ಹೇಗೆ ಕಳೆದು ಹೋಯಿತೆಂಬುದೇ ಗೊತ್ತಾಗಿಲ್ಲ ಪಾಪ ಮುಖ್ಯಮಂತ್ರಿಗಳು, ಮಂತ್ರಿಗಳಿಗೆ. ಓಹೋ ಏನು ಕಮ್ಮಿ ಕೆಲಸವೇ ? ಗಣಿ ಅಕ್ರಮಗಳನ್ನು ಲೂಟಿಗಳನ್ನು ಮರೆ ಮಾಚುವುದು, ನೇಮಕಾತಿ ಹಗರಣಗಳು ಹೊರಬೀಳದಂತೆ ನೋಡಿಕೊಳ್ಳುವುದು, ಭೂ ಹಗರಣಗಳ ಬಗೆಗೆ ಮಾತನಾಡುವವರ ಬಾಯಿ ಬಡಿಯುವುದು, ಆಪರೇಷನ್ ಕಮಲವನ್ನು ವ್ಯವಸ್ಥಿತವಾಗಿ ಸಂಘಟಿಸುವುದು ಅತ್ಯಾಚಾರಿ ಶಾಸಕರು, ದಗಾಕೋರ, ವಂಚಕ ಸಚಿವರು ಅವರ ಬಾನಾಗಡಿಗಳಿಂದ ಅಚ್ಚು ಕಟ್ಟಾಗಿ ಬಚಾಯಿಸುವುದು... ಲೋಕಾಯುಕ್ತರು, ಸಿಬಿಐ, ಮಾನವ ಹಕ್ಕು ಆಯೋಗ,ನ್ಯಾಯಾಲಯಗಳ ತಕರಾರು,ಪ್ರಶ್ನೆಗಳಿಗೆಲ್ಲ ಉತ್ತರ ಹೇಳುವುದು... ಎಷ್ಟೊಂದು ಕಾರ್ಯಭಾರಗಳ ನಡುವೆ ಕ್ಯಾಲೆಂಡರ್ ನೋಡಿಕೊಂಡು ಕೂರಲು ಸಮಯವಾದರೂ ಇಲ್ಲಿರುತ್ತೆ ಪಾಪ ಬಿಡಿ.

ಆದರೆ ಈಗ ಕ್ಯಾಲೆಂಡರ್ ನೋಡಲೇ ಬೇಕು. ಯಾಕೆಂದರೆ ಈ ಸರ್ಕಾರಕ್ಕೆ ಪೂರ್ಣ ಆಯಸ್ಸು ಸಿಕ್ಕರೂ ಅದು ಇನ್ನೆರಡು ವರ್ಷ ಮಾತ್ರ ಇರಲು ಸಾಧ್ಯ. ಅಂದರೆ ಮತ್ತೆ ಚುನಾವಣೆಗೆ ಹೋಗಲೇ ಬೇಕು. ಬೆಂಗಳೂರು ಮಹಾಪಾಲಿಕೆಯ ಚುನಾವಣೆ ಚುನಾನಣೆಯ ತರಹ ಅನಿಧಿಷ್ಟ ಕಾಲ ಚುನಾವಣೆಯನ್ನು ಮುಂದೂಡುತ್ತಾ ಹಾಗೇ ಅಧಿಕಾರ ಚಲಾಯಿಸುತ್ತಾ ಇರಲು ಸಾಧ್ಯವಾಗಿದ್ದರೆ.... ಎಷ್ಟು ಚೆನ್ನಾಗಿತ್ತು ಅಲ್ಲವೇ ? ಛೇ ಈ ಹಾಳು ಚುನಾವಣಾ ಆಯೋಗ...ಹೋಗಲಿ ಬಿಡಿ ಬಯ್ದು ಏನು ತಾನೆ ಉಪಯೋಗ.

ಉಳಿದ ಎರಡು ವರ್ಷಗಳಲ್ಲಿ ರಾಜ್ಯ ಬಿಜೆಪಿ ಸರ್ಕಾರದ ವರ್ಚಸ್ಸು ಹೆಚ್ಚಿಸುವಂತೆ ಕೆಲಸ ಮಾಡಲು ಯಡಿಯೂರಪ್ಪನವರು ರಾಜ್ಯ ಸಚಿವ ಸಂಪುಟದ ಎಲ್ಲ ಸಚಿವರಿಗೂ ತಾಕೀತು ಮಾಡಿದ್ದಾರೆ. ಶಾಸಕರು, ಸಚಿವರುಗಳು ತಮ್ಮ ಮಕ್ಕಳು ಹಾಗೂ ಬಂಧುಗಳನ್ನು ದೂರವಿಡಬೇಕೆಂದೂ ಯಡಿಯೂರಪ್ಪನವರು ಸೂಚಿಸಿದ್ದಾರೆ. (ಅಂದರೆ ತಾವು ಮಾಡಿದಂತೆ ಮಕ್ಕಳಿಗೆ ಬೇಕಾದ್ದು ಮಾಡಿಕೊಡಿ, ಆದರೆ ನಿಮ್ಮ ಮಕ್ಕಳು, ಬಂಧುಗಳಿಗೆ ನಿಮ್ಮ ಮನೆಗಿಂತ ಸ್ವಲ್ಪ ದೂರದಲ್ಲಿ ಮನೆ ಮಾಡಿಕೊಟ್ಟು ಅವರನ್ನು ದೂರ ಇಡಿ ಅಂತ ಇದರ ಅರ್ಥ ಅಲ್ಲವೇ) ●

ಮೇ ದಿನದ ....

ಪುಟ 9ರಿಂದ

ಮಾತನಾಡುತ್ತಿದ್ದರು.

ದುಡಿಯುವ ವರ್ಗದ ಮೇಲೆ ಪ್ರಹಾರವಾಗುತ್ತಿದೆ. ಕೆಲಸದ ಅವಧಿಯನ್ನು ಎಂಟರಿಂದ ಹತ್ತು ಗಂಟೆಗೆ ಹೆಚ್ಚಿಸುವ ಕಾನೂನು ತರಲು ಪ್ರಯತ್ನ ನಡೆಯುತ್ತಿದೆ. ಕಾರ್ಮಿಕ ದಿನಾಚರಣೆ ಆರಂಭವಾಗಿದ್ದೇ ಕೆಲಸದ ಸಮಯ ಹೆಚ್ಚಿಸಿ ನಡೆಯುತ್ತಿದ್ದ ದಬ್ಬಾಳಿಕೆ ತಪ್ಪಿಸಲು. ಈ ಹಿನ್ನೆಲೆಯಲ್ಲಿ ಕಾರ್ಮಿಕರು ಎಚ್ಚರಿಕೆಯಿಂದ ಇರಬೇಕಾಗಿದೆ. ಕಾರ್ಮಿಕರು ನಿರುದ್ಯೋಗ, ಬೆಲೆ ಏರಿಕೆ, ಆಹಾರದ ಕೊರತೆ ವಿರುದ್ಧ ಹೋರಾಟ ನಡೆಸಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ ಎಂದು ಅವರು ಹೇಳಿದರು.

ಸಿಐಟಿಯು ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಖಜಾಂಚಿ ಸುಕುಮಾರ್, ಬಾಬು ದೇವಾಡಿಗ, ಸುನಿಲ್‌ಕುಮಾರ್ ಬಜಾಲ್, ಪಾಲಿಕೆ ಸದಸ್ಯ ಜಯಂತಿ ಶೆಟ್ಟಿ, ಭಾರತಿ ಬೋಳಾರ, ಶಶೀಂದ್ರ ಕುಕ್ಯಾನ್ ಮೊದಲಾದವರು ಭಾಗವಹಿಸಿದ್ದರು. ಇದಕ್ಕೆ ಮೊದಲು ಮಂಗಳೂರು ನಗರ ಸಿಐಟಿಯು ಕಚೇರಿಯಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಕಾರ್ಮಿಕರ ಮೆರವಣಿಗೆ ನಡೆಯಿತು.

ಬೆಳ್ತಂಗಡಿಯಲ್ಲಿ ಮೇ ದಿನಾಚರಣೆ

ಬೆಳ್ತಂಗಡಿಯಲ್ಲಿ ತಾಲ್ಲೂಕು ಮೈದಾನದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಕಾರ್ಮಿಕ ದಿನಾಚರಣೆಯಲ್ಲಿ ಡಿವೈಎಫ್‌ಐ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು.

ಅಖಿಲ ಭಾರತ ಸಿಐಟಿಯು ಕಾರ್ಯದರ್ಶಿಗಳಲ್ಲೊಬ್ಬರಾದ ಎಸ್.ವರಲಕ್ಷ್ಮಿ ಸಿಪಿಐ(ಎಂ)ನ ತಾಲ್ಲೂಕು ಸಮಿತಿ ಕಾರ್ಯದರ್ಶಿ ಶಿವಕುಮಾರ್ ಎಸ್.ಎಂ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಹರಿದಾಸ್ ಎಸ್.ಎಂ, ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸುಕನ್ಯಾ, ತಾಲ್ಲೂಕು ಅಧ್ಯಕ್ಷೆ ಸುಮತಿ ಕಿದ್ಯಾಡಿ, ಎಸ್ಎಫ್ಐ ಜಿಲ್ಲಾಧ್ಯಕ್ಷ ಸುಜಿತ್ ಉಜಿರೆ, ಕಾರ್ಮಿಕ ಮುಖಂಡರಾದ ಬಿ.ಎಂ.ಭಟ್, ವಸಂತ ನಡ, ಯಶೋದಾ, ನಬೀಸಾ, ದೇವಕಿ, ಶೇಖರ ಲ್ಯಾಲ, ದಾಮೋದರ ಭಟ್ ಮೊದಲಾದವರು ಉಪಸ್ಥಿತರಿದ್ದರು.

ಅಲ್ಲಲ್ಲಿ ಮೇ ದಿನಾಚರಣೆ

ಮಂಗಳೂರು ನಗರದ ಜಪ್ಪಿನಮೊಗರು, ತಕ್ಕಲಡ್ಕ, ಕಣ್ಣೂರು, ಶಕ್ತಿನಗರ, ಕೊಂಚಾಡಿ, ಪಂಜಿಮೊಗರು, ಉರ್ವಸ್ಟೋರ್, ಬೋಳಾರ ಮೊದಲಾದೆಡೆ ಸಿಐಟಿಯು ನೇತೃತ್ವದಲ್ಲಿ ಮೇ ದಿನವನ್ನು ಆಚರಿಸಲಾಯಿತು. ಈ ಸಂದರ್ಭ ನಗರದ ಕಾರ್ಮಿಕ ಹಾಗೂ ಯುವಜನ ಮುಖಂಡರಾದ ಕೃಷ್ಣಪ್ಪ ಕೊಂಚಾಡಿ, ಸ್ಯಾಮುವೆಲ್ ಟೈಟಸ್, ಅಶೋಕ ಶ್ರೀಯಾನ್, ಚಂದ್ರಹಾಸ್ ಜೆ. ವಾಸುದೇವ ಜೆ.ಪಿ, ದಯಾನಂದಶೆಟ್ಟಿ, ಪ್ರದೀಪ್, ಪ್ರಶಾಂತ್, ಮನೋಜ್, ನಿತ್ಯಾನಂದ ಮೊದಲಾದವರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಗುರುಪುರ ಕೈಕಂಬದಲ್ಲಿ ಗುರುಪುರ ಸುರತ್ಕಲ್ ಪ್ರದೇಶ ಬೀಡಿ ಲೇಬರ್ ಯೂನಿಯನ್ ಮತ್ತು ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘ (ಸಿಐಟಿಯು)ದ ನೇತೃತ್ವದಲ್ಲಿ ನಡೆದ ಮೇ ದಿನಾಚರಣೆಯಲ್ಲಿ ಹಿರಿಯ ಕಾರ್ಮಿಕ ನಾಯಕರಾದ ಯು.ಬಿ.ಲೋಕಯ್ಯ ಅಲ್ಲದೆ ಕೆ.ಗಂಗಯ್ಯ ಅಮೀನ್, ನೋಣಯ್ಯ ಗೌಡ, ಇಂದಿರಾ ಮಳಲಿ, ಲಕ್ಷ್ಮಿ ಮಳಲಿ, ಗೋಪಾಲ ಮಳಲಿ, ಹೇಮಾವತಿ ಪೆರಾರ್, ಲಲಿತ ಮೂಡು ಪೆರಾರ್ ಮೊದಲಾದವರು ಭಾಗವಹಿಸಿದ್ದರು.

ಕುಂದಾಪುರ, ಉಡುಪಿ, ಕುಪ್ಪೆಪದವು ಮೊದಲಾದೆಡೆಗಳಲ್ಲೂ ಕಾರ್ಮಿಕ ದಿನಾಚರಣೆ ನಡೆದಿದ್ದು, ಹೆಚ್ಚಿನ ವಿವರಗಳು ಲಭಿಸಿಲ್ಲ. ●

ಪುಟ 12 ರಿಂದ

ಕಪ್ಪು ಹಣ ಪತ್ತೆಯಲ್ಲಿ ಆಮೆವೇಗ: ಸುಪ್ರಿಂ ಕೋರ್ಟ್ ತರಾಟೆ

ಕಪ್ಪು ಹಣದ ಪತ್ತೆಗೆ ಒಂದು ವಿಶೇಷ ತನಿಖಾ ದಳ(ಎಸ್‌ಐಟಿ) ನೇಮಿಸಬೇಕೆಂಬ ಪ್ರಸ್ತಾಪ ಬಂದಾಗ ಯುಪಿಎ-2 ಸರಕಾರ 10 ಮಂದಿ ಅಧಿಕಾರಿಗಳ ತಂಡ ರಚಿಸಿದ್ದು ಇಂತಹ ಒಂದು ತಂಡ ರಚನೆಯಾಗುವುದನ್ನು ತಡೆಯಲಿಕ್ಕಾಗಿ ಎಂದು ಈ ಅಂಕಣದಲ್ಲಿ ಹಿಂದೆ ಗಮನಿಸಿದ್ದೆವು. ಈ ವಾರ ಯುಪಿಎ ಸರಕಾರದ ವಕೀಲರು ಇಂತಹ ಎಸ್‌ಐಟಿ ನೇಮಕ ಅಥವ ಮೇಲುಸ್ತುವಾರಿಗೆ ಒಬ್ಬ ಪ್ರತಿಷ್ಠಿತ ನಿವೃತ್ತ ನ್ಯಾಯಾಧೀಶರ ನೇಮಕ ಕಪ್ಪು ಹಣ ಪತ್ತೆಯ ಕೆಲಸವನ್ನು ನಿಧಾನಗೊಳಿಸುತ್ತದೆ ಎಂದು ಅದನ್ನು ಬಲವಾಗಿ ವಿರೋಧಿಸಿತು. ಇದಕ್ಕೆ ಸ್ಪಂದಿಸಿದ ನ್ಯಾಯಪೀಠ 'ಈ ಕೇಸಿನಲ್ಲಿ ವೇಗವೆಂಬುದು ಎಲ್ಲಿದೆ' ಒಬ್ಬ ವ್ಯಕ್ತಿಯ ಮೇಲೆ 2007ರಲ್ಲಿ ಕೇಸು ದಾಖಲಾಗಿದೆ. ಆದರೆ ಕಸ್ಟಡಿಯಲ್ಲಿ ವಿಚಾರಣೆ ಆರಂಭವಾದದ್ದು 2011ರಲ್ಲೇ, ನ್ಯಾಯಾಲಯದ ಮಧ್ಯಪ್ರವೇಶದ ನಂತರ? ಎಂದು ಯುಪಿಎ ಸರಕಾರವನ್ನು ತರಾಟೆಗೆ ತೆಗೆದುಕೊಂಡಿತು. ಸರಕಾರ ನೇಮಿಸಿರುವ ತಂಡದ ಕೆಲಸದ ಮೇಲೆ ನಿಗಾ ಇಡಲು ಪ್ರತಿಷ್ಠಿತ ನಿವೃತ್ತ ನ್ಯಾಯಾಧೀಶರನ್ನು ನೇಮಿಸಿದರೆ ತಪ್ಪೇನು ಎಂದು ಕೇಳಿದ ನ್ಯಾಯಪೀಠ ಈ ಬಗ್ಗೆ ತೀರ್ಪನ್ನು ಕಾದಿರಿಸಿದೆ.

ದೇಶದ ಸರ್ವೋಚ್ಚ ನ್ಯಾಯಾಲಯದ ಇನ್ನೊಂದು ಪೀಠ 2008ರಲ್ಲಿ ವಿಶ್ವಾಸಮತದ ಸಂದರ್ಭದಲ್ಲಿ 'ವೋಟಿಗಾಗಿ ನೋಟು' ಹಗರಣದಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವಲ್ಲಿ ನಿಷ್ಕ್ರಿಯತೆಯ ಕುರಿತು ತನ್ನ ಮುಂದಿರುವ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗೆ ಸಂಬಂಧಪಟ್ಟಂತೆ, ಈ ಪ್ರಕರಣದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ವರದಿ ಒಪ್ಪಿಸುವಂತೆ ಯುಪಿಎ ಸರಕಾರಕ್ಕೆ ಮತ್ತು ದಿಲ್ಲಿ ಪೋಲಿಸ್ ಕಮಿಶನರ್‌ಗೆ ನೋಟೀಸು ಜಾರಿ ಮಾಡಿದೆ.

★ ★ ★

ಏರ್ ಇಂಡಿಯಾ ಮುಷ್ಕರ: ದುರಾಡಳಿತದ ದುಷ್ಫಲ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಏರ್ ಇಂಡಿಯಾ ಪೈಲಟ್‌ಗಳ ಮುಷ್ಕರ ಎಂಟನೇ ದಿನ ಪೂರೈಸಿದ್ದು, ಈಗಷ್ಟೇ ವಿಮಾನಯಾನ ಇಲಾಖೆ ಪೈಲಟುಗಳ ಸಂಘದೊಡನೆ ಮಾತುಕತೆ ನಡೆಸುತ್ತಿದೆ. ಇದಕ್ಕೆ ಮೊದಲು ಏರ್ ಇಂಡಿಯಾ ಆಡಳಿತ ಪೈಲಟ್‌ಗಳ ಸಂಘಕ್ಕೆ ಮಾನ್ಯತೆ ರದ್ದು ಮಾಡಿ, ಅದರ ಕಚೇರಿಗೆ ಬೀಗ ಹಾಕಿ, ಮುಖಂಡರನ್ನು ಅಮಾನತು ಮಾಡಿತು, ಎಲ್ಲ ಪೈಲಟ್‌ಗಳಿಗೆ ವೈಯಕ್ತಿಕ ಇ-ಮೇಲ ಕಳಿಸಿ ಕೆಲಸಕ್ಕೆ ಹಾಜರಾಗುವಂತೆ ಬೆದರಿಸಲಾಯಿತು. ಕೊನೆಗೆ ವಿಮಾನಯಾನ ಇಲಾಖೆಯ ಇಬ್ಬರು ಅಧಿಕಾರಿಗಳು ಪೈಲಟುಗಳ ಸಂಘದ ಮುಖಂಡರೊಂದಿಗೆ ಮಾತುಕತೆ ಆರಂಭಿಸಿದ್ದಾರೆ.

ಹಿರಿಯ ಕಾರ್ಮಿಕ ಮುಖಂಡ ಹಾಗೂ ಸಿಐಟಿಯು ಉಪಾಧ್ಯಕ್ಷ ಡಾ.ಎಂ.ಕೆ.ಪಂಧೆಯವರು ಈ ಮೊದಲೇ ವಿಮಾನಯಾನ ಇಲಾಖೆ ಮಂತ್ರಿಗಳಾದ ವಾಯಲಾರ್ ರವಿಯವರಿಗೆ ಪತ್ರ ಬರೆದು ಏರ್ ಇಂಡಿಯಾದ ಅಧ್ಯಕ್ಷರ ದುರಾಡಳಿತವೇ ಈಗಿನ ಸಮಸ್ಯೆಗೆ ಮುಖ್ಯ ಕಾರಣ ಎಂಬ ಅಂಶವನ್ನು ಅವರ ಗಮನಕ್ಕೆ ತಂದಿದ್ದರು. ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ವಿಲೀನದ ಮೊದಲು ಈ ಸಾರ್ವಜನಿಕ ವಲಯದ ಕಂಪನಿ ಚೆನ್ನಾಗಿ ನಡೆಯುತ್ತಿತ್ತು. ಆದರೆ ವಿಲೀನದ ನಂತರದ ದುರಾಡಳಿತ, ದುಂದು ವೆಚ್ಚ ಮತ್ತು ಖಾಸಗೀ-ಪರ ಧೋರಣೆಗಳಿಂದಾಗಿ ಇಂತಹ ಹೀನ ಸ್ಥಿತಿಗೆ ಬಂದಿದೆ. ಆದರೆ ಇದಕ್ಕೆ ಕಾರಣರಾದವರನ್ನು ಶಿಕ್ಷಿಸುವ ಬದಲು ನೌಕರರ ಮೇಲೆ ಗದಾಪ್ರಹಾರ ಸರಿಯಲ್ಲ ಎಂದು ಪಂಧೆಯವರು ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಖೇದ ವ್ಯಕ್ತಪಡಿಸಿದ್ದಾರೆ. ಸ್ವತಃ ಕಾರ್ಮಿಕ ಮುಖಂಡರಾಗಿದ್ದ ಮಂತ್ರಿಗಳು ಇದನ್ನು ಸರಿಪಡಿಸಲು ಮುಂದಾಗಬೇಕೆಂದು ಕೇಳಿದ್ದಾರೆ.

ಪಂಧೆಯವರು ಮಂತ್ರಿಗಳನ್ನು ಭೇಟಿಯಾಗಲು ಅವಕಾಶ ಕೊಡಬೇಕೆಂದು ಹಲವು ಬಾರಿ ಪ್ರಯತ್ನಿಸಿದರೂ ಸಿಗದ್ದರಿಂದ ಈ ಪತ್ರವನ್ನು ಬರೆಯಬೇಕಾಗಿ ಬಂದಿದೆ ಎಂಬ ಸಂಗತಿಯನ್ನು ಕೂಡ ಈ ಪತ್ರ ಮಂತ್ರಿಗಳ ಗಮನಕ್ಕೆ ತಂದಿದೆ. ●

ಆದಿವಾಸಿಗಳ ರಾಜ್ಯಮಟ್ಟದ ಸಮಾವೇಶ

ಪುಟ 3 ರಿಂದ

ಜಾರಿಗೊಳಿಸುವಲ್ಲಿ ಕರ್ನಾಟಕ ಸರ್ಕಾರ ಆಸಕ್ತಿ ತೋರಿಸಿಲ್ಲ' ಎಂದು ದೂರಿದ ಅವರು

ಅರಣ್ಯ ಹಕ್ಕು ಕಾಯ್ದೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸುವಲ್ಲಿ ವಿಫಲವಾಗಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಆದಿವಾಸಿಗಳನ್ನು ನಿರ್ಲಕ್ಷಿಸಿದೆ. ಆದ್ದರಿಂದ ಎಲ್ಲರೂ ಒಟ್ಟಾಗಿ ಹೋರಾಟ ನಡೆಸಬೇಕಾಗಿದೆ. ಈ ನಿಟ್ಟಿನಲ್ಲಿ ನಡೆಯುತ್ತಿರುವ ಆದಿವಾಸಿಗಳ ಪ್ರಥಮ ಸಮಾವೇಶ ಭವಿಷ್ಯದಲ್ಲಿ ಮೈಲುಗಲ್ಲಾಗಲಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಅಖಿಲ ಭಾರತ ಸಹ ಕಾರ್ಯದರ್ಶಿ ಡಾ.ವಿಜು ಕೃಷ್ಣನ್, ವೈನಾಡು ಆದಿವಾಸಿ ಕ್ಷೇಮ ಸಮಿತಿ ಜಿಲ್ಲಾ ಕಾರ್ಯದರ್ಶಿ ವಾಸುದೇವನ್, ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ, ಅಧ್ಯಕ್ಷ ಮಂಡಳಿಯ ಕೃಷ್ಣಪ್ಪ ಕೊಂಚಾಡಿ, ಪಿ.ಆರ್.ಭರತ್, ಗಣೇಶ್, ಮಣಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ನಿತ್ಯಾನಂದ ಸ್ವಾಮಿ, ಪತ್ರಕರ್ತರ ಎಸ್.ವೈ.ಗುರುಶಾಂತ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ರಾಜ್ಯ ಅಧ್ಯಕ್ಷ ಭರತ್‌ರಾಜ್ ಇದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ಯವರು ಸಮಾರೋಪ ಮಾಡಿದರು. ಆದಿವಾಸಿಗಳ



ಸಂಘಟನೆ ಜಿಲ್ಲೆ ಹಾಗೂ ಹಾಡಿಗಳಲ್ಲಿ ಸಂಘಟನಾತ್ಮಕ ಸ್ವರೂಪ ಪಡೆಯಬೇಕೆಂದು ಕರೆ ನೀಡಿದರು.

ಸಮಾವೇಶದ ನಿರ್ಣಯಗಳು

ಆದಿವಾಸಿಗಳಿಗೆ ಕೇಂದ್ರ ಸರ್ಕಾರ ನೀಡಿರುವ ಸಂವಿಧಾನಾತ್ಮಕ ಮೀಸಲಾತಿ (ಶೇ.7 ನ್ನು ರಾಜ್ಯ ಸರ್ಕಾರ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು. ಹುಲಿ ಅಭಯಾರಣ್ಯ ಎಂದು ಘೋಷಿಸಿರುವ ಪ್ರದೇಶದಿಂದ ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು. ಕೊಡಗು ಜಿಲ್ಲೆ ಅರಣ್ಯ ದೇವರ ಕಾಡುವಾಸಿಗಳಿಗೆ ಮೂಲಭೂತ ಸೌಲಭ್ಯ ಸ್ಥಗಿತಗೊಳಿಸಿರುವುದಕ್ಕೆ ತೀವ್ರ ಖಂಡನೆ, 2009 ರ ಅರಣ್ಯ ಹಕ್ಕು ಕಾಯ್ದೆಯನ್ನು ಯಥಾವತ್ತಾಗಿ ಜಾರಿಗೊಳಿಸುವುದು, ಹಾಡಿಗಳಿಗೆ ರಸ್ತೆ, ಕುಡಿಯುವ ನೀರು, ಬೀದಿ ದೀಪ ಸೇರಿದಂತೆ ಮೂಲಭೂತ ಸೌಲಭ್ಯ ಒದಗಿಸುವಂತೆ ಆಗ್ರಹ.

ಬ್ಯಾಂಕ್ ಸಾಲ, ಅಂತ್ಯೋದಯ, ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಸಮರ್ಪಕ ಜಾರಿ, ಪ್ರತಿ ಹಾಡಿಗೊಂದು ವಸತಿ ಶಾಲೆ, ಆದಿವಾಸಿಗಳಿಗೆ ಮಂಜೂರಾಗುವ ಅನುದಾನವನ್ನು ಮಧ್ಯವರ್ತಿಗಳಿಗೆ ಅವಕಾಶ ನೀಡದೇ ಸಂಪೂರ್ಣವಾಗಿ ಬಳಸಬೇಕು ಎಂಬುದೂ ಸೇರಿದಂತೆ ಸಮಾವೇಶದಲ್ಲಿ ಒಟ್ಟು 20 ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಆದಿವಾಸಿಗಳ ಸಂಗಮ

ಸಮಾವೇಶವು ಆದಿವಾಸಿಗಳ ವಿಶಿಷ್ಟ ಸಂಗಮವಾಗಿತ್ತು. ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣಕನ್ನಡ, ಉತ್ತರಕನ್ನಡ, ಉಡುಪಿ, ರಾಮನಗರ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಮೊದಲಾದ ಜಿಲ್ಲೆಗಳ ಜೇನು ಕುರುಬರು, ಬೆಟ್ಟ ಕುರುಬರು, ಸೋಲಿಗರು, ಕಾಡು ಕುರುಬರು, ಕೊರಗರು, ಇರುಳಿಗರು, ಹಾಲಕ್ಕಿ ಒಕ್ಕಲು, ಕರೆ ಒಕ್ಕಲು, ಮನ್ನರು, ಎರವಲು ಮೊದಲಾದ ಪಂಗಡವರು ಪಾಲ್ಗೊಂಡರು.

ಸ್ವಾರ್ಥಕ್ಕೆ ಬಳಕೆ

"ಆದಿವಾಸಿಗಳನ್ನು ಹಾಗೂ ಅವರ ಸಂಕಷ್ಟಗಳನ್ನು ಕೆಲವರು ತಮ್ಮ ಸ್ವಾರ್ಥ ಸಾಧನೆಗಾಗಿ ಬಳಸಿಕೊಳ್ಳುತ್ತಿದ್ದಾರೆ. ಇದು ದೂರಾಗಬೇಕು. ಹಕ್ಕೊತ್ತಾಯಗಳಿಗಾಗಿ ಸಂಘಟಿತರಾಗಿ ಹೋರಾಡಬೇಕು."

- ಎಸ್.ವರಲಕ್ಷ್ಮಿ,
ರಾಜ್ಯ ಅಂಗನವಾಡಿ ನೌಕರರ ಸಂಘ
ಪ್ರಧಾನ ಕಾರ್ಯದರ್ಶಿ

ನೂತನ ಸಮಿತಿ ರಚನೆ

ಅರಣ್ಯದಂಚಿನಲ್ಲಿ ವಾಸಿಸುತ್ತಿರುವವರ ಕ್ಷೇಮಪಾಲನೆಗಾಗಿ 'ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ'ಯನ್ನು ಇಂದು ನಡೆದ ಸಮಾವೇಶದಲ್ಲಿ ರಚಿಸಲಾಯಿತು. ಸಮಿತಿಯ ರಾಜ್ಯ ಸಂಚಾಲಕರಾಗಿ ಕೆ.ಗಣೇಶ್, ಜೆ.ಕೆ. ಮಣಿ, ಸಂಘಟನಾ ಸಂಚಾಲಕರಾಗಿ ಪಿ.ಆರ್.ಭರತ್, 30 ಮಂದಿ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಎಂಡೋಸಲ್ಫಾನ್ ವಿರುದ್ಧ ಡಿವೈಎಫ್‌ಐ ಪ್ರತಿಭಟನೆ

ಎಂಡೋಸಲ್ಫಾನ್ ಪರ ಭಾರತ ಸರಕಾರದ ನಿಲುವನ್ನು ಪ್ರತಿಭಟಿಸಿ ಕೇರಳದಲ್ಲಿ ಎಡರಂಗದ ಭಾಗೀದಾರಿ ಪಕ್ಷಗಳು ನೀಡಿದ ಕರೆಯ ಮೇರೆಗೆ ಏಪ್ರಿಲ್ 29 ರಂದು ಕೇರಳ ಬಂದ್‌ಗೆ ಕರೆಕೊಟ್ಟಿದ್ದವು. ದಕ್ಷಿಣ ಕನ್ನಡ ಜಿಲ್ಲೆಗೆ ತಾಗಿಕೊಂಡಿರುವ ಕೇರಳದ ಕಾಸರಗೋಡು ಜಿಲ್ಲೆಯ ಕೆಲವು ಗ್ರಾಮಗಳು ಎಂಡೋಸಲ್ಫಾನ್‌ನಿಂದ ಬಾಧಿತವಾಗಿದ್ದವು. ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕೊಕ್ಕಡ, ಪಟ್ರಮೆ, ನಿಡ್ಲೆ ಮೊದಲಾದ ಗ್ರಾಮಗಳೂ ಎಂಡೋಸಲ್ಫಾನ್‌ನಿಂದ ತೀವ್ರವಾಗಿ ಬಾಧಿತವಾಗಿ ಸರ್ಕಾರದ ಗಮನ ಸೆಳೆದಿದ್ದರೂ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಕೀಟೌಷಧ ಸಿಂಪರಣೆಯನ್ನು ಹಿಂತೆಗೆಯಬೇಕೆಂಬ ಹೋರಾಟ ಒಮ್ಮೆ ಪ್ರಾರಂಭವಾಗಿ ಬಳಿಕ ಸ್ಥಗಿತಗೊಂಡಿತ್ತು. ಈ ಹಿನ್ನೆಲೆಯಲ್ಲಿ ಕೇರಳ ಬಂದ್ ದಿನದಂದೇ ಎಂಡೋಸಲ್ಫಾನ್ ವಿರುದ್ಧ ಪ್ರತಿಭಟನೆಯನ್ನು ಏಪ್ರಿಲ್ 29 ರಿಂದ ಡಿವೈಎಫ್‌ಐ ಜಿಲ್ಲಾ ಸಮಿತಿ ದಕ್ಷಿಣಕನ್ನಡ ಜಿಲ್ಲಾಧಿಕಾರಿಗಳ ಕಚೇರಿ ಎದುರು ಹಮ್ಮಿಕೊಂಡಿತ್ತು.



ಪ್ರತಿಭಟನಾಕಾರನ್ನುದ್ದೇಶಿಸಿ ಮಾತನಾಡಿದ ಡಿವೈಎಫ್‌ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಎಂಡೋಸಲ್ಫಾನ್ ಕೀಟನಾಶಕದಿಂದ ಕೇರಳದಷ್ಟೇ ಹಾನಿ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಆಗಿದೆ. ಈ ಹಿನ್ನೆಲೆಯಲ್ಲಿ ಪರಿಹಾರ ನೀಡುವ, ಚಿಕಿತ್ಸೆಗೆ ನೆರವಾಗುವ ವಿಷಯದಲ್ಲಿ ಕೇರಳ ಮಾದರಿಯನ್ನು ಇಲ್ಲೂ ಅನುಸರಿಸಬೇಕು. ರಾಜ್ಯದ ಬಿಜೆಪಿ ಸರ್ಕಾರ ತಾತ್ಕಾಲಿಕವಾಗಿ ಎಂಡೋಸಲ್ಫಾನ್ ಮೇಲೆ ನಿಷೇಧ ಹೇರಿದ್ದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಅಷ್ಟೇ ಸಾಲದು. ಕೇರಳದಲ್ಲಿ ಪರಿಹಾರಧನ ಉಚಿತ ಚಿಕಿತ್ಸೆ, ಶಿಬಿರ ನಡೆಯುತ್ತಿದೆ. ಆದರೆ ಕರ್ನಾಟಕದಲ್ಲಿ ಪರಿಹಾರ ಎಲ್ಲರಿಗೂ ಸಿಕ್ಕಿಲ್ಲ. ಸರ್ಕಾರ ಕಣ್ಣೊರೆಸುವ ತಂತ್ರ ಅನುಸರಿಸುತ್ತದೆ ಎಂದು ದೂರಿದರು. ಎಂಡೋಸಲ್ಫಾನ್ ನಿಷೇಧಿಸುವ 86 ದೇಶಗಳ ಸಾಲಿನಲ್ಲಿ ಭಾರತವೂ ಸೇರಬೇಕು ಎಂಬುದು ನಮ್ಮ ಆಗ್ರಹವಾಗಿದೆ. ಕರ್ನಾಟಕ ಮತ್ತು ಕೇರಳದಲ್ಲಿ ಮಾತ್ರ ಎಂಡೋಸಲ್ಫಾನ್ ಸಮಸ್ಯೆ ಇದೆ. ದೇಶಾದ್ಯಂತ ದುಷ್ಪರಿಣಾಮ ವರದಿಗಳು ಬರುವವರೆಗೆ ಇದನ್ನು ನಿಷೇಧಿಸಲು ಸಾಧ್ಯವಿಲ್ಲ ಎಂದು ಪ್ರಧಾನಿ ಮನಮೋಹನ್‌ಸಿಂಗ್ ಹೇಳುವ ಮೂಲಕ ಮಾನವೀಯತೆ ಮರೆತು ಬಹುರಾಷ್ಟ್ರೀಯ ಕಂಪನಿಗಳ ಏಜೆಂಟರಂತೆ ವರ್ತಿಸುತ್ತಿದ್ದಾರೆ ಎಂದರು.

ಪ್ರತಿಭಟನಾಕಾರರು ಬಳಿಕ 'ಎಂಡೋಸಲ್ಫಾನ್'ಭೂತದಹನ ನಡೆಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ದಯಾನಂದಶೆಟ್ಟಿ ಸ್ವಾಗತಿಸಿದರು. ಮಂಗಳೂರು ನಗರ ಘಟಕದ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ವಂದಿಸಿದರು. ನಗರ ಡಿವೈಎಫ್‌ಐ ಕಾರ್ಯಧರ್ಶಿ ಸಂತೋಷ್‌ಕುಮಾರ್ ಬಜಾಲ್, ಯುವತಿಯರ ಘಟಕದ ಮುಂದಾಳುಗಳಾದ ಪ್ರಮೀಳಾ ಶಕ್ತಿನಗರ, ಸುನಂದಾ ಕೊಂಚಾಡಿ, ಸಾಝೀರಾ ಮತ್ತಿತರರು ಉಪಸ್ಥಿತರಿದ್ದರು.

ಜಿನೇವಾದಲ್ಲಿ ನಡೆದ ಅಂತರಾಷ್ಟ್ರೀಯ ಸಮಾವೇಶದಲ್ಲಿ ಎಂಡೋಸಲ್ಫಾನ್ ನಿಷೇಧಕ್ಕೆ ಶಿಫಾರಸು ಮಾಡುವ ಸುದ್ದಿ ಪ್ರತಿಭಟನೆಯ ದಿನದಂತೆ ಪ್ರಕಟವಾಗಿದ್ದು ಇದರಿಂದಲಾದರೂ ಭಾರತ ಸರ್ಕಾರ ಎಚ್ಚರಾಗಿ ಎಂಡೋಸಲ್ಫಾನ್ ಬಳಕೆ ನಿಷೇಧ ಜಾರಿಗೆ ತರಬಹುದೆಂದು ನಿರೀಕ್ಷಿಸೋಣ.

ಪುರುಲಿಯ.........

ಪುಟ 8 ರಿಂದ

ಸಾಧ್ಯವಾಯಿತು? ಅದು ಯಾರ ಗಮನಕ್ಕೂ ಬರದೆ ಪ್ರವೇಶಿಸಿತ್ತೆಂದಾದರೆ, ಭಾರತದ ಭದ್ರತೆಗೆ ಅಪಾಯವೊಡ್ಡುವಂತಹ ಗಂಭೀರ ಲೋಪ ಹೇಗೆ ಸಾಧ್ಯವಾಯಿತು? ಬದಲಾಗಿ, ಅದು ಆಗಿನ ಕೇಂದ್ರ ಸರಕಾರದ ಶಾಮೀಲಿನಿಂದ ಪ್ರವೇಶಿಸಿದ್ದರೆ, ವಿಷಯ ಮತ್ತಷ್ಟು ಗಂಭೀರವಾಗುತ್ತದೆ. ಇದು ನಿಜವಾಗಿದ್ದರೆ, ಕೇಂದ್ರ ಸರಕಾರ ಎಡರಂಗ ಸರಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನ ನಡೆಸಿತ್ತು ಎಂಬ ಆಪಾದನೆಗೆ ಬಹಳ ಬಲ ಸಿಗುತ್ತದೆ.

ಈ ಆಪಾದನೆ ನಿಜವಾಗಿದ್ದರೆ, ಇದು ಇನ್ನಷ್ಟು ಗಂಭೀರ ಸಂಗತಿ ಎಂದಿರುವುದು, ಈ ಶಸ್ತ್ರಾಸ್ತ್ರಗಳನ್ನು ಉದುರಿಸಿ ಹೋಗಲು ಅವಕಾಶ ನೀಡುವುದಕ್ಕಾಗಿ ಕೇಂದ್ರ ಸರಕಾರ ಭಾರತೀಯ ಭದ್ರತೆಯನ್ನೇ ಭೇದಿಸಲು ಅನುಮತಿ ನೀಡಿತ್ತೇ ಎಂಬರ್ಥದಲ್ಲಿ. ಎರಡನೆಯದಾಗಿ, ಕೇಂದ್ರ ಸರಕಾರದ ಇಂತಹ ಪ್ರಯತ್ನಗಳು ನಮ್ಮ ಸಂವಿಧಾನದ ಬುನಾದಿಯನ್ನೇ ಬುಡಮೇಲು ಮಾಡಿದಂತೆ. ಏಕೆಂದರೆ, ಒಕ್ಕೂಟತತ್ವ ನಮ್ಮ ಸಂವಿಧಾನದ ಒಂದು ಪ್ರಧಾನ ಲಕ್ಷಣ. ತನ್ನ ರಾಜಕೀಯ ಮತ್ತು ಚುನಾವಣಾ ಉದ್ದೇಶ ಸಾಧನೆಗಾಗಿ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರಕಾರ, ಯಾವ ಸಂವಿಧಾನದ ಅಡಿಯಲ್ಲಿ ಪ್ರತಿಜ್ಞೆ ಸ್ವೀಕರಿಸಿತ್ತೋ, ಅದನ್ನೇ ಬುಡಮೇಲು ಮಾಡಲು ಸಿದ್ಧವಾಯಿತು ಎಂಬುದು ನಿಜಕ್ಕೂ ಗಂಭೀರ ಸಂಗತಿ. ಇನ್ನೂ ಹೊಲಸು ಸಂಗತಿಯೆಂದರೆ, ಆ ವಿಮಾನ ಶಸ್ತ್ರಾಸ್ತ್ರಗಳನ್ನು ಉದುರಿಸಿ ಹೋದ ಮೇಲೆ, ಅದನ್ನು ಮುಂಬೈ ವಿಮಾನ ನಿಲ್ದಾಣದಲ್ಲಿ ನೆಲಕ್ಕಿಳಿಯುವಂತೆ ಮಾಡಿದ ಮೇಲೂ, ಕಿಮ್ ಡೆವಿ ಆರಾಮವಾಗಿ ನಡೆದು ಬಿಡಲು ಅವಕಾಶ ಕೊಡಲಾಯಿತು. ಆತನ ಸಹಚರ ಪಿಟರ್ ಬ್ಲೀಚ್ ಮತ್ತು ಆ ವಿಮಾನದ ಆರು ಮಂದಿ ಲ್ಯಾಟಿವಿಯನ್ ಸಿಬ್ಬಂದಿಯನ್ನು (ಇವರು ಮುಂದೆ ರಶ್ಯನ್ ನಾಗರಿಕತ್ವ ಪಡೆದರು) ಬಂಧಿಸಿ ಇಟ್ಟುಕೊಳ್ಳಲಾಯಿತು. ನಂತರ ರಶ್ಯನ್ ವಿಮಾನ ಸಿಬ್ಬಂದಿಯನ್ನು ಬಿಡುಗಡೆ ಮಾಡಲಾಯಿತು, ಪಿಟರ್ ಬ್ಲೀಚ್‌ನ ವಿಚಾರಣೆ ನಡೆಸಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು.

ಕ್ಷಮಾದಾನ ನೀಡಿದ್ದೇಕೆ?

ಈ ಪಿಟರ್ ಬ್ಲೀಚ್‌ನನ್ನೂ ಮುಂದೆ ರಾಷ್ಟ್ರಪತಿಗಳ ಕ್ಷಮಾದಾನದ ಅಡಿಯಲ್ಲಿ ಬಿಡುಗಡೆ ಮಾಡಲಾಯಿತು. ಈ ವಿಲಕ್ಷಣ ನಿರ್ಧಾರ ಕೈಗೊಂಡದ್ದು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ- ಏಕೆ ಇಂತಹ ನಿರ್ಧಾರ ಕೈಗೊಳ್ಳಲಾಯಿತು ಎಂಬುದಕ್ಕೆ ಇದುವರೆಗೂ ವಿವರಣೆ ಸಿಕ್ಕಿಲ್ಲ. ಈ ನಿರ್ಣಯ ತಗೊಂಡಾಗ, ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಈ ಮಂತ್ರಿಮಂಡಲದ ಒಬ್ಬ ಸದಸ್ಯೆಯಾಗಿದ್ದರು. ಬ್ಲೀಚ್ ಕ್ಷಮಾದಾನ ಯಾಚಿಸಿದ್ದ, ಆದರೆ ಅದನ್ನು ಒಪ್ಪುವ ಪ್ರಶ್ನೆಯೇ ಇಲ್ಲ ಎಂಬ ಹಲವು ಹೇಳಿಕೆಗಳು ಈ ನಿರ್ಧಾರ ಕೈಗೊಳ್ಳುವ ಮೊದಲು ಬಂದಿದ್ದವು. ಜುಲೈ 31, 2003ರಂದು, ಎಲ್.ಕೆ.ಅಡ್ವಾಣಿಯವರ ಅಡಿಯಲ್ಲಿದ್ದ ಗೃಹ ಮಂತ್ರಾಲಯ ಬ್ಲೀಚ್‌ನನ್ನು ಬಿಡುಗಡೆ ಮಾಡುವ ಪ್ರಾರ್ಥನೆಯನ್ನು ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ತಿರಸ್ಕರಿಸಿದ್ದಾರೆ ಎಂದು ದಿಲ್ಲಿ ಹೈಕೋರ್ಟಿಗೆ ತಿಳಿಸಿತ್ತು. ಆದರೆ ಜನವರಿ 30, 2004ರಂದು ಪಿಟರ್ ಬ್ಲೀಚ್‌ನ ಕ್ಷಮಾ ಪ್ರಾರ್ಥನೆಗೆ ಸ್ಪಂದಿಸಿ ಸೆಕ್ಷನ್ 72(1ಬಿ) ಅಡಿಯಲ್ಲಿ ಆತನ ಉಳಿದ ಶಿಕ್ಷಾ ಅವಧಿಯನ್ನು ಮನ್ನಿಸುವ ರಾಷ್ಟ್ರಪತಿಗಳ ಆದೇಶ ಪಶ್ಚಿಮ ಬಂಗಾಲದ ಗೃಹ ಕಾರ್ಯದರ್ಶಿಗಳ ಕೈಸೇರಿತು. ಕೊಲ್ಕತಾದಲ್ಲಿ ಎಂಟು ವರ್ಷ, 30 ದಿನ ಭಾರತೀಯ ಜೈಲಿನಲ್ಲಿ ಕಳೆದ ಮೇಲೆ ಬ್ಲೀಚ್‌ನಿಗೆ ಸ್ವಾತಂತ್ರ್ಯ ಕೊಡಲಾಯಿತು. ಇದರಿಂದ ಕಿಮ್ ಡೆವಿಯನ್ನು ಡೆನ್ಮಾರ್ಕಿನಿಂದ ವಿಚಾರಣೆಗೆ ಪಡೆಯುವ ಭಾರತದ ಪ್ರಯತ್ನಗಳಿಗೆ ಅಡ್ಡಿಯಾಗುತ್ತದೆ ಎಂದು ಗೊತ್ತಿದ್ದೂ ಇದು ನಡೆಯಿತು.

ಹೀಗೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಒಂದಿಲ್ಲೊಂದು ರೀತಿಯಲ್ಲಿ ಈ ರಹಸ್ಯ ರಹಸ್ಯವಾಗಿಯೇ ಉಳಿಯಲು ಬಿಟ್ಟಿವೆ. ಇದೇ ಇಂದು ಕಿಮ್ ಡೆವಿಯ ಆಪಾದನೆಗಳನ್ನು ನಂಬಬಹುದೇನೋ ಎಂಬುವಂತೆ ಮಾಡಿದೆ.

ಕಾಂಗ್ರೆಸ್ ಅಲ್ಪತನದ ಪ್ರದರ್ಶನ

ಶಸ್ತ್ರಾಸ್ತ್ರಗಳನ್ನು ಉದುರಿಸಿ ಹೋದ ಈ ಘಟನೆ ಭಾರತದ ಭದ್ರತೆಗೆ ಗಂಭೀರ ಬೆದರಿಕೆ ಒಡ್ಡಿದಂತದ್ದು ಎಂಬ ಸಂಗತಿ ಒತ್ತಟ್ಟಿಗಿರಲಿ, ಆಗಿನ ಕಾಂಗ್ರೆಸ್ ಕೇಂದ್ರ ಸರಕಾರದ (ಮಾಡಬೇಕಾದ್ದನ್ನು ಮಾಡದೆ, ಮಾಡಬಾರದ್ದನ್ನು ಮಾಡಿದ) ಗಂಭೀರ ಲೋಪಗಳನ್ನು ಉಪೇಕ್ಷಿಸಿ, ಇಂದು ಕಾಂಗ್ರೆಸ್ ಪಕ್ಷ ತನ್ನ ಎಂದಿನ ಅಲ್ಪತನವನ್ನು ಪ್ರದರ್ಶಿಸುತ್ತ, ತೃಣಮೂಲ ಕಾಂಗ್ರೆಸಿನೊಂದಿಗೆ ಅದರ ಮೈತ್ರಿಯನ್ನು ಕೆಡಿಸಲು ಈ ಸಮಯದಲ್ಲೇ ಈ ಆಪಾದನೆಗಳನ್ನು ಮಾಡಲಾಗಿದೆ ಎಂದು ಬೊಬ್ಬೆ ಹಾಕುತ್ತಿದೆ. ಈ ಆಪಾದನೆಗಳನ್ನು ಬಯಲು ಮಾಡಿದ ಇಲೆಕ್ಟ್ರಾನಿಕ್ ಮಾಧ್ಯಮ ವಾಹಿನಿಯ ಪ್ರಕಾರವೇ, ಡೆವಿಯ ಈ ಆಪಾದನೆಗಳು ಪ್ರಕಟವಾಗಿರುವುದು ಭಾರತ ಸರಕಾರ ಆತನನ್ನು ವಿಚಾರಣೆಗೆ ಒಪ್ಪಿಸುವಂತೆ ಮಾಡುತ್ತಿದ್ದ ಪ್ರಯತ್ನಗಳು ಫಲಕಾರಿಯಾಗುತ್ತಿರುವ ಸಂದರ್ಭದಲ್ಲಿ. ಎಪ್ರಿಲ್ 27 ರ ಮಾಧ್ಯಮ ವರದಿಗಳ ಪ್ರಕಾರ, ಇಂಟರ್‌ಪೋಲ್ ಡೆನ್ಮಾರ್ಕ್ ಅಧಿಕಾರಿಗಳು ಪುರುಲಿಯದಲ್ಲಿ ಶಸ್ತ್ರಾಸ್ತ್ರಗಳನ್ನು ಉದುರಿಸಿ ಹೋದ ಪ್ರಕರಣದ ಹಿಂದಿನ ಕಟ್ಟಾಳು ಕಿಮ್ ಡೆವಿಯನ್ನು ವಿಚಾರಣೆಗೆ ಭಾರತಕ್ಕೆ ಒಪ್ಪಿಸಲು ನಿರ್ಧರಿಸಿದೆ ಎಂದು ಸಿಬಿಐಗೆ ಮಾಹಿತಿ ನೀಡಿತ್ತು.

ಭಾರತದ ಭದ್ರತೆಯ ಹಿತದೃಷ್ಟಿಯಿಂದ, ಕಿಮ್ ಡೆವಿಯನ್ನು ಭಾರತಕ್ಕೆ ಒಪ್ಪಿಸಿ, ಆತನನ್ನು ಭಾರತೀಯ ಕೋರ್ಟ್‌ಗಳ ಮುಂದೆ ವಿಚಾರಣೆಗೆ ಹಾಜರು ಪಡಿಸಿ, ಸೂಕ್ತ ಶಿಕ್ಷೆ ವಿಧಿಸುವುದು ಅತ್ಯಗತ್ಯ. ಆಗ ಸಂಭವಿಸಿದ ವಿವಿಧ ಲೋಪಗಳ ತನಿಖೆಯಾಗುವುದು, ಹಾಗೂ ಆಗಿನ ಕಾಂಗ್ರೆಸ್ ಸರಕಾರದ ಶಾಮೀಲಿನ ಪ್ರಶ್ನೆಗೆ ಸಂಬಂಧಪಟ್ಟಂತೆ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಪಿಟರ್ ಬ್ಲೀಚ್‌ನಿಗೆ ರಾಷ್ಟ್ರಪತಿಗಳ ಕ್ಷಮಾದಾನ ನೀಡುವಂತಾದ ಸಂದರ್ಭಗಳ ಬಗ್ಗೆ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಗುಂತಾಗುವುದು ಕೂಡ ಭಾರತೀಯ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಅಷ್ಟೇ ಮಹತ್ವದ್ದು. ಈ ಎಲ್ಲ ಅಂಶಗಳನ್ನು ಕುರಿತ ಒಂದು ನ್ಯಾಯಾಂಗ ತನಿಖೆಯನ್ನು ತಕ್ಷಣವೇ ನಡೆಸಿ ಇದನ್ನು ಮಾಡಬೇಕಾಗಿದೆ. ನಮ್ಮ ಸಂವಿಧಾನಿಕ ಪ್ರಣಾಳಿಯನ್ನು ಬುಡಮೇಲು ಮಾಡುವ ಯಾವುದೇ ಪ್ರಯತ್ನಕ್ಕೆ ಅವಕಾಶವೂ ಇರಬಾರದು, ಅನುಮತಿಯೂ ಇರಬಾರದು.

('ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮೇ6 2009ರ ಸಂಪಾದಕೀಯ ಆಧರಿಸಿ.)

ಹದಿನೈದು ವರ್ಷಗಳ ಹಿಂದಿನ ಈ ಕಥೆ

ಡಿಸೆಂಬರ್ 17, 1995

ಲ್ಯಾಟಿವಿಯಾದ ವಿಮಾನ ಆಂಟನೊವ್ ಎಎನ್ 26 ಪಾಕಿಸ್ತಾನದ ಕರಾಚಿಯಿಂದ ಹೊರಟು ವಾರಣಾಸಿ ಮತ್ತು ಕೊಲ್ಕತಾ ಮೂಲಕ ಥಾಯ್ಲೆಂಡಿನ ಫುಕೇತ್‌ಗೆ ಹೋಗುವ ಅನುಮತಿ ಪಡೆದಿದ್ದು ದಾರಿಯಲ್ಲಿ ವಾರಣಾಸಿಯಲ್ಲಿ ಇಳಿಯುತ್ತದೆ- ಇಂಧನ ತುಂಬಿಸಿಕೊಳ್ಳಲೆಂದು. ಅದರಲ್ಲಿ ಇದ್ದವರು ಐದು ಮಂದಿ ಸಿಬ್ಬಂದಿಯೂ ಸೇರಿದಂತೆ ಎಂಟು ಮಂದಿ.

ವಾರಣಾಸಿಯಲ್ಲಿ ತಂಗಿದ್ದ ಏಳು ಗಂಟೆಗಳಲ್ಲಿ ಶಸ್ತ್ರಾಸ್ತ್ರಗಳು ತುಂಬಿದ್ದ ಪೆಟ್ಟಿಗೆಗಳನ್ನು ಕಾರ್ಗೊ ಪ್ಯಾರಾಚೂಟ್‌ಗಳಿಗೆ ಕಟ್ಟಲಾಯಿತು. ಇಷ್ಟು ಸಮಯವಾದರೂ, ಭಾರತ ಸರಕಾರಕ್ಕೆ ಎಂಐ 5ರಿಂದ ವಿಮಾನದಿಂದ ಶಸ್ತ್ರಾಸ್ತ್ರ ಉದುರಿಸುವ ಸಾಧ್ಯತೆಯ ಸಂದೇಶ ಬಂದಿದ್ದರೂ, ಏಳು ಗಂಟೆ ನಿಂತಿದ್ದ ಈ ವಿಮಾನವನ್ನು ವಶಪಡಿಸಿಕೊಳ್ಳುವ ಪ್ರಯತ್ನ ನಡೆಯಲಿಲ್ಲ.

ಡಿಸೆಂಬರ್ 18, 1995ರ ನಸುಕು

ವಾರಣಾಸಿಯಿಂದ ಮೇಲೇರಿ ಕೊಲ್ಕತಾದ ದಾರಿಯಲ್ಲಿ ಹೋಗಬೇಕಾಗಿದ್ದ ವಿಮಾನ ದಾರಿ ಬದಲಿಸಿ ಪುರುಲಿಯ ಜಿಲ್ಲೆಯ ಝಲ್ದಾ ಸಮೀಪಿಸುತ್ತದೆ. ಆದರೆ ಭಾರತೀಯ ವಿಮಾನ ಪಡೆಯ ಸ್ಥಳೀಯ ರಾಡಾರ್ ಅದನ್ನು ಪತ್ತೆ ಹಚ್ಚುವುದಿಲ್ಲ. ಝಲ್ದಾದಲ್ಲಿ ಶಸ್ತ್ರಾಸ್ತ್ರ ಪೆಟ್ಟಿಗೆಗಳನ್ನು ಭೂಮಿಗೆ ಉದುರಿಸಿ ಮತ್ತೆ ಕೊಲ್ಕತಾದ ದಾರಿಗೆ ಹಿಂದಿರುಗುತ್ತದೆ. ಅಲ್ಲಿಂದ ಫುಕೇತ್‌ಗೆ ಹೋಗುತ್ತದೆ.

ಡಿಸೆಂಬರ್ 19–21, 1995

ಥಾಯ್ಲೆಂಡಿನ ಪುಕೇತ್‌ನಲ್ಲಿ ಮೂರು ದಿನಗಳ ಠಿಕಾಣಿ. ಈ ನಡುವೆ ಪುರುಲಿಯಾದಲ್ಲಿ ಶಸ್ತ್ರಾಸ್ತ್ರಗಳು ಕಾಣಿಸಿಕೊಂಡದ್ದರಿಂದ ಈ ವಿಮಾನದ ಬಗ್ಗೆ ಐಬಿ ಎಲ್ಲ ವಿಮಾನ ನಿಲ್ದಾಣಗಳಿಗೆ ಎಚ್ಚರಿಕೆ ಸಂದೇಶ ಮತ್ತು ವಿವರಗಳನ್ನು ತಿಳಿಸುತ್ತದೆ. ಇಂತಹ ಒಂದು ವಿಮಾನಕ್ಕೆ ಫುಕೇತ್ ನಿಂದ ಕರಾಚಿಗೆ ಹಿಂದಿರುಗುವ ದಾರಿಯಲ್ಲಿ ಕೊಲ್ಕತಾದ ಮೂಲಕ ಹೋಗಲು ಭಾರತ ಸರಕಾರದ ನಾಗರಿಕ ವಿಮಾನಯಾನ ಮಹಾನಿರ್ದೇಶಕರು ಅನುಮತಿ ನೀಡಿದ ಬಗ್ಗೆ ತಿಳಿಯುತ್ತದೆ.

ಡಿಸೆಂಬರ್ 22, 1995

ಅಷ್ಟರಲ್ಲಿ ಬಂಗಾಳ ಕೊಲ್ಲಿಯಲ್ಲಿ ಬಿರುಗಾಳಿಯಿಂದಾಗಿ ಹಾರಾಟ ಯೋಜನೆ ಬದಲಾಗಿ ಚೆನ್ನೈಗೆ ಆ ವಿಮಾನ ಹಾರಾಟ ನಡೆಸಿರುತ್ತದೆ. ಆದರೆ ಅದು ಇನ್ನೂ ಭಾರತದ ವಾಯುಪ್ರದೇಶದಲ್ಲಿ ಇದ್ದುದರಿಂದ ಭಾರತೀಯ ವಾಯುಪಡೆಯಿಂದ ಮುಂಬೈಯ ಸಹಾರ ವಿಮಾನ ನಿಲ್ದಾಣಕ್ಕೆ ಎಚ್ಚರಿಕೆ ಸಂದೇಶ- ಒಂದು ವಿಮಾನ ಸೂಕ್ತ ಅನುಮತಿಯಿಲ್ಲದೆ ಭಾರತೀಯ ವಾಯುಪ್ರದೇಶದಿಂದ ಹೋಗುತ್ತಿದೆ ಎಂದು. ಮುಂಬೈ ವಿಮಾನ ನಿಲ್ದಾಣದ ಟವರಿನಿಂದ ಕೆಳಗಿಳಿಯುವಂತೆ ವಿಮಾನಕ್ಕೆ ಆದೇಶ. ಮುಂಬೈ ಕಸ್ಟಮ್ಸ್ ಅಧಿಕಾರಿಗಳು ಬ್ಲೀಚ್ ಸೇರಿದಂತೆ ಆರು ಮಂದಿಯನ್ನು ವಶಕ್ಕೆ ತಗೊಳ್ಳುತ್ತಾರೆ. ಆದರೆ ಕಿಮ್ ಡೆವಿ ಕಾಣೆ. ಗೋಡೆ ಹಾರಿ ಪರಾರಿಯಾದ, ಈ ಕಾರ್ಯಾಚರಣೆಯ-ಭಾರತೀಯ ಸೂತ್ರಧಾರ, ಒಬ್ಬ ಸಂಸತ್ ಸದಸ್ಯ ತನಗೆ ಇದರಲ್ಲಿ ನೆರವಾದ ಎನ್ನುತ್ತಾನೆ ಈಗ ಡೆವಿ.

ಪೀಟರ್ ಬ್ಲೀಚ್ ಮತ್ತು ಇತರ ಐದು ಲ್ಯಾಟಿವಿಯನ್ ಸಿಬ್ಬಂದಿಯ ವಿಚಾರಣೆ ನಡೆದು 1997ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಗುತ್ತದೆ. ಪರಾರಿಯಾದ ಕಿಮ್ ಡೆವಿಯ ವಿರುದ್ಧ ಇಂಟರ್‌ಪೋಲ್ ನೋಟೀಸ್ ಜಾರಿ ಮಾಡುತ್ತದೆ. ಈ ನಡುವೆ ಲ್ಯಾಟಿವಿಯನ್ ಸಿಬ್ಬಂದಿ ರಶ್ಯನ್ ನಾಗರಿಕತ್ವ ಪಡೆಯುತ್ತದೆ ಹಾಗೂ 2000ದಲ್ಲಿ ರಶ್ಯನ್ ಸರಕಾರದ ಕೋರಿಕೆಯ ಮೇರೆಗೆ ಅವರಿಗೆ ಕ್ಷಮಾದಾನ ನೀಡಲಾಗುತ್ತದೆ. ಆದರೆ ಪಿಟರ್ ಬ್ಲೀಚ್‌ಗೆ ಕ್ಷಮಾದಾನ ಕೊಡುವುದಿಲ್ಲ ಎಂದು ಹೇಳಲಾಗುತ್ತದೆ. ಆದರೂ ಎನ್‌ಡಿಎ ಸರಕಾರ 2004ರಲ್ಲಿ ಆತನಿಗೂ ಕ್ಷಮಾದಾನ ನೀಡುತ್ತದೆ.

2007ರಲ್ಲಿ ಡೆನ್ಮಾರ್ಕಿನ ಅಧಿಕಾರಿಗಳು ಡೆವಿಯ ಪತ್ತೆ ಹಚ್ಚುತ್ತಾರೆ. ಆತನನ್ನು ಭಾರತಕ್ಕೆ ಒಪ್ಪಿಸುವ ಬಗ್ಗೆ ಮಾತುಕತೆಗಳು ಆರಂಭವಾಗಿ 2008ರಲ್ಲಿ ಡೆನ್ಮಾರ್ಕ್ ಸರಕಾರ ಅದಕ್ಕೆ ಒಪ್ಪುವ ಸಾಧ್ಯತೆ ಕಂಡು ಬರುತ್ತದೆ. ಆದರೆ ಇನ್ನೂ ಅದು ಅಂತಿಮ ಸ್ವರೂಪ ಪಡೆದಿಲ್ಲ.

"ಜಗತ್ತಿನ ಎಲ್ಲಾ ಕಾರ್ಮಿಕರೊಂದಿಗೆ ನಮ್ಮ ಸಂಭ್ರಮ"

ಇದು ತುರ್ಕಿಯ ರಾಜಧಾನಿ ಇಸ್ತಾನ್ ಬುಲಿನ ಪ್ರಸಿದ್ಧ ತಕ್ಸಿಮ್ ಚೌಕದತ್ತ ನೆರೆದ ಎರಡು ಲಕ್ಷ ಕಾರ್ಮಿಕರ ಮೆರವಣಿಗೆಯ ಮಧ್ಯೆ ಇದ್ದ ಭಾರೀ ಬ್ಯಾನರು ಸಾರುತ್ತಿದ್ದ ಜಗದಗಲಕ್ಕೂ ಮೊಳಗಿದ ಸಂದೇಶ. 1977ರ ನಂತರ ಅತಿ ದೊಡ್ಡದು ಎನ್ನಲಾದ ಕಾರ್ಮಿಕರ ಮೆರವಣಿಗೆ ಈ ಬಾರಿ ಜಗತ್ತಿನ ಗಮನ ಸೆಳೆಯಿತು. ಇನ್ನುಳಿದಂತೆ ಬಾಗ್ದಾದಿನಲ್ಲಿ ಇರಾಕಿ ಕಮ್ಯುನಿಸ್ಟ್ ಪಕ್ಷ ಮತ್ತು ಈಜಿಪ್ಟಿನ ಕೈರೋದ ತೆಹ್ರಿರ್ ಚೌಕದಲ್ಲಿ ನಡೆದ ಮೇ ದಿನದ ಮೆರವಣಿಗೆಗಳು ಗಮನ ಸೆಳೆದವು. ತೆಹ್ರಿರ್ ಚೌಕದಲ್ಲಿ ವರ್ಕರ್ಸ್ ಡೆಮೊಕ್ರಾಟಿಕ್ ಪಾರ್ಟಿ, ಈಜಿಪ್ಶಿಯನ್ ಕಮ್ಯುನಿಸ್ಟ್ ಪಾರ್ಟಿ (1921 ಮೇದಿನದಂದು ಸ್ಥಾಪಿತವಾದ್ದರಿಂದ ಅದರ 90 ನೇ ಸ್ಥಾಪನಾ ದಿನ ಸಹ) ಮತ್ತು ಫೆಡರೇಶನ್ ಆಫ್ ಇಂಡಿಪೆಂಡೆಂಟ್ ಟ್ರೇಡ್ ಯೂನಿಯನುಗಳು ಭಾಗವಹಿಸಿದ್ದು ಚಾರಿತ್ರಿಕವಾಗಿತ್ತು. ಇಲ್ಲಿವೆ ಜಗದಗಲದಲ್ಲಿ ಕಾರ್ಮಿಕರ ಸಂಭ್ರಮದ ಒಂದು ಝಲಕ್.

– ಶರತ್ ಚಂದ್ರ



ಅಮೆರಿಕದ ಸಿಯಾಟಲಿನಲ್ಲಿ ಬೃಹತ್ ಕಾರ್ಮಿಕರ ಪ್ರದರ್ಶನ



ಈಜಿಪ್ಟಿನ ಕೈರೋದ ತಹ್ರಿರ್ ಚೌಕದಲ್ಲಿ ಕಾರ್ಮಿಕರು



ಇಸ್ತಾನ್ ಬುಲಿನ ತಕ್ಸಿಮ್ ಚೌಕದಲ್ಲಿ ಕಾರ್ಮಿಕರ ಬೃಹತ್ ಮೆರವಣಿಗೆ



ಕ್ಯೂಬಾದ ಹವಾನಾದಲ್ಲಿ ಸೈನಿಕರು ಮಂಚೂಣಿಯಲ್ಲಿ ಪಥಸಂಚಲನ



ಇರಾಕಿನ ಬಾಗ್ದಾದಿನಲ್ಲಿ ಕಾರ್ಮಿಕರ ಮೆರವಣಿಗೆ



ಇಂಡೋನೇಶ್ಯಾದ ಜಕಾರ್ತಾದಲ್ಲಿ ಕಾರ್ಮಿಕರ ಕಲರವ



"ರಕ್ತ ಕಣ್ಣೀರು" ಸುರಿಸುತ್ತಿರುವ ಮಹಿಳೆ ದಕ್ಷಿಣ ಕೊರಿಯಾದ ಕಾರ್ಮಿಕರ ಜಾಥಾದಲ್ಲಿ



ಸ್ಪೈನಿನ ಮ್ಯಾಡ್ರಿಡಿನಲ್ಲಿ "ಹಕ್ಕುಗಳ ಜತೆ ಉದ್ಯೋಗ, ಸಾಮಾಜಿಕ ಕಡಿತಗಳ ವಿರುದ್ಧ" ಒತ್ತಾಯಕ್ಕೆ ಕಾರ್ಮಿಕರ ಜಾಥಾ



"ಕನಿಷ್ಟ ವೇತನ ಕಾನೂನು" ಮತ್ತು "ಕಾರ್ಮಿಕರ ಹಕ್ಕು ಮಾನವ ಹಕ್ಕು" ಒತ್ತಾಯಿಸಿ ಮಲೇಶ್ಯಾದ ಕೌಲಲಂಪೂರಿನಲ್ಲಿ ಬೀದಿಗಿಳಿದ ಕಾರ್ಮಿಕರು



ಥಾಯಲ್ಯಾಂಡಿನಲ್ಲಿ ಕಾರ್ಮಿಕ ಸ್ವಯಂಸೇವಕರ ಶಿಸ್ತಿನ ಮೆರವಣಿಗೆ



ಲಂಡನಿನಲ್ಲಿ ಸ್ಟಾಲಿನ್ ಭಾವಚಿತ್ರದೊಂದಿಗೆ ಭಾರೀ ಮೆರವಣಿಗೆ



ಪಾಕಿಸ್ತಾನದ ಲಾಹೋರಿನಲ್ಲಿ "ಕಾರ್ಮಿಕರ ಹಕ್ಕು ಮಾನವ ಹಕ್ಕು" ಎಂದು ಆಳರಸರಿಗೆ ನೆನಪಿಸುತ್ತಿರುವ ಮಹಿಳಾ ಕಾರ್ಮಿಕರು

JANASHAKTHI KANNADA VARA PATRIKE: Printed by **G.N.NAGARAJ**, No 12. 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and Printed at : **Kriya Prakashana**, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027
Editor: **S.Y.GURUSHANTH**